Hon. Member can participate in the discussion on the subject that is under consideration.

ಶ್ರೀ ಶರಣಗೌಡ ಇನಾಂದಾರ್.—ಗುಲ್ಬರ್ಗ ಎಂ.ಎಸ್.ಕೆ. ಮಿಲ್ಲಿನಲ್ಲಿ 11ನೇ ತಾರೀಖು ಆದ ಫೈರಿಂಗ್ ಬಗ್ಗೆ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದೆ. ಅದು ಏನಾಯಿತು ?

Mr. SPEAKER.—The hon. Member was advised to give a call attention notice on the matter.

Sri H. M. CHANNABASAPPA.—I want to bring to your kind notice that I moved yesterday a privilege motion. May I know what has happened to that ?

Mr. SPEAKER.—Probably I was not in the Chair. I just learnt this morning that our Deputy Speaker had stated that he would go through the records and give a ruling. I will just look into it and give a ruling on it.

Motion to consider the situation arising out of the move of the Central Government in respect of the Mahajan Commission Report deviating from the Recommendations to the detriment of the Mysore State (And Substitute Motion by Sriyuths M. Nagappa and H. N. Nanje Gowda.)

(Debate Continued)

Mr. SPEAKER.—I have received four more substitute motions to-day in addition to two that have already been moved. I request the hon. Members to move these four motions in order in which they were received in my Office. Hon. Member Sri H. Siddaveerapp's motion was moved first. Let him move his motion.

Sri H. SIDDAVEERAPPA (Harihara).—I beg to move :

> " That in view of the serious tension and unhealthy controversies that have developed in the country on the Mysore-Maharastra Border issue, this House is of opinion that it is expedient and in the interest of the country to stick to status quo already established under the provisions and procedures for adjustments as provided in the States Reorganisation Act, 1956 ".

Mr. SPEAKER.—Substitute motion moved :

> " That in view of the serious tension and unhealthy controversies that have developed in the country on the Mysore-Maharashtra Border issue, this House is of opinion that it is expedient and in the interest of the country to stick to status quo already established under the provisions and procedures for adjustments as provided in the States Reorganisation Act, 1956 ".

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ನಿರ್ಣಯವನ್ನು ಸಭೆಯ ಮುಂದೆ ಇಡಲಿಕ್ಕೆ ತಮ್ಮ ಅನುಮತಿಯನ್ನು ಕೋರುತ್ತೇನೆ :

"ಮಹಾಜನ್ ಆಯೋಗದ ವರದಿಯ ಬಗ್ಗೆ ಕೇಂದ್ರ ಸರಕಾರವು ತಳೆದಿರುವ ಇತ್ತೀಚಿನ ನಿಲುವು ಮತ್ತು ಅದರ ಪ್ರಕಾರ ಪರಿಶೀಲಿಸುತ್ತಿರುವ ಸೂಚನೆಗಳು ಮೈಸೂರು ರಾಜ್ಯದ ಹಿತಾಸಕ್ತಿಗಳಿಗೆ ಭಾರೀ ಬಾಧಕವಾಗಿರುವುದನ್ನು ಅತ್ಯಂತ ವಿವಂಚನೆಯಿಂದ ಗಮನಿಸುತ್ತ,

ಮತ್ತು ಆಯೋಗದ ಶಿಫಾರಸುಗಳನ್ನು ಕೂಡಲೆ ಜಾರಿಗೆ ತರಬೇಕೆಂದು ಈ ಸಭೆಯು 1967ರ ಡಿಸೆಂಬರ್ 15 ರಂದು ಸ್ವೀಕರಿಸಿದ ಸೂಚನೆಯನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳುತ್ತ,

ಈ ಮೂಲಕ ತನ್ನ ಮುಂಚಿನ ನಿರ್ಣಯವನ್ನು ಪುನರ್ದೃಢೀಕರಿಸುವುದೇನೆಂದರೆ—ಆಯೋಗದ ಶಿಫಾರಸುಗಳನ್ನು ಮೈಸೂರು-ಮಹಾರಾಷ್ಟ್ರಗಡಿಯ ವಿವಾದದ ಮಟ್ಟಿಗೆ ಮಾತ್ರವಲ್ಲ, ಕೇರಳ ಮತ್ತು ಮೈಸೂರು ಗಡಿ ವಿವಾದದ ಸಂದರ್ಭವಲ್ಲಿಯೂ ಕೂಡ ಐತೀರ್ಪಿನಂತೆ ಕಾರ್ಯಗತಗೊಳಿಸಬೇಕು ;

ಮತ್ತು ಶಿಫಾರಸು ಮಾಡುವುದೇನೆಂದರೆ ಈ ಪ್ರಶ್ನೆಯ ಬಗ್ಗೆ ಜನಮನದಲ್ಲಿ ಉಂಟಾಗಿರುವ ಕ್ಷೋಭೆ ಹಾಗೂ ರಾಜ್ಯದಲ್ಲಿ ಉದ್ಭವಿಸಿರುವ ಪ್ರಕ್ಷುಬ್ಧ ಪರಿಸ್ಥಿತಿ ಮತ್ತು ಆಯೋಗದ ಶಿಫಾರಸುಗಳಿಗೆ ವ್ಯತಿರಿಕ್ತವಾಗಿ ನಿರ್ಣಯವಾದರೆ ಸಂಭವಿಸಬಹುದಾದ ದಾರುಣ ಪರಿಣಾಮಗಳ ಕುರಿತು ಕೇಂದ್ರ ಸರಕಾರಕ್ಕೆ, ಸಂಸತ್ ಸದಸ್ಯರಿಗೆ ಮತ್ತು ಸಂಬಂಧಪಟ್ಟವರಿಗೆ ದೆಹಲಿಗೆ ಹೋಗಿ ಮನವರಿಕೆ ಮಾಡಿಕೊಡಲು ಸರ್ವ ಪಕ್ಷಗಳನ್ನು ಪ್ರತಿನಿಧಿಸುವ ಆಯೋಗವೊಂದನ್ನು ರಚಿಸಬೇಕು."

Mr. SPEAKER.—Substitute motion moved :

"That this House, viewing with grave concern the latest attitude of the Union Government towards the Report of the Mahajan Commission and the proposals they are reported to be considering thereon, being highly prejudicial to the State of Mysore ;

and taking note of the motion adopted by this House on 15th December 1967 that the recommendations of the Commission should be immediately implemented ;

hereby reiterates its earlier decision that the Report should be implemented as an award not only in respect of the areas under dispute between Maharashtra and Mysore States but also of areas in dispute between Mysore and Kerala States ;

and recommends that a delegation consisting of members representing all the parties in the House should be set up, to proceed to Delhi and apprise the Union Government and Members of Parliament of the views of the House, the strong feelings of the people and the tense situation prevailing in the State on this issue, and of the serious consequences which would follow upon any decision which is not in consonance with the recommendations of the Commission."

Sri S. R. BOMMAI (Kundgol).—I beg to move :

"That the latest moves made by Government of India to resolve the boundary disputes between the States of Mysore and Maharashtra completely ignorning the verdict given and

recommendations made by Mahajan Commission have caused great anxiety and tension amongst people of Mysore State and therefore this House reiterates its resolution that the Central Government should implement the recommendations of the Mahajan Commission in its entirety and recommends to the Government of Mysore to send an all party delegation to Government of India as early as possible to protect the legitimate rights and interests of the people of the Mysore State."

Mr. SPEAKER.—Substitute motion moved :

"That the latest moves made by Government of India to resolve the boundary disputes between the States of Mysore and Maharashtra completely ignoring the verdict given and recommendations made by Mahajan Commission have caused great anxiety and tension amongst people of Mysore State and therefore this House reiterates its resolution that the Central Government should implement the recommendations of the Mahajan Commission in its entirety and recommends to the Government of Mysore to send an all party delegation to Government of India as early as possible to protect the legitimate rights and interests of the people of the Mysore State."

Sri M. S. KRISHAN.—My substitute motion was given even before the discussion took place. Some of the points raised in my Substitute motion are covered in the motion of Sri Gopala Gowda, hence I do not propose to move my motion.

Sri L. SRIKANTIAH (Nanjangud).—I beg to move :

"That this House reiterates its faith in the settlement of all inter-state boundary disputes on democratic principles. And whereas several disputes still remain unresolved and it is in the interest of all to settle all such disputes early, it is recommended that all such disputes of whatever character and such other matters as may become necessary to ensure that the reorganisation effected in 1956 has been done on proper lines, a High Powered Commission be appointed to go into these questions and the award of the Commission, after consideration, shall be final subject, however, to the ratification of the Parliament. The Parliament may ratify the award in *toto* or only portions of the award. And it is further recommended that pending consideration of these by a High Powered Commission, the existing status quo be maintained."

Mr. SPEAKER.—The substitute motion moved:

"That this House reiterates its faith in the settlement of all inter-state boundary disputes on democratic principles. And

(MR. SPEAKER)

whereas several disputes still remain unresolved and it is in the interest of all to settle all such disputes early, it is recommended that all such disputes of whatever character and such other matters as may become necessary to ensure that the reoganisation effected in 1956 has been done on proper lines, a High Powered Commission be appointed to go into these questions and the award of the Commission, after consideration, shall be final subject, however, to the ratification of the Parliament. The Parliament may ratify the award in *toto* or only portions of the award. And it is further recommended that pending consideration of these by a High Powered Commission, the existing status quo be maintained."

Now, I call the Hon. Members who moved the substitute motions to offer their remarks. My only request to the hon. Members is that they should be as brief as possible without omitting any relevant points.

Sri M. S. KRISHNAN.—Sir, may I know whether you will permit me also to offer my remarks, although I have withdrawn my substantive motion ?

Mr. SPEAKER.—The hon. Member may also speak. I shall try to accommodate all those who want to participate in the Debate.

Sri H. M. CHANNABASAPPA.—Sir, I beg to move a motion of privilege against the Chief Minister on the statement made by him.

Sri K. PUTTASWAMY.—Sir, on a Point of Order. Sir, what the hon. Member Sri Channabasappa is stating is thoroughly irrelevant, and therefore, he shall not be permitted.

Mr. SPEAKER.—The hon. Member should have moved the motion immediately after Question Hour and before the regular proceedings as per the Agenda commenced. Now if the hon. Member gives a notice, I shall consider it.

Sri H. M. CHANNABASAPPA.—There are precedents that in view of the situation it is open to a member to raise a motion of privilege just as and when it arise. Therefore, I am perfectly in order.

Mr. SPEAKER.—I uphold the Point of Order raised by the Hon. Minister for Parliamentary Affairs.

Sri H. M. CHANNABASAPPA.—Sir, I respect your Ruling. I appeal to you, Sir, that rulings must be given in consonance with precedents.

Mr. SPEAKER.—I call upon the hon. Member Sri Siddaveerappa to begin his speech. I request him to be as brief as possible and this is my request to all the other hon. Members.

ಶ್ರೀ ಬಿ. ಪಿ. ಗಂಗಾಧರ್.—ಪಾರ್ಟಿ ಲೀಡರ್ಸ್ ಅಭಿಪ್ರಾಯ ಮಹತ್ವದ್ದು ಅವರು ಮಾತನಾಡಲು ಟೈಂ ಲಿಮಿಟ್ ಇಲ್ಲ ಎಂದು ಹೇಳಿದಿರಿ. ಸದಸ್ಯರ ಅಭಿಪ್ರಾಯ ಮಹತ್ವದ್ದು ಅಲ್ಲವೇ? ಮಾತನಾಡಲು ಎಷ್ಟು ಅವಕಾಶ ಕೊಡುತ್ತೀರಿ ಹೇಳಿಬಿಟ್ಟರೆ ಒಳ್ಳೇದು ಆಗುತ್ತದೆ.

Mr. SPEAKER.—All are responsible members and I am sure they will bear this in mind.

Sri H. SIDDAVEERAPPA.—Sir, this is an important matter which is now before this House in the form of several motions that we are now considering. Hon. Members who have given notice of this motion have stated the substance of their respective motions. If we see the happenings in this State from the time of the Report, States Reorganisation Commission, and from the time this new State came into being, *i.e.*, from 1st November 1956.

ಶ್ರೀಮತಿ ಚಂಪಾಬಾಯಿ ಭೋಗಲೆ (ಕಾಗವಾಡ).—ಇದು ಮಹಾಜನ್ ಕಮಿಷನ್ ರಿಪೋರ್ಟ್‌ಗೆ ಸಂಬಂಧಪಟ್ಟ ಚರ್ಚೆಯಾಗಿರುವುದರಿಂದ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ದಯವಿಟ್ಟು ಕನ್ನಡದಲ್ಲಿ ಮಾತನಾಡಬೇಕು ಎಂದು ನಾನು ಅವರನ್ನು ಕೇಳಿ ಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಇದು ಬಹು ಮಹತ್ತರವಾದ ವಿಷಯ. 1-11-1956 ನೇ ಇಸವಿಯಿಂದ ನಮ್ಮ ರಾಜ್ಯ ವಿಸ್ತರಣೆಯಾದಮೇಲೆ, ನಮ್ಮ ರಾಜ್ಯ ಎರಡರಷ್ಟು ಹೆಚ್ಚಾದಮೇಲೆ ಒಂದಲ್ಲ ಒಂದು ರೀತಿಯಲ್ಲಿ ಹೆಡಂಭೂತವಾಗಿ ನಮ್ಮನ್ನು ಕಾಡುತ್ತಿದೆ. 16-11-1955 ರಲ್ಲಿ ಈ ಸಭೆಯ ಮುಂದೆ ಸ್ಟೇಟ್ಸ್ ರೀ ಆರ್ಗನೈಜೇಷನ್ ಕಮಿಷನ್ ರಿಪೋರ್ಟ್ ಚರ್ಚೆಗೆ ಬಂದಾಗ್ಗೆ ನಾನು ಒಂದು ವಿಷಯ ಹೇಳಿದೆ ಅದನ್ನು ತಮ್ಮ ಗಮನಕ್ಕೆ ತರುತ್ತೇನೆ.

> "I feel, Sir, today we are living in a disturbed atmosphere. I think, it will be temporary and a passing phase."

ಈಗ ಸುಮಾರು ಹದಿನಾಲ್ಕು ವರ್ಷಗಳು ಆಗಿದ್ದರೂ ಕೂಡ ಈ ಡಿಸ್ಟರ್ಬ್ಡ್ ಅಟ್‌ಮಾಸ್ಫಿಯರ್ ಅಂದರೆ ಅಶಾಂತ ವಾತಾವರಣ ಯಾವ ರೀತಿಯಿಂದಲೂ ಕಡಿಮೆಯಾಗಿಲ್ಲ. ಈ ಅಶಾಂತ ವಾತಾವರಣ ಇಮ್ಮಡಿ ಮುಮ್ಮಡಿಯಾಗಿದೆ. ಈ ರಾಜ್ಯದಲ್ಲಿ ಸೇರಿರತಕ್ಕಂಥ ಭಾಗಗಳು ಸೇರಿದ ಮೇಲೆ ಶಾಂತಿಯಿಂದ ಸುಖವಾಗಿ ಇರತಕ್ಕಂಥ ಸನ್ನಿವೇಶ ಕೂಡ ಬಂದಿಲ್ಲ.

> "This I am prompted to say for various reasons. After all, we have to realise that the formation of a new State is the sovereign right of the Parliament. We have a right to express our opinion; there is no doubt about it. Under Article 3 of the Constitution, when the question came before the Constituent Assembly it was suggested that for the word 'consultation' the word 'consent' may be introduced. I have the proceedings of the Constituent Assembly; I had the privilege to be present when Article 3 was discussed. After careful examination, the elders who framed the Constitution came to the conclusion that in the larger interest of this country it would be better that Parliament which is a sovereign authority representing all parts of India from Cape Comorin to Himalayas should have that sovereign right. I would like to say that there should be no room for suspicion that only two major communities are vitally interested in this problem."

ಇದನ್ನು ಏತಕ್ಕೋಸ್ಕರ ಹೇಳಿದೆ ಅಂದರೆ ಇದರಲ್ಲಿ ಇರತಕ್ಕಂಥ ವಿಷಯವನ್ನು ಆವೇಶಪೂರಿತವಾಗಿ ಯೋಚನೆ ಮಾಡದೆ ಯಾವುದಾದರೂ ಒಂದು ಸಮಗ್ರ ದೃಷ್ಟಿ ಇಟ್ಟುಕೊಂಡು ನಾವು ಈ ವಿಷಯವನ್ನು ಯೋಚನೆ ಮಾಡಬೇಕು. ಸ್ಟೇಟ್ಸ್ ರೀ ಆರ್ಗನೈಜೇಷನ್ ಆಕ್ಟ್ ಬಂದಾಗ್ಗೆ ಆವಾಗ ಏನು ಪರಿಸ್ಥಿತಿ ಇತ್ತು, ಆಗಿನ ಪರಿಸ್ಥಿತಿಗೆ ಅನುಸರಿಸಿ ಫಜಲಾಲಿ ರಿಪೋರ್ಟಿನಲ್ಲಿ ಬದಲಾವಣೆ ಮಾಡಿ, ಐದು ರಾಜ್ಯಗಳ ಐದು ಭಾಗಗಳಿಂದ ಸೇರಿದ ಈ ನಮ್ಮ ರಾಜ್ಯ ನಿರ್ಮಾಣ ಮಾಡಿದರು.

(ಶ್ರೀ ಎಚ್. ಸಿದ್ದವೀರಪ್ಪ)

2-30 P.M.

ಹಾಗೆ ರಾಜ್ಯಗಳ ನಿರ್ಮಾಣವಾದ ಮೇಲೆ ಅಂದಿನಿಂದ ಇಂದಿನವರಗೂ ಕೆಲವು ಭಾಗಗಳಲ್ಲಿ ಈ ಗಡೀ ಸಮಸ್ಯೆಯೆನ್ನುವುದು ಇನ್ನೂ ಹಾಗೇ ನಡೆದುಕೊಂಡು ಬರತ್ತಿದೆ ಎಂಬುದನ್ನು ನಾವು ನೋಡುತ್ತಲೇ ಬಂದಿದ್ದೇವೆ. ಆದರೆ ಈ ಗಡೀ ವ್ಯವಹಾರದಲ್ಲಿ ನಮಗೆ ಹೆಚ್ಚಿಗೆ ಕಾಣಿಸುತ್ತಿರುವುದು ಮೈಸೂರು-ಮಹಾರಾಷ್ಟ್ರ ಗಡಿ ವಿಚಾರ ಒಂದೇ. ಹೀಗೇ ಇನ್ನೂ ಅನೇಕ ಭಾಗಗಳಲ್ಲಿ ನಮಗೆ ಗಡೀ ಸಮಸ್ಯೆ ಇದ್ದೇ ಇದೆ. ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿದ್ದರೆ ನಾವೊಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಇಲ್ಲಿಗೆ 3—4 ವರ್ಷಗಳ ಹಿಂದೆ ಕೇಂದ್ರದಲ್ಲಿಯೂ ಮತ್ತು ಮಹಾರಾಷ್ಟ್ರದಲ್ಲಿಯೂ ಹಾಗೂ ಮೈಸೂರು ರಾಜ್ಯದಲ್ಲೂ ಈ ಮೂರು ಕಡೆಗಳಲ್ಲೂ ಒಂದೇ ಪಕ್ಷಕ್ಕೆ ಸೇರಿದ ಸರ್ಕಾರ ಆಡಳಿತದಲ್ಲಿತ್ತು. ಆದರೆ ಇಲ್ಲಿಯವರೆಗೂ ಯಾರನ್ನು ಈ ಕನ್ನಡ ನಾಡಿನ ಆರ್ಕಿಟೆಕ್ಟ್ ಅಥವಾ ನಿರ್ಮಾಪಕನೆಂದು ಕರೆಯಲಾಗುತ್ತಿತ್ತೋ ಅವರೇ ಇಲ್ಲಿಯವರೆಗೂ ನಮ್ಮ ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರು ಶ್ರೀಯುತ ನಿಜಲಿಂಗಪ್ಪನವರು. ಇದಾದ ನಂತರ ಅವರು ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರೂ ಆದರು. ಹೀಗೆ ಅವರು ಅಧಿಕಾರದಲ್ಲಿದ್ದ ಅವಧಿಯಲ್ಲೇ ಈ ಗಡೀ ಸಮಸ್ಯೆಗಳೆಲ್ಲಾ ಅಂದರೆ ಆ ರಾಜ್ಯಗಳ ಪುನರ್ವಿಂಗಡಣೆಯ ಆಯೋಗದವರು ತಮ್ಮ ವರದಿಯಲ್ಲಿ ಸೂಚಿಸಿದ್ದ ಪ್ರಕಾರ, ಸಣ್ಣ ಪುಟ್ಟ ಗಡೀ ಹೊಂದಾಣಿಕೆಗಳನ್ನು ಸುಲಭವಾಗಿ ತೀರ್ಮಾನವಾಡಿಬಿಡುತ್ತಾರೆಂದು ನಾವು ತಿಳಿದಿದ್ದೆವು. ನನಗೆ ಜ್ಞಾಪಕವಿದ್ದ ಹಾಗೆ ಜೋನಲ್ ಕೌನ್‌ಸಿಲ್ ಗಡೀವಿವಾದಗಳನ್ನು ತೀರ್ಮಾನ ಮಾಡಲು ರಾಜ್ಯಗಳ ಪುನರ್ವಿಂಗಡಣೆಯ ಆಕ್ಟಿನ 21ನೇ ಸೆಕ್ಷನ್ನಿನಲ್ಲಿ (ಕಾಲಂನಲ್ಲಿ) ಅದನ್ನು ಹೇಳಿದ್ದಾರೆ. ಆ ಸೆಕ್ಷನ್ನಿನಲ್ಲಿ ಈ ಗಡೀ ವಿವಾದಗಳನ್ನು ಯಾವರೀತಿ ತೀರ್ಮಾನ ಮಾಡಬೇಕೆಂಬುದನ್ನು ತಿಳಿಸಲಾಗಿದೆ. ಅದರಲ್ಲಿ ಯಾವ ಒಂದು ಸಂಶಯಕ್ಕೂ ಆಸ್ಪದವಿಲ್ಲ. ಆ ಜೋನಲ್ ಕೌನ್‌ಸಿಲ್ಲಿನ ಧ್ಯೇಯಧೋರಣೆಗಳೇನು ಎಂದರೆ :—

"In particular, without prejudice to the generality of the provisions of sub-section (1) the Zonal Council may discuss and make recommendations with regard to any matter of common interest in the field of economic and social planning and in matters concerning border disputes, linguistic minorities and inter-state transport ; and

(c) any other matter arising out of this Act."

ಎಸ್. ಆರ್. ಆಕ್ಟ್ ಪಾರ್ಲಿಯಮೆಂಟಿನಲ್ಲಿ ಪಾಸಾದಾಗ ಅಲ್ಲಿ ಏನೇನು ಚರ್ಚೆಗಳು ನಡೆದಿವೆ ಎನ್ನತಕ್ಕ ವರದಿಗಳೆಲ್ಲಾ ನನ್ನ ಬಳಿ ಇಲ್ಲಿರುತ್ತವೆ. ಆದರೆ ನನಗೆ ಸಾಕಷ್ಟು ಕಾಲಾವಕಾಶ ಇಲ್ಲದಿರುವ ಕಾರಣ ನಾನು ಅವುಗಳನ್ನೆಲ್ಲಾ ಈಗ ಓದುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಅಲ್ಲಿ ಚರ್ಚೆಯಾದ ಕಾಲಕ್ಕೆ ಈ ಗಡೀ ಸಮಸ್ಯೆಗಳು ಪುನಃ ಪುನಃ ತಲೆ ಎತ್ತದಂತೆ ಈ ಜೋನಲ್ ಕೌನ್‌ಸಿಲ್ಲುಗಳು ಕೆಲಸ ನಡೆಸಬೇಕೆಂದು ತಿಳಿಸಿರುತ್ತದೆ. ಮತ್ತು ಈ ನಮ್ಮ ಮೈಸೂರು ಮತ್ತು ಮಹಾರಾಷ್ಟ್ರ ಗಡೀ ಸಮಸ್ಯೆ ವೆಸ್ಟರ್ನ್ ಜೋನಲ್ ಕೌನ್‌ಸಿಲ್ಲಿಗೆ ಸೇರಿದೆ. ಆ ಜೋನಲ್ ಕೌನ್‌ಸಿಲ್ಲಿನಲ್ಲಿರತಕ್ಕ ರಾಜ್ಯಗಳೆಂದರೆ ಎರಡೇ ಎರಡು—ಒಂದು ಮೈಸೂರು ಮತ್ತು ಇನ್ನೊಂದು ಮಹಾರಾಷ್ಟ್ರ. ಆ ಕಾಲದಲ್ಲಿ ಈ ಎರಡು ರಾಜ್ಯಗಳಲ್ಲೂ ಹಾಗೂ ಕೇಂದ್ರದಲ್ಲೂ ಒಂದೇ ಪಕ್ಷಕ್ಕೆ ಸೇರಿದ ಸರ್ಕಾರ ಆಡಳಿತದಲ್ಲಿತ್ತು. ಹೊಸ ಮೈಸೂರು ರಾಜ್ಯ ನಿರ್ಮಾಣವಾದ ತಾರೀಖಿನಿಂದ ಹಿಡಿದು ಇಲ್ಲಿಯವರೆಗೂ ಅಂದರೆ ಹಾಲಿ ಮುಖ್ಯ ಮಂತ್ರಿಗಳಾಗಿರತಕ್ಕ ಶ್ರೀ ವೀರೇಂದ್ರ ಪಾಟೀಲರವರು ರಾಜ್ಯದ ಮುಖ್ಯಮಂತ್ರಿಗಳು ಆಗುವವರೆಗೂ, ಅಂದರೆ ಅದಕ್ಕೆ ಹಿಂದೆ ಕಳೆದುಹೋದ ಒಂದು ದಶಕದಲ್ಲಿ ಇಲ್ಲಿ ಯಾರು ದೇಶದ ಮುಖ್ಯ ಮಂತ್ರಿಗಳಾಗಿದ್ದುಕೊಂಡು, ಇಡೀ ಕನ್ನಡ ನಾಡಿನ ಸಾರ್ವಭೌಮತ್ವವನ್ನು ವಹಿಸಿಕೊಂಡು ಕೆಲಸ ಕಾರ್ಯಗಳನ್ನು ನಡೆಸುತ್ತಿದ್ದವರು ಇಲ್ಲಿಯವರೆಗೂ ಏತಕ್ಕೆ ಈ ಗಡೀ ಸಮಸ್ಯೆಯನ್ನು ಬಗೆಹರಿಸಲಿಲ್ಲ? ಏತಕ್ಕೆ ಇದಕ್ಕೊಂದು ಸೂಕ್ತ ಪರಿಹಾರವನ್ನು ಕಂಡು ಹಿಡಿಯಲಿಲ್ಲಾ? ಇದನ್ನು ಮಾಡದೆ ಇದ್ದಾಗ ಅವರು ಇಲ್ಲಿ ನಡೆಸಿದ ಆಡಳಿತವಾದರೂ ಏನು?

ಶ್ರೀ ಡಿ. ಎಂ. ಸಿದ್ದಯ್ಯ (ಬಳಿಗೆರೆ).—ಸ್ವಾಮಿ, ನನ್ನದೊಂದು ಕ್ರಿಯಾಲೋಪ ಇದೆ. ಈಗ ಮಾತನಾಡುತ್ತಿರುವ ಮಾನ್ಯ ಸದಸ್ಯರು ನುರಿತ ಪಾರ್ಲಿಯಮೆಂಟೇರಿಯನ್. ನಮಗೆ 1947ರಲ್ಲೇ ಸ್ವರಾಜ್ಯ ಬಂದಿತು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಕಳೆದ 22 ವರ್ಷ

ಗಳಿಂದಲೂ ಹಿಂದಿದ್ದ ಮುಖ್ಯ ಮಂತ್ರಿಗಳು ಇಲ್ಲಿ ಸಾರ್ವಭೌಮತ್ವ ವಹಿಸಿ ಆಡಳಿತ ನಡೆಸುವುದಕ್ಕೆ ಅವಕಾಶವಿದೆಯೇ ಎಂಬುದನ್ನು ಅಧ್ಯಕ್ಷರು ವಿಶದೀಕರಿಸಬೇಕೆಂಬುದೇ ನನ್ನ ಕ್ರಿಯಾಲೋಪ.

ಅಧ್ಯಕ್ಷರು.—ಇದರಲ್ಲೇನೂ ಕ್ರಿಯಾಲೋಪವಿಲ್ಲ. ತಾವು ಭಾಷಣವನ್ನು ಮುಂದುವರಿಸ ಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ಅವರು ಈ ದೇಶದ ಸಾರ್ವಭೌಮತ್ವವನ್ನು ಇಟ್ಟುಕೊಂಡಿದ್ದ ಹಾಗೆ ವರ್ತಿಸಿ, ಅವರು ಈ ದೇಶದ ಆಗುಹೋಗುಗಳಿಗೆಲ್ಲಾ ಜವಾಬ್ದಾರರಾಗಿದ್ದಾರೆ. ಎಂದು ಬೆಳಗಾಂ, ಸ್ಟೇಟ್ ರೀಆರ್ಗನೈಜೇಷನ್ ಆಕ್ಟ್ ಪ್ರಕಾರ, ಕನ್ನಡ ರಾಜ್ಯಕ್ಕೆ ಬಂದು ಸೇರಿತೋ ಅಂದಿನಿಂದಲೂ ಒಂದಲ್ಲಾ ಒಂದು ರೀತಿಯಲ್ಲಿ ಮಹಾರಾಷ್ಟ್ರೀಯರು ಅದು ತಮಗೆ ಸೇರಬೇಕೆಂದು ವಾದಿಸುತ್ತಾ ಬಂದಿದ್ದಾರೆ. ಹಾಗೆ ಅವರು ವಾದ ಮಾಡುತ್ತಿದ್ದರೂ ಎಷ್ಟು ಸಾರಿ ಜೋನಲ್ ಮೀಟಿಂಗುಗಳನ್ನು ಕರೆದಿದ್ದರು, ಹಾಗೆ ಕರೆದಿದ್ದ ಮೀಟಿಂಗುಗಳಲ್ಲಿ ಎಷ್ಟು ಸಾರಿ ಇದನ್ನು ಅಲ್ಲಿ ಚರ್ಚೆ ಮಾಡಲಾಯಿತು ? ಇದನ್ನು ಇಲ್ಲಿಯವರೆಗೂ ತೀರ್ಮಾನ ಮಾಡದೆ ಹಾಗೇ ಏಕೆ ಬಿಟ್ಟು ಕೊಂಡು ಬಂದರು ? ಹಾಗೆ ಅವರು ಈ ಪ್ರಶ್ನೆಯನ್ನು ಸಂಪೂರ್ಣವಾಗಿ ಬಗೆಹರಿಸದೆ ಉಳಿಸಿ ಕೊಂಡು ಬಂದದ್ದು ಅಲ್ಲಿಂದ ಇಲ್ಲಿಯವರೆಗೂ ದೇಶದಲ್ಲಿ ಯಾವ ಪ್ರಜೆಗೂ ಸುಖವಿಲ್ಲ—ಶಾಂತಿಯೂ ಇಲ್ಲ. ಎಲ್ಲಿ ನೋಡಿದರೂ ಅಶಾಂತಿ ವಾತಾವರಣ ತುಂಬಿ ತುಳುಕುತ್ತಿದೆ. ಇದು ಆಗ ಅಧಿಕಾರ ದಲ್ಲಿದ್ದವರು ಕರ್ತವ್ಯ ನಿಷ್ಠೆಯನ್ನು ಸರಿಯಾಗಿ ಪರಿಪಾಲಿಸಲಿಲ್ಲ ಎಂಬುದನ್ನು ಎತ್ತಿತೋರಿಸುತ್ತಿದೆ; ಅವರು ತಮ್ಮ ಕರ್ತವ್ಯದಲ್ಲಿ ವಿಫಲರಾಗಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್ (ಸಾಗರ).—ಆ ಜೋನಲ್ ಕೌನ್ಸಿಲ್ಲಿನಲ್ಲಿ ಇದನ್ನು ಎತ್ತತಕ್ಕ ಹೊಣೆ ನಮ್ಮದಾಗಿರಲಿಲ್ಲ. ಯಾರು ಬೆಳಗಾಂ ನಮಗೆ ಬರಬೇಕೆಂದು ವಾದಿಸುತ್ತಿದ್ದರೋ ಅವರು ಆ ವಿಚಾರವನ್ನು ಜೋನಲ್ ಕಾನ್ಸಿಲ್ಲಿನಲ್ಲಿ ಎತ್ತಬೇಕಾಗಿತ್ತು ಅಲ್ಲವೇ ?

ಶ್ರೀ ಕೆ. ಎಚ್. ರಂಗನಾಥ್.—ಹಾಗಾದರೆ ನಮ್ಮ ಸರ್ಕಾರದವರು ಕಾಸರಗೋಡು, ಮಡಕಶಿರ ಇತ್ಯಾದಿಗಳ ಪ್ರಶ್ನೆಯನ್ನಾದರೂ ಎತ್ತಬಹುದಾಗಿತ್ತಲ್ಲವೇ ? ಏಕೆ ಎತ್ತಲಿಲ್ಲ ?

ಶ್ರೀ ಎಚ್. ಸಿದ್ದವೀರಪ್ಪ.—ರಾಜ್ಯಾಧಿಕಾರವನ್ನು 12 ವರ್ಷಗಳ ಕಾಲ ಸದಾ ತಮ್ಮ ಕೈಲೇ ಇಟ್ಟುಕೊಂಡಿದ್ದರೂ ಇದನ್ನು ಅವರೇಕೆ ಪರಿಹರಿಸಲಿಲ್ಲ ? ಇದನ್ನು ಹಾಗೇ ಏಕೆ ಉಳಿಸಿಕೊಂಡು ಬಂದರು ? ಜನರು ಇದರ ಪರಿಹಾರಕ್ಕಾಗಿ ಅವರನ್ನೇ ಎದುರುನೋಡುತ್ತಿರಲಿಲ್ಲವೇ ? ಆದ್ದರಿಂದ ಅವರು ತಮ್ಮ ಕರ್ತವ್ಯದಲ್ಲಿ ಲೋಪ ಮಾಡಿದ್ದಾರೆ. ಅಂಥವರು ಇನ್ನೂ ಅಧಿಕಾರದಲ್ಲಿರುವುದಕ್ಕೆ ಅವರಿಗೆ ಸಂಖ್ಯಾ ಬಲವಿದ್ದರೂ ನೈತಿಕ ಬಲವಿದೆಯೇ ಎಂದು ಕೇಳುತ್ತೇನೆ?

ಇನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಮೊನ್ನೆ ತಾನೆ ಬೆಳಗಾಂನಲ್ಲಿ ಭಾಷಣ ಮಾಡುತ್ತ "ನಾನು ಬೆಳಗಾಮನ್ನು ಬರ್ಲಿನ್ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ" ಎಂಬುದಾಗಿ ಒಂದು ವಿವರವಾದ ಘೋಷಣೆಯನ್ನು ಮಾಡಿದ್ದಾರೆ. ಆದರೆ ನಾನು ಅವರ ಬಗ್ಗೆ ಏನೊಂದು ವಿಷಯವನ್ನು ಹೇಳಬೇಕೆಂದಿದ್ದೇನೆ ಎಂದರೆ ಅವರು ಈ ಭಾಷಣವನ್ನು ಮಾಡತಕ್ಕ ಕಾಲದಲ್ಲಿ ಮುಖ್ಯಮಂತ್ರಿಗಳ ಸ್ಥಾನದಲ್ಲಿದ್ದರು. ಅಂದರೆ ಅವರು ಮುಖ್ಯಮಂತ್ರಿ ಗಳಾಗಿದ್ದುಕೊಂಡು ಹೀಗೊಂದು ಭಾಷಣ ಮಾಡುತ್ತಿದ್ದಾರೆಂಬುದನ್ನು ಅವರು ಗಮನದಲ್ಲಿಟ್ಟು ಕೊಳ್ಳಬೇಕು. ಆದರೆ ನಾನು ಇಲ್ಲಿಯವರೆಗೂ ಇಂಥ ಜಟಿಲ ಸನ್ನಿವೇಶಗಳಲ್ಲಿ ಇವರು ಬಹಳ ಎಚ್ಚರಿಕೆ ಯಿಂದ ಮಾತನಾಡತಕ್ಕ ವ್ಯಕ್ತಿ, ಇವರು ಬಹಳ ಹುಷಾರಾಗಿ ಮಾತನಾಡತಕ್ಕವರು, ಹೆಚ್ಚಿಗೆ ಮಾತನಾಡತಕ್ಕವರಲ್ಲ ಎಂಬುದಾಗಿ ಭಾವಿಸಿದ್ದೆ. ಆದರೆ ಆ ದಿವಸ ಅದೇನು ಆ ನೆಲದ ಗುಣವೋ, ಅಥವಾ ಅಲ್ಲಿ ಸೇರಿದ್ದ ಜನರ ಗುಣವೋ ಗೊತ್ತಿಲ್ಲ. ನಮ್ಮ ದೇಶದಲ್ಲಿ ಈವೊತ್ತು ಬೆಳಗಾಂ ಪ್ರಶ್ನೆ ಇಷ್ಟು ಉಲ್ಬಣವಾಗಿ ಬೆಳೆದಿದ್ದರೆ ಇದಕ್ಕೆ ಕಾರಣರು ಯಾರೇ ಆಗಿರಲಿ ಅದರ ಕಷ್ಟನಷ್ಟಗಳನ್ನು ಅನುಭವಿಸುವವರು, ಗುಂಡಿನ ಏಟಿಗೆ ಬಲಿಯಾಗುವವರು, ಲಾಠಿ ಏಟಿಗೆ ಗುರಿಯಾಗುವವರು ಅಲ್ಲಿನ ಜನಗಳೇ. ಈ ಜನ ಅಲ್ಲಿಗೆ ಹೋಗಿ ಒಂದು ಸಭೆಯನ್ನು ಕರೆದು ಅದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನಾನಾದರೂ, ಇದು ರಾಜಕೀಯ ಭಾಷಣ ಎಂದು ಹೇಳಬೇಕಾಗುತ್ತದೆ, ಬೇರೆ ಏನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈ ದೇಶಕ್ಕೆ ಮಾಡಬಾರದ ಅನ್ಯಾಯವನ್ನು ಮಾಡುತ್ತಾ ಇದ್ದಾರೆ. ಇದಕ್ಕೆಲ್ಲಾ ಕಾರಣ ಹೇಳಿದ್ದಕ್ಕೆಲ್ಲಾ ಕೈಯನ್ನು ಮೇಲಕ್ಕೆ ಎತ್ತುವುದರಿಂದ ಎಂದು ಹೇಳಬೇಕಾಗಿದೆ. ಅದರಲ್ಲಿ ನೀವು ಒಬ್ಬರೇ ಅಲ್ಲ ಎಲ್ಲಾ ಜನಗಳೂ ಸೇರಿದ್ದಾರೆ. ಅವರು ಬೆಳಗಾಂಗೆ ಹೋಗಿ ಈ ರೀತಿಯಾದ ಭಾಷಣ ಮಾಡಿದ್ದಾರೆ. ಅವರು ಏನು ಹೇಳಿದ್ದಾರೆ ಎನ್ನ ತಕ್ಕಂಥಾದ್ದನ್ನು ಎರಡು ವಾಕ್ಯಗಳಲ್ಲೇ ನಾನು ತಿಳಿಸುತ್ತೇನೆ. ಡಾಕ್ಟರ್ ನಾಗಪ್ಪ

(ಶ್ರೀ ಎಚ್. ಸಿದ್ಧವೀರಪ್ಪ)

ಆಳ್ವ ಅವರು ಹಸನ್ಮುಖಿಗಳಾಗಿ ನಗುತ್ತಾ ಮೆರವಣಿಗೆಯಲ್ಲಿ ಫೋಟೋ, ಇರುವುದನ್ನು ಬೇಕಾದರೆ ಕಳುಹಿಸುತ್ತೇನೆ. ಅದರಲ್ಲಿ ಅವರು ಏನು ಹೇಳುತ್ತಾರೆ ಎಂದರೆ ಅದು ಈರೀತಿ ಇದೆ:

"The Chief Minister Veerendra Patil today lashed at the decision for delaying the decision on the Mahajan Commission Report and served an ultimatum stating that there is a limit to our patience. It is about three years since the report has been submitted to the Centre and the Centre is sitting pretty over it. I ask the Centre not to put our patience to the test."

Mr. Patil lost no time in reacting to the suggetions by snappingback. The Chief Minister also revealed the suggestion made by the Union Government...it has become an issue of prestige to the Maharashtra Government to get some part of Belgaum. Mr. Patil lost no time in reacting to the suggestion and snapped back : 'Do you want to create another Berlin in Belgaum ? So long as I am Chief Minister, I will not entertain any such idea'."

ಇಷ್ಟೇ ಅಲ್ಲ ಒಂದು ಇಂಚು ಜಾಗವನ್ನೂ ಬೆಳಗಾಂನಿಂದ ಬಿಟ್ಟುಕೊಡುವುದಿಲ್ಲ ಎಂದು ಹೇಳಿದರು.

ಇನ್ನೊಬ್ಬ ಸದಸ್ಯರು ಹಣೆಗೆ ತಿಲಕವನ್ನು ಇಡುವಷ್ಟು ಜಾಗವನ್ನೂ ಬಿಟ್ಟುಕೊಡುವುದಿಲ್ಲ ಎಂದು ವೀರವಾಣಿ ಮಾತುಗಳಿಂದ ಹೇಳಿದರು. ಬರೀ ಭಾಷಣ ಮಾಡುವುದಾದರೆ ಏನು ಬೇಕಾದರೂ ಹೇಳಬಹುದು ಎಂದು ಹೇಳುತ್ತೇನೆ.

ಶ್ರೀ ಆರ್. ಜಿ. ವಾಲಿ.—ಬೆಳಗಾಂ ಹಂಚುತ್ತಾರೆ ಎನ್ನುವ ವಿಷಯ ತಿಳಿದರೆ ತಮಗೆ ಸಂತೋಷವಾಗುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಹೆಚ್. ಸಿದ್ಧವೀರಪ್ಪ.—ನಿಮಗೆ ಎಷ್ಟು ಸಂಕಟವಾಗುತ್ತದೆಯೋ ಅಷ್ಟೇ ಸಂಕಟ ನಮಗೆ ಆಗುತ್ತದೆ.

SRI K. H. PATIL.—On a point of order Sir, Sri R. G. Vali with an intention to create ill-feeling amongst the regional personalities, he asked the question to the leader of our party, whether he is going to be pleased if Belgaum is divided, because he is INDICATE Member in such a shameless manner on the floor of the House ?

MR. SPEAKER.—There is no point of order. I think it is a well known point of procedure, that when an hon. Member is speaking, another hon. Member can intervene only when the hon. Member speaking yields. It is also perfectly in order for members to intervene provided the Member speaking yields, and not otherwise. If any Member wants to intervene, he must in the first place ask for his permission and thereafter intervene and that should also be done only if the Chair permits and not otherwise. Since there are too many interruptions, I am not going to permit any more intervention now. I request the hon. Member Mr. Siddaveerappa to continue and I also request hon. Members not to unnecessarily intervene and create difficulties to the hon. Member who is on his legs.

ಶ್ರೀ ಹೆಚ್. ಸಿದ್ಧವೀರಪ್ಪ.—ಶ್ರೀಮಾನ್ ವಾಲಿಯವರು ನಮ್ಮ ಮನಸ್ಸಿಗೆ ಸಂತೋಷವಾಗುತ್ತದೆಯೇ ಎನ್ನುವ ಮಾತನ್ನು ಹೇಳಿದರು. ಅವರ ಮನಸ್ಸಿಗೆ ಎಷ್ಟು ದುಃಖವಾಗಿದೆಯೋ ಅದರ

ಎರಡರಷ್ಟು ನಮಗೂ ದುಃಖವಾಗಿದೆ. ಇದರಲ್ಲಿ ರಾಜಕೀಯ ಚಲಾವಣೆ ಮಾಡುವುದಕ್ಕೆ ಹೋಗ ಬೇಡಿ. ಇಂಗ್ಲೀಷ್ ಭಾಷಣದಲ್ಲಿ ಆಗಿದ್ದರೆ ನಾನು ಚೆನ್ನಾಗಿ ಹೇಳುತ್ತಿದ್ದೆ. ಇದನ್ನು ಬಹಳ ದುಃಖದಿಂದ ಹೇಳುತ್ತೇನೆ. ನಮ್ಮ ಜನಗಳು ಬಸವನ ಹಾಗೆ ತಲೆ ತೂಗುತ್ತಾರೆ. ಕೈ ಎತ್ತ ಬೇಕು ಎಂದರೆ ಕೈ ಎತ್ತಿಬಿಡುತ್ತಾರೆ. ಆದುದರಿಂದ ಇದಕ್ಕೆಲ್ಲಾ ನೀವೆ ಕಾರಣರೇ ಹೊರತು ಬೇರೆ ಯಾರೂ ಅಲ್ಲ. ಈ ಒಂದು ವಿಷಯವನ್ನು ಹಿಂದೆಯೇ ತೀರ್ಮಾನ ಮಾಡಬೇಕಾಗಿತ್ತು. ಅಂದರೆ 1957ನೇ ಇಸವಿಯಲ್ಲೇ ತೀರ್ಮಾನ ಮಾಡಬೇಕಾಗಿತ್ತು, ತಪ್ಪಿದರೆ 1962ನೇ ಇಸವಿಯಲ್ಲೋ, ಅಥವಾ ಮಹಾಚುನಾವಣೆ ಆದ 1967ನೇ ಇಸವಿಯಲ್ಲೋ ಈ ಗಡಿ ಸಮಸ್ಯೆಯನ್ನು ಇತ್ಯರ್ಥ ಮಾಡಬೇಕಾಗಿತ್ತು. ಇದರ ಬಗ್ಗೆ ಎಸ್.ಆರ್.ಸಿ. ರಿಪೋರ್ಟ್‌ನಲ್ಲಿ 229ನೇ ಪೇಜಿನ 847ನೇ ಪ್ಯಾರಾದಲ್ಲಿರುವ ಒಂದೆರಡು ವಾಕ್ಯಗಳನ್ನು ತಮಗೆ ವಿವರಿಸುತ್ತೇನೆ. ಅದು ಈ ರೀತಿ ಇವೆ:

> "It may seem that we have merely stated what should be obvious to all. It is however patent that if the implication of these important facts had been fully appreciated and had been accepted, the question of territorial redistribution would not have developed into a major national problem of disquieting proportions. It has been most distressing to us to witness through the course of our enquiry a kind of border warfare in certain areas in which old comrades in arms in the battle for freedom have been pitted against one another in acrimonius controversy showing little appreciation of the fact that the States are but the limbs of the same body politic and that territorial readjustment between them should not assume the form of disputes between alien powers."

ಇದನ್ನು ನಾವು ಗಮನದಲ್ಲಿಟ್ಟುಕೊಂಡು ಈ ಹೊತ್ತಿನ ದಿವಸ ಯಾವ ಸಮಸ್ಯೆ ಬಂದಿದೆ ಅದನ್ನು ನಾವು ಈಗ ಬಗೆಹರಿಸಬೇಕಾಗಿದೆ. ಈಗ ಏನಾಗಿದೆ ಎಂದರೆ ಇದರ ಬಗ್ಗೆ ಒಬ್ಬರು ಮಾನ್ಯ ಸದಸ್ಯರು ಎಂದರೆ ಶ್ರೀಮಾನ್ ಶ್ರೀಕಂಠಯ್ಯನವರು ಒಂದು ನಿರ್ಣಯ ಕೂಡ ಕಳುಹಿಸಿದ್ದಾರೆ. ಅದರಲ್ಲಿ ಅವರೇ ಹೇಳಿರುವಂತೆ ಮೈಸೂರು ರಾಜ್ಯದ ಸುದೈವವೋ ಇಲ್ಲವೇ ದುರ್ದೈವವೋ ನಮಗೆ ಐದು ಭಾಗದ ರಾಜ್ಯಗಳು ಬಂದು ಸೇರಿದವು. ಒಂದು ಕಡೆ ಹಳೆಯ ಮದ್ರಾಸು ಭಾಗಗಳು, ಇನ್ನೊಂದು ಕಡೆ ಮಹಾರಾಷ್ಟ್ರದ ಭಾಗಗಳು, ಮತ್ತೊಂದು ಕಡೆ ಆಂಧ್ರದ ಕೆಲವು ಭಾಗಗಳು, ಇನ್ನೊಂದು ಕಡೆ ಕೇರಳದ ಕೆಲವು ಭಾಗಗಳು ಹೀಗೆ ಬೇರೆ ಭಾಗಗಳಲ್ಲಿ ಹರಿದು ಹಂಚಿ ಹೋಗಿರುವ ಭಾಗಗಳನ್ನು ಒಂದುಗೂಡಿಸಿ ಕನ್ನಡನಾಡು ಎಂದು ನಮ್ಮ ರಾಜ್ಯವನ್ನು ಒಂದುಗೂಡಿಸಿದಾಗ ನಮಗೆ ಬಂದಂತಹ ಸಮಸ್ಯೆಗಳು ಎಷ್ಟು ದೊಡ್ಡದಾಗಿ ಬಂದಿದ್ದವು ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಆಗ ಒಂದೊಂದನ್ನೂ ಸಮಗ್ರವಾದ ದೃಷ್ಟಿಯಿಂದ ಬಗೆಹರಿಸಿದ್ದರೆ ಕಳೆದ ಹತ್ತು ಹನ್ನೆರಡು ವರ್ಷಗಳಲ್ಲಿ ಇಂತಹ ಸಮಸ್ಯೆಗಳನ್ನು ಬಗೆಹರಿಸುವುದು ಬಹಳ ಸುಲಭ ವಾಗುತ್ತಿತ್ತು. ಆಗ ರಾಜ್ಯದ ಆಡಳಿತದ ಸೂತ್ರವನ್ನು ವಹಿಸಿಕೊಂಡಿದ್ದವರು ಬಹು ಮುಖ್ಯವಾದ ಇಂತಹ ರಾಷ್ಟ್ರದ ಜಟಿಲ ಪ್ರಶ್ನೆಗಳು ಬಂದಾಗ ಇದರ ಬಗ್ಗೆ ಸರಿಯಾದ ಪ್ರಯತ್ನ ಮಾಡಲಿಲ್ಲ ಎನ್ನುವುದನ್ನು ದೇಶದಲ್ಲಿರತಕ್ಕ ಜನರು ಸ್ಪಷ್ಟವಾಗಿ ಹೇಳುತ್ತಾರೆ. ಹಿಂದೆ ಈ ದೇಶದ ರೀ ಆರ್ಗನೈಸೇಷನ್ ಆದಾಗ ದಿವಂಗತ ಪಂಡಿತ್ ಜವಹರಲಾಲ್ ನೆಹರೂರವರು ಹಳೆಯ ಮೈಸೂರನ್ನು ಕೂಡಿಸುವಾಗ ಒಂದು ಹಿತವಚನ ಈ ರೀತಿ ಹೇಳಿದರು :

> "Old Mysore has a distinct culture of its own, has a distinct heritage of its own. You have been formed into a homogenous unit for a long time. It is absolutely inevitable that South Kanara must join you because there is no other way and also Coorg and Kollegal. If you want, if you are willing, you may form into a viable unit. It is just possible."

ಆಗ, ಬೇಡ ದೇಶ ದೊಡ್ಡದಾಗುತ್ತದೆ ಅದರಂತೆ ಜನತೆಯೂ ಬೆಳೆಯುತ್ತದೆ ಮತ್ತು ಮುಂದೆ ಬರುವ ಪಂಚವಾರ್ಷಿಕ ಯೋಜನೆಗಳಲ್ಲಿ ದೇಶದ ಆರ್ಥಿಕ ಪ್ರಗತಿಗೆ ಅನುಕೂಲವಾಗುತ್ತದೆ

(ಶ್ರೀ ಎಚ್. ಸಿದ್ಧವೀರಪ್ಪ)

ಎಂದು ಆಗ ಆಡಳಿತದಲ್ಲಿದ್ದವರು ಇದಕ್ಕೆ ಎಷ್ಟೇ ವಿಧವಾದ ತಾತ್ವಿಕ ವಿರೋಧ ಇದ್ದರೂ ಇದನ್ನು ತಡೆಗಟ್ಟಲಿಲ್ಲ. ಆಗ ಬಹುಶಃ ಇಂತಹ ಪ್ರಸಂಗಗಳು ಬಿಡಿಸಲಾರದಂಥ ಅಶಕ್ತ ಸರಕಾರದ ಕೈಯ್ಯಲ್ಲಿ ಈ ದೇಶದ ರಾಜ್ಯಭಾರ ಸಿಕ್ಕುತ್ತದೆ ಎನ್ನುವುದಾದರೆ ನಮ್ಮಷ್ಟಕ್ಕೆ ನಾವೇ ದೂರ ಇರುತ್ತೇವೆ ಎಂದು ಹೇಳಬಹುದಾಗಿತ್ತು. ಆದರೆ ಈಗ ಏನಾಗಿದೆ ಎಂದರೆ ಗಂಟು ಬಿದ್ದರೆ ಬಿಡುವುದಿಲ್ಲ ಎನ್ನುವುದು ಗೊತ್ತು. ಆಮೇಲೆ ಮಹಾಜನ್ ಕಮಿಷನ್ ಎಂದು ನೇಮಿಸಿದರು. ಅದು ಒಂದು ದುರಂತ ನಾಟಕ, ಹೇಗೆ ಆಯಿತು ಎನ್ನುವುದು ನಮಗೆಲ್ಲಾ ಗೊತ್ತಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಆಗ ನೀವು ಹೋಂ ಮಿನಿಸ್ಟರಾಗಿದ್ದಿರಿ. ಆಗ ಏಕೆ ನೀವು ಒಪ್ಪಿದಿರಿ ಎಂದು ಕೇಳುತ್ತೇನೆ.

Sri H. M. CHANNABASAPPA.—Is it in order for the Hon. Minister for Parliamentary Affairs to get up again and again when the Hon. Member is not yielding ?

Mr. SPEAKER.—I just indicated the procedure. With the consent of the Hon. Member speaking, another Member can intervene. Hon. Minister just requested the Hon. Member whether he is yielding. When he said he is not yielding, he sat down. There is nothing wrong about it.

ಶ್ರೀ ಎಚ್. ಸಿದ್ಧವೀರಪ್ಪ.—ಮಹಾಜನ್ ಕಮಿಷನ್ ನೇಮಕ ಮಾಡುವಾಗ ಅದು ಹೇಗೆ ಆಯಿತು ಎನ್ನುವುದು ದೇಶಕ್ಕೆಲ್ಲಾ ಗೊತ್ತಿದೆ. ಇದಕ್ಕೆ ಹೇಗೆ ಒಪ್ಪಿಗೆ ಕೊಟ್ಟರು ಮತ್ತು ಯಾರು ಒಪ್ಪಿದರು ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಹಾಗೆ ಆಗ ಆಡಳಿತದಲ್ಲಿದ್ದವರು ಇದಕ್ಕೆ ಒಪ್ಪಿಗೆ ಕೊಟ್ಟದ್ದು ಅಕ್ಷಮ್ಯ ಅಪರಾಧವಲ್ಲವೇ. ಈ ಮಹಾಜನ್ ಕಮಿಷನ್ ಹೇಗೆ ಆಯಿತು ಇದಕ್ಕೆ ಯಾರು ಒಪ್ಪಿಗೆ ಕೊಟ್ಟರು ಎನ್ನುವುದು ನಮಗೆಲ್ಲರಿಗೂ ತಿಳಿದಿದ್ದರೂ ಮತ್ತು ನಮ್ಮ ದೇಶಕ್ಕೆ ಇದು ಒಪ್ಪಿಗೆಯಾಗದಿದ್ದರೂ ಹೇಗಾದರೂ ಇಂತಹ ಒಂದು ರಿಪೋರ್ಟನ್ನು ಪೂರ್ತಿಯಾಗಿ ನಾವೆಲ್ಲರೂ ಒಪ್ಪಬೇಕು ಎಂದು ಕೇಳುತ್ತಲೇ ಇದ್ದೇವೆ. ಆದರೆ ಈಗ್ಗೆ ಎರಡು ವರ್ಷಗಳಿಂದಲೂ ನೀವೇನು ಮಾಡುತ್ತಿದ್ದಿರಿ ಎಂದು ಕೇಳಬೇಕಾಗಿದೆ. ಪ್ರಧಾನ ಮಂತ್ರಿಗಳಿಗೆ ಹಾಗೂ ಶ್ರೀಮಾನ್ ನಿಜಲಿಂಗಪ್ಪನವರಿಗೆ ಭಿನ್ನಾಭಿಪ್ರಾಯ ಬರುವುದಕ್ಕೆ ಮುಂಚೆ ಎಲ್ಲರೂ ಒಂದಾಗಿದ್ದ ಕಾಲದಲ್ಲಿ ಏತಕ್ಕೋಸ್ಕರ ಈ ಸಮಸ್ಯೆಯನ್ನು ಇತ್ಯರ್ಥಪಡಿಸಲು ಪ್ರಯತ್ನ ಮಾಡಲಿಲ್ಲ ? ಇದು ಇವರ ತಪ್ಪಲ್ಲವೇ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಇದನ್ನು ಏಕೆ ಮಾಡಲಿಲ್ಲ ಎನ್ನುವುದಕ್ಕೆ ನಮಗೆ ಯಾವ ಕಾರಣವೂ ಗೊತ್ತಾಗಲಿಲ್ಲ. ಆ ಕಡೆ ಶಿವಸೇನೆ ಎಂದು ಹೇಳುತ್ತಾರೆ, ಈ ಕಡೆ ಬಸವ ಸೇನೆ ಎಂದು ಹೇಳುತ್ತಾರೆ ಇನ್ನು ವಿಷ್ಣು ಸೇನೆ ಎಂದು ಮಾಡಲು ಹೊರಡುತ್ತಾರೋ ಏನೋ ನಮಗೆ ಗೊತ್ತಿಲ್ಲ. ಈಗ ಬಂದಿರತಕ್ಕ ಸನ್ನಿವೇಶಗಳನ್ನು ನಾವು ನೋಡುವುದಾದರೆ ಇದು ನಮ್ಮ ಕನ್ನಡ ನಾಡಿನ ದುರಂತ ಎಂದು ಹೇಳಬೇಕಾಗಿದೆ. ನಾವು ಯಾವ ಸನ್ನಿವೇಶದಲ್ಲಿದ್ದೇವೆ ಎಂದರೆ ಒಂದು ಕಡೆ ತಮಿಳುನಾಡು ನಮಗೆ ವಿರೋಧವಾಗಿದೆ, ಆ ಕಡೆ ಆಂಧ್ರದವರು ವಿರೋಧವಾಗಿದ್ದಾರೆ ಹಾಗೇ ಕೇರಳದವರೂ ಕೂಡ ವಿರೋಧವಾಗಿದ್ದಾರೆ ಮತ್ತೆ ಮಹಾರಾಷ್ಟ್ರದವರೂ ಕೂಡ ವಿರೋಧವಾಗಿದ್ದಾರೆ. ನಿಮಗೆ ಸುತ್ತಮುತ್ತ ಇರುವ ರಾಜ್ಯಗಳೆಲ್ಲ ವಿರೋಧವಾಗಿದ್ದಾರೆ. ಯಾವ ರಾಜ್ಯವೂ ಕೂಡ ನಿಮಗೆ ಸ್ನೇಹಿತರಾಗಿಲ್ಲ. ನಿಮಗೆ ಇರುವ ಸ್ನೇಹಿತ ಒಂದೇ. ಅದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅರಬ್ಬಿ ಸಮುದ್ರ ಸುಮಾರು ಮುನ್ನೂರು ಮೈಲಿಗಳ ಉದ್ದ ಇರುವ ಪ್ರದೇಶ, ಬೇರೆ ಯಾವುದೂ ನಿಮಗೆ ಅನುಕೂಲ ವಾಗಿ ಕಾಣುತ್ತಿಲ್ಲ. ಯಾವ ಕಡೆಗೆ ತಿರುಗಿದರೂ, ನಮ್ಮಲ್ಲಿ ಯಾವ ಮೂಲೆಗೆ ಹೋದರೂ ಮತ್ತು ಎಲ್ಲಿಗೆ ಹೋದರೂ ವಿರೋಧ, ತಮಿಳು ನಾಡಿನವರು ಈಗ ಕಾವೇರಿ ನೀರಿನ ವಿವಾದ ಎಬ್ಬಿಸಿ ಅದಕ್ಕೆ ಬೇರೆ ಒಂದು ರೀತಿಯ ಟ್ರಿಬ್ಯುನಲ್ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಆಂಧ್ರ ದವರು ಒಂದು ಕಡೆ ವಿರೋಧ ಮಾಡುತ್ತಿದ್ದಾರೆ, ಇದರಂತೆ ಮಹಾರಾಷ್ಟ್ರದವರೂ ವಿರೋಧ ಮಾಡುತ್ತಿದ್ದಾರೆ. ಏತಕ್ಕೋಸ್ಕರ ಇಷ್ಟೆಲ್ಲಾ ವಿರೋಧ ಮಾಡಬೇಕಾಗಿತ್ತು ಎಂದು ನಾನು ಕೇಳುತ್ತೇನೆ. ಕಾರಣವೇನೋ ಬೇಕಾದಷ್ಟು ಹೇಳಬಹುದು. ತಮಿಳು ನಾಡು ಮತ್ತು ಕೇರಳ ಏತಕ್ಕೆ ಕಾದಾಡಬಾರದು ?

ಶ್ರೀ ಬೋಳ ರಘುರಾಮ ಶೆಟ್ಟಿ.—ಕೇಂದ್ರದವರು ವಿರೋಧ ಮಾಡುವುದಕ್ಕೆ ಕಾರಣ ವೇನು ?

ಶ್ರೀ ಹೆಚ್. ಸಿದ್ದವೀರಪ್ಪ.—ಕೇಂದ್ರದವರು ವಿರೋಧ ಮಾಡುತ್ತಾರೆನ್ನುವುದು ನಿಮ್ಮ ಭ್ರಮೆ ಎಂದು ನಾನು ಇಲ್ಲಿ ಹೇಳುತ್ತೇನೆ. ಇದನ್ನು ಯಾರು ನಿಮಗೆ ಹೇಳಿದರು ಮತ್ತು ಯಾರು ವಿರೋಧವಾಗಿದ್ದಾರೆ ಎಂದು ನಾನು ಕೇಳುತ್ತೇನೆ. ಈಗ ಬಂದಿರತಕ್ಕ ಸನ್ನಿವೇಶ ಏನಾಗಿದೆ ಎಂದರೆ ನೀವೇ ಎಲ್ಲವನ್ನೂ ಮಾಡಿಕೊಂಡಿರುವುದು ಎನ್ನುವುದು ಗೊತಾಗುತ್ತದೆ ಇದಕ್ಕೆ ದೊಡ್ಡ ದೊಡ್ಡ ಕಾನೂನಿನ ಪಂಡಿತರುಗಳು ಬೇಕು ಎಂದು ದೊಡ್ಡ ದೊಡ್ಡ ಕಾನೂನು ಪಂಡಿತರುಗಳನ್ನು ನೇಮಿಸಿಕೊಂಡಿದ್ದರು. ಮದ್ರಾಸಿನಲ್ಲಿ ಉತ್ತಮವಾದ ಪಂಡಿತರು ಎಂದು ಹೆಸರುವಾಸಿಯಾಗಿದ್ದ ಶ್ರೀ ನಂಬಿಯಾರ್ ಎನ್ನುವವರನ್ನು ನ್ಯಾಯ ಪಂಡಿತರೆಂದು ನೇಮಿಸಿಕೊಂಡಿದ್ದರು. ಇದನ್ನು ಅಂತಹ ಪಂಡಿತರಿಂದಲೇ ತಿಳಿಯಬೇಕು ಎಂದಲ್ಲ. ನಮ್ಮಂತಹ ಸಾಮಾನ್ಯ ಕಾನೂನು ತಿಳಿದವರಿಗೂ ಗೊತ್ತಾಗುತ್ತದೆ ಮತ್ತು ಇದರ ಅರ್ಥ ಏನು ಎನ್ನುವುದು ಗೊತ್ತಾಗುತ್ತದೆ. ಬೀಗ ಹಾಕಿದ್ದಾರೆ ಆದರೆ ಇದರ ಬೀಗದ ಕೈ ಎಲ್ಲಿದೆ ಎನ್ನುವುದನ್ನು ನೋಡದೆ ಸುಮ್ಮನೇ ಬಾಗಿಲಿಗೆ ಹೋಗಿ ಗುದ್ದಿ ಹಣೆ ಚಚ್ಚಿಕೊಂಡರೆ ಬೀಗ ತೆಗೆಯಲು ಆಗುತ್ತದೆಯೇ? ಇದು ಹೇಗಿದೆ ಎಂದರೆ ಕತ್ತಲಲ್ಲಿ ಕರಿಬೆಕ್ಕನ್ನು ಅರಸುವಂತಾಗಿದೆ. ಸರಿಯಾದ ಬೀಗದ ಕೈ ತಂದು ಅದರಿಂದ ಬೀಗವನ್ನು ತೆಗೆಯುವುದರ ಬದಲು ಬೇರೆ ಬೀಗದ ಕೈಯಿಂದ ತೆಗೆಯಲು ಹೋದರೆ ಅದನ್ನು ತೆಗೆಯಲು ಆಗುತ್ತದೆಯೇ? ಬೀಗದ ಕೈ ಎಲ್ಲಿದೆ ಎನ್ನುವುದು ಗೊತ್ತಿಲ್ಲವೇ? ನಮ್ಮ ಇಂದಿನ ಮುಖ್ಯ ಮಂತ್ರಿಗಳು ಬಹಳ ಚತುರರು ಮತ್ತು ಒಳ್ಳೆಯ ಹೆಸರುವಾಸಿಯುಳ್ಳವರು ಎಂದು ನಾನು ಕೆಲವು ಇಂಟರ್‌ನ್ಯಾಷನಲ್ ಪೇಪರುಗಳಲ್ಲಿ ಕೂಡ ಓದಿದ್ದೇನೆ. ನ್ಯೂಯಾರ್ಕ್ ಟೈಂಸ್ ಎನ್ನುವ ಇಂಟರ್‌ನ್ಯಾಷನಲ್ ಪೇಪರು ಬರುತ್ತದೆ. ಶ್ರೀಮಾನ್ ನಿಜಲಿಂಗಪ್ಪನವರಿಗೂ ಶ್ರೀಮತಿ ಇಂದಿರಾ ಗಾಂಧಿಯವರಿಗೂ ಒಮ್ಮತ ಉಂಟುಮಾಡುವುದರಲ್ಲಿ ಬಹು ಮುಖ್ಯವಾದ ಪಾತ್ರ ವಹಿಸಿದ್ದರು ಎಂದು ಬಹಳ ದೊಡ್ಡದಾಗಿ ಆ ಪೇಪರಿನಲ್ಲಿ ಬಂದಿದ್ದುದನ್ನು ಓದಿದ್ದೇನೆ. ಇವರಿಗೇಕೆ ಈಗ ಇಂತಹ ದುರ್ಬುದ್ಧಿ ಬಂತು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅದೇನು ದುರ್ದೈವವೋ ಗೊತ್ತಾಗಲಿಲ್ಲ. ಇಂತಹವರು ಏಕೆ ನುಡಿದಂತೆ ನಡೆಯಲಿಲ್ಲ. ಶ್ರೀಮತಿ ಗಾಂಧಿಯವರನ್ನು ಕಾಂಗ್ರೆಸ್ಸಿನಿಂದ ಉಚ್ಚಾಟನೆ ಮಾಡುವುದಕ್ಕೆ ಮುಂಚೆ ಇದನ್ನು ಏಕೆ ತೆಗೆದುಕೊಳ್ಳಲಿಲ್ಲ? ಇದಕ್ಕಾಗಿ ಸುಮಾರು 25-30 ಸಾರಿ ಅವರು ದೆಹಲಿಗೆ ಯಾತ್ರೆ ಕೈಗೊಂಡಿದ್ದರು. ಈಗ ತಮಿಳುನಾಡಿನಲ್ಲಿರತಕ್ಕ ಡಿ.ಎಂ.ಕೆ. ಸರಕಾರ ಕೇಂದ್ರ ಸರಕಾರದ ವಿಶ್ವಾಸದಲ್ಲಿದೆ ಎಂದು ಹೇಳುವಾಗ ಅದೇ ರೀತಿ ನೀವು ಏಕೆ ಆಗಲಿಲ್ಲ? ನೀವು ಕೇಂದ್ರ ಸರಕಾರದವರೊಡನೆಯೇ ಉಳಿದುಕೊಳ್ಳಬಹುದಾಗಿತ್ತು. Deliberately with a design and purpose, they are whipping up anti-Central Government feeling in the State for ulterior purpose and with a view to see that their party interests are promoted. ಇದನ್ನು ಮಾಡುವುದರಿಂದ ಇವರಿಗೆ ಸುಖವಾಗುತ್ತದೆ ಎಂದು ತಿಳಿದುಕೊಂಡಿದ್ದಾರೆ. ಅದು ಒಂದು ಭ್ರಮೆ. ಅವರು ಮಾಡುತ್ತ ಇರುವ ರೀತಿಯನ್ನು ನೋಡಿದರೆ ಇಂತಹವರು ಮುಂದೆ ನಮ್ಮ ರಾಜ್ಯಗಳಲ್ಲಿ ಬಂದಾರು ಎಂದು ಇದನ್ನು ಎದುರಿಸುವುದಕ್ಕೆ ನಮ್ಮ ರಾಜ್ಯಾಂಗದಲ್ಲಿ ಬೇಕಾದಷ್ಟು ನೆರವು ಹಾಗೂ ವಜ್ರಕವಚವನ್ನು ನಮ್ಮ ರಕ್ಷಣೆಗಾಗಿ ಕೊಟ್ಟಿದ್ದಾರೆ. ಇಂತಹ ಸಂದರ್ಭಗಳಲ್ಲಿ ರಾಜ್ಯಾಂಗದಲ್ಲಿ ಹೇಳಿರುವುದನ್ನು ಸ್ವಲ್ಪ ಮಟ್ಟಿಗೆ ತಿಳಿದುಕೊಂಡಿದ್ದರೆ ಒಳ್ಳೆಯದು. ರಾಜ್ಯಾಂಗವನ್ನು ಬದಲಾವಣೆ ಮಾಡುವುದಕ್ಕೆ ಪಾರ್ಲಿಮೆಂಟಿಗೆ ಪೂರ್ಣವಾದ ಅಧಿಕಾರವಿದೆ. ಇಂತಹ ಸಾಧಾರಣ ಮಸೂದೆಗಳು ಪಾರ್ಲಿಮೆಂಟ್ ಮುಂದೆ ಬಂದರೆ ಪಾಸ್ ಆಗುವುದಕ್ಕೆ ಮೂರನೆಯ ಎರಡು ಭಾಗದಷ್ಟು ಮೆಜಾರಿಟಿ ಬೇಕಾಗುವುದಿಲ್ಲ. ಸಿಂಪಲ್ ಮೆಜಾರಿಟಿಯಿಂದಲೇ ಇದು ತೀರ್ಮಾನವಾಗುವುದಕ್ಕೆ ಅವಕಾಶವಿದೆ. 1955ನೇ ಇಸವಿಯಲ್ಲಿ ಉದ್ದೇಶಪೂರ್ವಕವಾಗಿ ರಾಜ್ಯಾಂಗಕ್ಕೆ 5ನೇ ತಿದ್ದುಪಡಿಯನ್ನು ಮಾಡಿದ್ದಾರೆ. ಇದರ ಪ್ರಕಾರ ಬಿಲ್ ಪಾಸ್‌ಮಾಡುವುದಕ್ಕೆ ಮೊದಲು ಕೇಂದ್ರಸರ್ಕಾರದವರು ಸಂಬಂಧಪಟ್ಟ ರಾಜ್ಯಸರ್ಕಾರಗಳಿಗೆ 15 ದಿವಸಗಳ ಕಾಲವನ್ನು ಕೊಡುತ್ತಾರೆ ಎನ್ನೋಣ. 16ನೇ ದಿವಸದಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸುವುದಕ್ಕೆ ಅವಕಾಶ ಇಲ್ಲ. ಕಾನ್ಸ್ಟಿಟ್ಯೂಷನಿನಲ್ಲಿ ಈ ರೀತಿ ಹೇಳಿದೆ :

> "for expressing its views thereon within such period as may be specified in the reference or within such further period as the President may allow and the period so specified or allowed has expired."

(ಶ್ರೀ ಹೆಚ್. ಸಿದ್ಧವೀರಪ್ಪ)

3-00 P.M.

ಎಂಬುದಾಗಿ. ಆದ್ದರಿಂದ ಇದನ್ನು ನಾವು ನಮಗ್ರದೃಷ್ಟಿಯಿಂದ ವಿಚಾರಮಾಡಬೇಕಾಗಿದೆ. ಪಾರ್ಲಿಮೆಂಟ್‌ನಲ್ಲಿ ಇಡೀ ಹಿಂದೂಸ್ಥಾನದಿಂದ ಆರಿಸಿ ಬಂದಿರುವ ಸದಸ್ಯರು ಸುಮಾರು 565 ಮಂದಿ ಇದ್ದಾರೆ. ಅಲ್ಲಿ ಕೇವಲ ಮಹಾರಾಷ್ಟ್ರ ಮತ್ತು ಮೈಸೂರಿನವರೇ ಇಲ್ಲ. ಎಲ್ಲ ರಾಜ್ಯಗಳ ಪ್ರತಿನಿಧಿಗಳು ಸಹ ಇದ್ದಾರೆ. ಇಂತಹ ಸನ್ನಿವೇಶದಲ್ಲಿ ಕೂಡ ಕೇಂದ್ರಸರ್ಕಾರ ನಮ್ಮ ರಾಜ್ಯದ ವಿರುದ್ಧವಾಗಿ ತೀರ್ಮಾನ ಕೈಕೊಳ್ಳುವುದಕ್ಕೆ ಹೊರಟಿರುವುದು ಏತಕ್ಕಾಗಿ ಎಂಬುದನ್ನು ನೋಡ ಬೇಕಾಗಿದೆ. ಏತಕ್ಕಾಗಿ ಈ ರೀತಿ ವರ್ತಿಸುತ್ತಿದ್ದಾರೆಂಬುದನ್ನು ನಾವು ಕೇಳಬೇಕಾಗಿದೆ. ಇಂತಹ ಸಂದರ್ಭಗಳಲ್ಲಿ ಸೌಜನ್ಯದ ದೃಷ್ಟಿ ಇರಬೇಕು. ಹಳ್ಳಿಯ ಗಾದೆ ಒಂದು ಇದೆ: "ಕಾರ್ಯವಾಸಿ........ಕಾಲು ಕಟ್ಟು" ಎಂಬುದಾಗಿ. ಅಂದರೆ ಹೋಗಿ ಭಿಕ್ಷೆ ಬೇಡಿ ಎಂದು ನಾನು ಹೇಳುತ್ತಿಲ್ಲ. ನಮ್ಮ ರಾಜ್ಯಕ್ಕೆ ಆಗಿರುವಂತಹ ಅನ್ಯಾಯವನ್ನು ಪಾರ್ಲಿಮೆಂಟಿನಲ್ಲಿರುವ ಎಲ್ಲ ಸದಸ್ಯರ ಮುಂದೆ ಹೇಳಿ ಅವರ ಮನಸ್ಸನ್ನು ಮೊದಲು ಒಲಿಸಿಕೊಳ್ಳಬೇಕು. ಪಾರ್ಲಿಮೆಂಟಿ ನಲ್ಲಿ ನಮಗೆ ಬಹುಮತ ಬರುವಂತೆ ಸನ್ನಿವೇಶವನ್ನು ಕಲ್ಪಿಸಬೇಕು. ಇವತ್ತಿನದಿವಸ ಪಾರ್ಲಿ ಮೆಂಟಿಗೆ ಗಡಿ ವಿಚಾರದಲ್ಲಿ ಬೇಕಾದ ಹಾಗೆ ಬದಲಾವಣೆ ಮಾಡುವುದಕ್ಕೆ ರಾಜ್ಯಾಂಗದ ಪ್ರಕಾರ ಅಧಿಕಾರ ಇದೆ. ಅದೇ ಅಮೇರಿಕಾ ದೇಶದಲ್ಲಿ ಒಂದು ರಾಜ್ಯದ ಗಡಿಯ ಪ್ರದೇಶವನ್ನು ಇನ್ನೊಂದು ರಾಜ್ಯಕ್ಕೆ ವರ್ಗಾವಣೆ ಮಾಡಬೇಕಾದರೆ ಆಯಾ ರಾಜ್ಯಗಳ ಒಪ್ಪಿಗೆ ಮೊದಲುಬೇಕು. ಇದೇ ಪದ್ಧತಿ ಆಸ್ಟ್ರೇಲಿಯಾದಲ್ಲಿಯೂ ಕೂಡ ಇದೆ. ಆಡಳಿತ ದೃಷ್ಟಿಯಿಂದ ಇದು ಸರಿ ಎಂದು ಕಾಣುತ್ತದೆ. ಆದರೆ ನಮ್ಮ ದೇಶದಲ್ಲಿ ಮಾತ್ರ ಪೂರ್ಣ ಅಧಿಕಾರವನ್ನು ಪಾರ್ಲಿಮೆಂಟ್ ಇಟ್ಟುಕೊಂಡಿದೆ. ಇವತ್ತಿನದಿವಸ ಪರಿಸ್ಥಿತಿ ಇಷ್ಟರಮಟ್ಟಿಗೆ ಹೋಗಿದ್ದರೂ ಕೂಡ ಮಾನ್ಯ ವೀರೇಂದ್ರ ಪಾಟೀಲರು ತಾವೇ ದೆಹಲಿಗೆ ಹೋಗಿ ಪ್ರಧಾನಮಂತ್ರಿಯವರಲ್ಲಿ ಮಾತನಾಡದೆ ತಮ್ಮ ಚೀಫ್ ಸೆಕ್ರೆಟರಿಯವ ರನ್ನು ದೆಹಲಿಗೆ ಕಳಿಸಿದರು. ಅವರು ಪ್ರಧಾನಮಂತ್ರಿಯವರನ್ನು ಇಂಟರ್‌ವ್ಯೂ ಕೇಳಿದಾಗ ಅವರು ಪತ್ರವನ್ನು ನಮ್ಮ ಸೆಕ್ರೆಟರಿಯವರ ಹತ್ತಿರ ಕೊಟ್ಟುಹೋಗಿ, ನಾನು ಮುಖ್ಯಮಂತ್ರಿಗಳಿಗೆ ಕಾಗದ ಬರೆಯುತ್ತೇನೆ ಎಂದು ಹೇಳಿದರಂತೆ. ಯಾರೇ ಪ್ರಧಾನಮಂತ್ರಿಗಳಾಗಲೀ, ಈ ರೀತಿ ಉತ್ತರ ಕೊಡುವುದು ಸಹಜ. ಇದಕ್ಕೆ ಮೊದಲು ಮುಖ್ಯಮಂತ್ರಿಗಳು ನನಗೆ ಕಾಯಿಲೆ ಇರುವುದರಿಂದ ದೆಹ ಲಿಗೆ ಹೋಗುವುದಕ್ಕೆ ಆಗಲಿಲ್ಲ ಎಂದು ಹೇಳಿಕೆ ಕೊಟ್ಟರು. ಅವರಿಗೆ ಕಾಯಿಲೆ ಇಲ್ಲ ಎಂದು ನಾನು ಹೇಳುತ್ತಿಲ್ಲ. ಅವರು ಆ ರೀತಿ ಹೇಳಿಕೆ ಕೊಟ್ಟಮೇಲೆ ಕೆಲವು ಕಡೆ ಟೂರ್ ಮಾಡಿದ್ದಾರೆ. ದೇಹ ಶ್ರಮಮಾಡಿಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಸ್ಪೆಷಲ್ ಪ್ಲೇನ್ ಮಾಡಿಕೊಂಡು ದೆಹಲಿಗೆ ಹೋಗಿದ್ದರೆ ನಾವು ಬೇಡ ಎಂದು ಹೇಳುತ್ತಿರಲಿಲ್ಲ. ಹೋಗಿದ್ದರೆ ಪ್ರಧಾನಮಂತ್ರಿಗಳು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ರಾಜಕೀಯವನ್ನು ಕಾರಣವಾಗಿ ಇಟ್ಟುಕೊಳ್ಳುವುದು ಸರಿಯಲ್ಲ. ರಾಜಕೀಯ ಶಾಸ್ತ್ರವನ್ನು ಓದಿದರೆ ಇದು ಗೊತ್ತಾಗುತ್ತದೆ. ಒಳ್ಳೆಯ ಮಾತಿನಲ್ಲಿ ಅಪ್ರಿಯವಾದುದನ್ನು ಸಹ ತಿನ್ನಿಸಬಹು ದಂತೆ, ಕೆಟ್ಟ ಮಾತಿನಲ್ಲಿ ಬೆಲ್ಲವನ್ನು ಸಹ ತಿನ್ನಿಸುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಶ್ರೀಮತಿ ಇಂದಿರಾಗಾಂಧಿಯವರನ್ನು ಈ ಸರ್ಕಾರದವರು ಕಾಸಿಗಿಂತ ಕಡೆಯಾಗಿ ಕಾಣುತ್ತಿದ್ದಾರೆ. ನಿಮಗೆ ಅವರನ್ನು ಅಧಿಕಾರದಿಂದ ತೆಗೆಯುವ ಅವಕಾಶ ಇದ್ದರೆ ತೆಗೆಯಿರಿ, ಆದರೆ ಈ ದೇಶದ 45 ಕೋಟಿ ಜನರ ಒಪ್ಪಿಗೆ ಇರುವವರೆಗೆ ಅವರು ಆ ಸ್ಥಾನದಲ್ಲಿ ಮುಂದುವರೆಯುತ್ತಾರೆ. ಇವತ್ತಿನದಿವಸ ಈ ಸರ್ಕಾರದವರು ತಮ್ಮ ಸಾಮ್ರಾಜ್ಯವನ್ನು ಉಳಿಸಿಕೊಳ್ಳುವುದಕ್ಕೆ ಎಲ್ಲಾ ರೀತಿಯ ಅವಕಾಶವನ್ನೂ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದು ಸರಿಯಲ್ಲವೆಂದು ಹೇಳುತ್ತೇನೆ. ಇದಕ್ಕೆ ಒಂದು ಉದಾಹರಣೆ ಯನ್ನು ಕೊಡುತ್ತೇನೆ:—ಮೊನ್ನೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮಾನ್ ನಾಗಪ್ಪಆಳ್ವ ಅವರು ಅಜ್ಜಂಪುರದಲ್ಲಿ ಒಂದು ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ಪ್ರಧಾನಮಂತ್ರಿಯವ ರನ್ನು ವಾಚಾಮಗೋಚರವಾಗಿ ಬೈದರು. ಇದನ್ನು ಅಲ್ಲಿದ್ದ ಸಾಮಾನ್ಯ ಜನರು ಕೆಲವರು ಪ್ರತಿ ಭಟಿಸಿದರು. ದೇಶದ ಪ್ರಧಾನಮಂತ್ರಿಗಳನ್ನು ಆ ರೀತಿ ಬೈಯ್ಯಬಾರದು ಎಂದು ಕೆಲವರು ಹೇಳಿ ದರು. ಆ ರೀತಿ ಪ್ರತಿಭಟಿಸಿದ ಕೆಲವು ಜನರನ್ನು ಸಬ್–ಇನ್‌ಸ್ಪೆಕ್ಟರ್ ಅವರು ಸ್ಟೇಷನ್‌ಗೆ ಕರೆದು ಕೊಂಡು ಹೋಗಿ ಅಲ್ಲಿ ಕೆಲವು ಸಮಯ ಇಟ್ಟುಕೊಂಡು ಏನೇನೋ ಮಾಡಿದರು. ಇವತ್ತಿನ ದಿವಸ ಈ ರಾಜ್ಯದಲ್ಲಿ ಯಾರಾದರೂ ಇಂದಿರಾಗಾಂಧೀಕಿ ಜೈ ಎಂದು ಕೂಗಿದರೆ ಅದು ಒಂದು ತಕ್ಸೀರು ಎಂದು ಕಾಣುತ್ತದೆ. ಈ ರೀತಿ ಕೂಗಬಾರದು ಎಂಬುದಾಗಿ ಒಂದು ಕಾನೂನನ್ನು ತರಬಹುದೆಂದು ಕಾಣುತ್ತದೆ. ಅಜ್ಜಂಪುರದಲ್ಲಿ ನಡೆದ ವಿಚಾರದ ಬಗ್ಗೆ ನಾನು ಮುಖ್ಯಮಂತ್ರಿ ಯವರನ್ನು ಕೇಳಿದಾಗ ಅವರು ಆ ಬಗ್ಗೆ ಐ. ಜಿ. ಪಿ. ಅವರಿಗೆ ಬರೆದಿದ್ದೇನೆ, ಅವರು ವಿಚಾರಣೆ

ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವತ್ತಿನ ದಿವಸ ಏನೇ ಘಟನೆಗಳು ನಡೆಯಲಿ ಅವನ್ನು ಪತ್ರಿಕೆಯವರು ಬಹಳ ಚೆನ್ನಾಗಿ ವರದಿಮಾಡುತ್ತಾರೆ. ಬೆಳಗಾಂ ಬಗ್ಗೆ ಈ ಸರ್ಕಾರದವರು ಮೊದಲಿನಿಂದಲೂ ಕೂಡ ಒಂದು ಸರಿಯಾದ ನಿಲುವನ್ನು ಸರಿಯಾದ ದೃಷ್ಟಿಕೋನವನ್ನು ತಳೆಯಲಿಲ್ಲ. ಮೊನ್ನೆ ಬೆಳಗಾಂನಲ್ಲಿ ಸಭೆ ಸೇರಿದ್ದರು. ಅಲ್ಲಿ ಇವರು ಸಾಧಿಸಿದ್ದು ಏನು? ಅಲ್ಲಿ ಮಾತನಾಡಿದವರೆಲ್ಲಾ ಇಂದಿರಾಗಾಂಧಿಯವರನ್ನು ಬೈದಿದ್ದು ಬೈದಿದ್ದೆ. ಅಷ್ಟೇ ಇವರು ಮಾಡಿದ್ದು. ಏತಕ್ಕೋಸ್ಕರ ಈ ಒಂದು ವಾತಾವರಣವನ್ನು ಇವತ್ತಿನ ದಿವಸ ಹುಟ್ಟಿಸಿದ್ದಾರೆ ಎಂಬುವನ್ನು ಮುಖ್ಯಮಂತ್ರಿಗಳೇ ಹೇಳಬೇಕು. ಇಬ್ಬರು ಅಧಿಕಾರಿಗಳು ದೆಹಲಿಯಿಂದ ಬಂದರು, ಅವರು ಕೆಲವು ವಿಚಾರಗಳನ್ನು ಹೇಳಿದರು, ಅದಕ್ಕೆ ನಾನು ಬರೆದು ಕಳಿಸಿ ಎಂದು ಹೇಳಿದೆ ಎಂಬುದಾಗಿ ಮುಖ್ಯಮಂತ್ರಿಗಳು ಹೇಳಿರುವ ಸಂಗತಿಗಳು ಪತ್ರಿಕೆಗಳಲ್ಲಿ ಬಂತು. ಪ್ರಧಾನಮಂತ್ರಿಗಳಿಂದ ಈ ವಿಚಾರದಲ್ಲಿ ಒಂದು ಹೇಳಿಕೆ ಬರುವವರೆಗೂ ಕೂಡ ಪತ್ರಿಕೆಗಳಿಗೆ ತಿಳಿಸದೆ ಕಾಯಬಹುದಾಗಿತ್ತು. ಇಲ್ಲವೇ ತಾವೇ ಕೂಡಲೇ ದೆಹಲಿಗೆ ಹೋಗಿ ಪ್ರಧಾನಮಂತ್ರಿಗಳಲ್ಲಿ ಮಾತನಾಡಬಹುದಾಗಿತ್ತು. ಇದನ್ನು ಬಿಟ್ಟು ಕಳೆದ 10 ದಿವಸಗಳಿಂದ ಪ್ರಚಾರ ಮಾಡುವುದರಲ್ಲಿಯೇ ಕಾಲ ಕಳೆಯಲಾಯಿತು. ಈ ರೀತಿ ಪ್ರಚಾರ ಮಾಡುವುದಕ್ಕೆ ಪ್ರಾರಂಭಮಾಡಿದ ಮೇಲೆ ಏನಾಯಿತು ಎಂದರೆ ಕೆಲವರು ದೆಹಲಿಗೆ ಡೆಲಿಗೇಷನ್ ಹೋದರು. ಅವರಲ್ಲಿ ಮಾನ್ಯ ಡಿ. ಎಂ. ಸಿದ್ದಯ್ಯನವರು ಒಬ್ಬರು. ಮಾನ್ಯ ಸಿದ್ದಯ್ಯನವರನ್ನು ನಾನು ಕೇಳಿದಾಗ ಅವರು ಹೇಳಿದರು: Yes, it was a Government delegation; I went ಎಂಬುದಾಗಿ. ಗೌರ್ನಮೆಂಟ್ ಕಡೆಯಿಂದ ಡೆಲಿಗೇಷನ್ ಕಳಿಸಿದ ಮೇಲೆ ನಮ್ಮನ್ನು ಕರೆಸಿಕೊಂಡು ಅಭಿಪ್ರಾಯ ಕೇಳಬೇಕಾದ ಅವಶ್ಯಕತೆಯಾದರೂ ಏನಿತ್ತು? ನಮ್ಮನ್ನು ಕರೆಸಿಕೊಂಡಾಗ ಒಂದು ರುಜುವಿಲ್ಲದ ಪೇಪರನ್ನು ಮುಖ್ಯಮಂತ್ರಿಗಳು ತೋರಿಸಿದರು. ಡೆಲಿಗೇಷನ್ ಕಳಿಸಿದಮೇಲೆ ಈ ಸಭೆಯ ಅಭಿಪ್ರಾಯವನ್ನು ಕೇಳುವ ಅವಶ್ಯಕತೆಯಾದರೂ ಕೂಡ ಏನಿತ್ತು ಎಂದು ಕೇಳುತ್ತೇನೆ. ಈ ವಿಚಾರದಲ್ಲಿ ಹೋರಾಟ ಮಾಡಲು ನಮ್ಮ ರಾಜ್ಯದಿಂದ ಆರಿಸಿ ಹೋದಂತಹ ಪಾರ್ಲಿಮೆಂಟ್ ಸದಸ್ಯರು ಇದ್ದಾರೆ. ನಮ್ಮ ದೇಶದ ರಕ್ಷಣೆ ಮಾಡಬೇಕಾದ್ದು ಅವರ ಕರ್ತವ್ಯ. ಅವರು ಅವರ ಕರ್ತವ್ಯವನ್ನು ಮಾಡುತ್ತೇವೆ ಎಂದು ಹೇಳಿದರು. ಅವರು ಕರ್ತವ್ಯವನ್ನು ಮಾಡುತ್ತಾರೆ ಎಂಬ ನಂಬಿಕೆ ಇದ್ದಮೇಲೆ ಇಲ್ಲಿ ಏನು ಮಾಡಿದರು ಎಂದರೆ, ಮೊದಲನೇ ದಿವಸ ನಮ್ಮನ್ನು ಕೆಲವರನ್ನು ಮಾನ್ಯ ಮುಖ್ಯಮಂತ್ರಿಗಳು ಕರೆದರು— ಎರಡನೇ ದಿವಸವೂ ನಮ್ಮನ್ನು ಕರೆದರು. ಮೂರನೆಯ ದಿವಸ ನಮ್ಮನ್ನು ಕರೆದಾಗ ನಾನು ಮುಖ್ಯಮಂತ್ರಿಗಳಿಗೆ ಹೇಳಿದೆ ಇದನ್ನು ಎಲ್ಲರೂ ಒಪ್ಪಿಕೊಂಡರೆ ಸರಿಮಾಡಬಹುದು. ನಮಗೂ ಈ ದೇಶದ ಗಡಿರಕ್ಷಣೆ ಮಾಡಬೇಕು ಎಂಬ ಕಾತುರತೆ ಇದೆ. ಈ ಗಡಿ ವಿಷಯದಲ್ಲಿ ತೊಂದರೆಯಾಗಬಾರದು ಎನ್ನುವ ಕಾತುರತೆ ನಮ್ಮ ಪಕ್ಷಕ್ಕೂ ಇದೆ. ಈ ಸಭೆಯಲ್ಲಿರತಕ್ಕವರೆಲ್ಲರಿಗೂ ಇದೆ. ಇದಕ್ಕೆ ವಿರೋಧವಾಗಿ ಬೆಳಗಾಮನ್ನು ಬಿಟ್ಟುಕೊಡಿ, ಇನ್ನೊಂದು ಬಿಟ್ಟುಕೊಡಿ ಎಂದು ಹೇಳುವ ಅಧವರು ಯಾರೂ ಇಲ್ಲ. ಆ ರೀತಿ ಯಾರೂ ಯೋಚನೆಮಾಡಿಲ್ಲ ನಾನು ಆಗಲೇ ಹೇಳಿದೆ ನೀವು ನಮ್ಮನ್ನು ಈ ವಿಚಾರದಲ್ಲಿ ಕನ್‌ಸಲ್ಟ್ ಮಾಡುವುದಾದರೆ ವಿಚಾರಮಾಡುವುದಾದರೆ ಎಲ್ಲರೂ ಕೂಡಿ ಈ ಬಗ್ಗೆ ಒಂದು ನಿರ್ಣಯವನ್ನು ತರಬೇಕೆಂಬ ಆಶೆ ನಮಗೆ ಇದೆ. ನಿರ್ಣಯವನ್ನು ತರುವುದಕ್ಕೆ ಅವಕಾಶವನ್ನು ಕೊಡಿ ಎಂದು ನಮ್ಮ ಸಲಹೆಯನ್ನು ಅವರ ಮುಂದೆ ಇಟ್ಟು ಕೇಳಿದಾಗ ಅವರು ನಿನ್ನೆಯ ದಿವಸ ಒಂದು ನಿರ್ಣಯದ ಕರಡು ಪ್ರತಿಯನ್ನು ನನ್ನ ಕೈಯ್ಯಲ್ಲಿ ಕೊಟ್ಟರು. ಆಗ ನಾನು ಹೇಳಿದೆ ಇದನ್ನು ನಾನು ನಮ್ಮ ಪಕ್ಷದ ಮುಂದೆ ಇಡುತ್ತೇನೆ. ಈ ನಿರ್ಣಯವನ್ನು ಏನು ಮಾಡಬೇಕೆಂಬ ಬಗ್ಗೆ ಯೋಚನೆ ಮಾಡುತ್ತೇವೆ, ನಂತರ ನಿಮಗೆ ತಿಳಿಸುತ್ತೇನೆ ಎಂದು ಹೇಳಿದೆ. ಈ ನಿರ್ಣಯವನ್ನು ಮುಖ್ಯ ಮಂತ್ರಿಗಳೇ ಮೂವ್‌ಮಾಡಬೇಕು ಎಂದು ನನ್ನ ಅಭಿಪ್ರಾಯ ಇತ್ತು. ಈ ನಿರ್ಣಯವನ್ನು ಸಭೆಯ ಮುಂದೆ ಯಾರು ಇಡಬೇಕೆನ್ನುವ ಬಗ್ಗೆ ನಾವೆಲ್ಲರೂ 11 ಗಂಟೆಗೆ ಸೇರಿ ತೀರ್ಮಾನ ಮಾಡೋಣ ಎಂದು ಹೇಳಿದ್ದರು. ನಿನ್ನೆಯ ದಿವಸ ಸಂಜೆ ನಾವು ಪಕ್ಷದ ಸಭೆಯಲ್ಲಿ ಮುಖ್ಯ ಮಂತ್ರಿಗಳು ಕೊಟ್ಟ ಕರಡನ್ನು ಯೋಚನೆ ಮಾಡುತ್ತಿರುವಾಗ ಶ್ರೀಮಾನ್ ಗೋಪಾಲ ಗೌಡರ ಹೆಸರಿನಲ್ಲಿ ಅಂಥವೇ ನಿರ್ಣಯ ಹೋಗಿದೆ ಎಂದು ತಿಳಿಯಿತು. ಶ್ರೀಮಾನ್ ಗೋಪಾಲ ಗೌಡರ ಹೆಸರಿನಲ್ಲಿ ಬಂದಂತಹ ನಿರ್ಣಯಕ್ಕೂ ಮುಖ್ಯ ಮಂತ್ರಿಗಳು ನನಗೆ ಕೊಟ್ಟ ಕರಡು ನಿರ್ಣಯಕ್ಕೂ ಯಾವ ಒಂದು ಕಾಮ, ಫುಲ್‌ಸ್ಟಾಪ್ ಕೂಡ ವ್ಯತ್ಯಾಸ ಇರಲಿಲ್ಲ. ನಿನ್ನೆಯ ದಿವಸ ಮುಖ್ಯ ಮಂತ್ರಿಗಳು ನಾವುಗಳೆಲ್ಲರೂ ಒಟ್ಟಿಗೆ ಕೂಡಿ ಯೋಚನೆ ಮಾಡೋಣ ಎಂದು 11 ಗಂಟೆಗೆ ಟೈಮ್‌ಕೊಟ್ಟು ಕಾಲಾವಕಾಶವನ್ನು ಕೊಟ್ಟು ಈ ನಿರ್ಣಯದ ನೋಟೀಸ್ ಕೊಡಿಸುವುದಕ್ಕೆ ಕಾರಣ ಏನಿತ್ತು ಎಂಬುದು ನನಗೆ ಅರ್ಥವಾಗುವುದಿಲ್ಲ. ಈ ನಿರ್ಣಯ ಯಾರ ಹೆಸರಿನಲ್ಲಿ ಬರಬೇಕು ಹೇಗೆ ಬರಬೇಕು ಎಂಬುವನ್ನು ವಿಚಾರ ಮಾಡೋಣ ಎಂದು ಹೇಳಿದ್ದಾರೆ. ಆದರೆ ಈಗ ಈ ರೀತಿ ಮಾಡಿದ್ದಾರಲ್ಲಾ ಎಂದು ನಾನು ರಾತ್ರಿ $8\frac{1}{2}$ ಗಂಟೆಗೆ ಆಮೇಲೆ 9 ಗಂಟೆಯಲ್ಲಿ ಮುಖ್ಯಮಂತ್ರಿ

(ಶ್ರೀ ಹೆಚ್. ಸಿದ್ದವೀರಪ್ಪ)

ಗಳಿಗೆ ಟೆಲಿಫೋನ್ ಮಾಡಿ ಕೇಳಿದೆ, ಆಗ ಮುಖ್ಯ ಮಂತ್ರಿಗಳು ಮನೆಯಲ್ಲಿ ಇಲ್ಲ ಎಂದು ಹೇಳಿದರು. ಆಮೇಲೆ ಮತ್ತೆ ಪ್ರೈವೇಟ್ ಸೆಕ್ರೆಟರಿಗಳಿಗೆ ಫೋನ್‌ಮಾಡಿ ಮುಖ್ಯಮಂತ್ರಿಗಳಿಗೆ ಈ ವಿಷಯವನ್ನು ತಿಳಿಸಿ ಇಂಥಾ ನಂಬರಿಗೆ ಫೋನ್‌ಮಾಡಬೇಕೆಂದು ತಿಳಿಸಿದ್ದೆ. ಯಾರು ಯಾರು ಆ ಸಭೆಗೆ ಬರುತ್ತಾರೆ ಅಥವಾ ಬರುವುದಿಲ್ಲ ಎನ್ನುವುದರ ಬಗ್ಗೆ ಮಾತನಾಡಬೇಕೆಂದು ಹೇಳಿದ್ದೆ. ಸುಮಾರು ನಾಲ್ಕು ಸಾರಿ ಮುಖ್ಯಮಂತ್ರಿಗಳನ್ನು ಫೋನಿನಲ್ಲಿ ಕಾಂಟ್ಯಾಕ್ಟ್ ಮಾಡುವುದಕ್ಕೆ ಪ್ರಯತ್ನ ಮಾಡಿದರೂ ಅದು ಸಾಧ್ಯವಾಗಲಿಲ್ಲ. ಆದರೆ ಅವರೂ ಆ ಬಗ್ಗೆ ನನಗೆ ಏನೂ ಹೇಳಲಿಲ್ಲ. ನಮ್ಮನ್ನು ಕೇಳದೆ ನಿರ್ಣಯವನ್ನು ಈ ಸಭೆಯಲ್ಲಿ ತಂದಮೇಲೆ ನಾನು ಏನು ಹೇಳುವುದು ? ಈ ವಿಷಯವನ್ನು ಮುಖ್ಯ ಮಂತ್ರಿಗಳು ನನಗೆ ಹೇಳುವುದಕ್ಕೆ ಇಷ್ಟಪಡಲಿಲ್ಲವೆಂದು ಕಾಣುತ್ತದೆ ಸಂತೋಷ. ಏತಕ್ಕೋಸ್ಕರ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಈ ಸಮಸ್ಯೆ ಬಗೆಹರಿಯಬೇಕಾದರೆ ನಮ್ಮ ಪಕ್ಷವನ್ನು ಒಂದು ರೀತಿಯಿಂದ ಬೇರೆ ಕಡೆಗೆ ತೋರಿಸಿ ಈ ಪಕ್ಷದವರು ಇದಕ್ಕೆ ವಿರೋಧವಾಗಿದ್ದಾರೆ ಎಂಬ ಭಾವನೆ ಈ ದೇಶದಲ್ಲಿ ಬರತಕ್ಕಂಥ ಹುನ್ನಾರ, ಹುಟಾರ ಇವರಲ್ಲಿ ಇದೆಯೇನೋ ಎನ್ನುವ ಶಂಕೆ ಬರುತ್ತದೆ. ನೀವು ಮಹಾಜನ್ ಕಮಿಷನ್ನಿನ ವರದಿಗೆ 15-12-1967ರಲ್ಲಿ ಒಪ್ಪಿಗೆ ಕೊಟ್ಟಿದ್ದೀರಿ, ಆದರೆ ಈ ಮಹಜನ್ ಕಮಿಷನ್ನಿನ ವರದಿಯನ್ನು ಜಾರಿಗೆ ತರುವುದಕ್ಕೆ ಎರಡು ವರ್ಷಗಳಾದರೂ ನಿಮ್ಮ ಕೈಯ್ಯಲ್ಲಿ ಆಗಲಿಲ್ಲ. ಇನ್ನೂ 10 ವರ್ಷಗಳಾದರೂ ಅದನ್ನು ಜಾರಿಗೆ ತರುವುದಕ್ಕೆ ನಿಮ್ಮ ಕೈಯ್ಯಲ್ಲಿ ಆಗುವುದಿಲ್ಲ. ಈ ಅನುಮಾನ ನಿಮ್ಮಲ್ಲಿ ಇದೆ. ಈ ಪ್ರಶ್ನೆಯನ್ನು ನಾವು ಯೋಚನೆ ಮಾಡಿದ್ದೇವೆ. ಈಗ ಯಾವುದೂ ಬೇಡ ಗೋಟಾಳು. ಸ್ಟೇಟ್ ರೀ ಆರ್ಗನೈಜೇಷನ್ ಆಕ್ಟಿನಲ್ಲಿ ಏನಿದೆ ಅದರ ಪ್ರಕಾರ ಯಾವ ಯಾವ ಭಾಗಗಳು ಎಲ್ಲೆಲ್ಲಿ ಇವೆ, ಅದೇ ಇರಬೇಕು. ಅದರಲ್ಲಿ ಏನೂ ಬದಲಾವಣೆ ಮಾಡಕೂಡದು. ಬದಲಾವಣೆ ಮಾಡಿದರೆ ಇದು ಮೈಮೇಲೆ ಬರುತ್ತದೆ. ಇದನ್ನು ಮಾಡಕೂಡದು. ಬಾರ್ಡರ್ ಅಡ್ಜೆಸ್ಟ್‌ಮೆಂಟ್ ಆದರೆ ಹೊಸೂರು, ತಾಳವಾಡಿ ಫಿರ್ಕಾ, ಕಾಸರಗೋಡು, ಇವೆಲ್ಲವೂ ಮೈಸೂರಿಗೆ ಬರಬೇಕಾಗುತ್ತದೆ. ಪಾಪ ಕಾಸರಗೋಡಿನವರು ಗೋಳಾಡುತ್ತಿದ್ದಾರೆ. ಇವೆಲ್ಲವುಗಳ ಬಗ್ಗೆ ಸಮಗ್ರ ದೃಷ್ಟಿ ಆಗುವವರೆವಿಗೂ 'Let the sleeping dog lie' ಎನ್ನುವ ಹಾಗೆ ಅದು ಹಾಗೆಯೇ ಇರಲಿ. ಈಗ ಅದಕ್ಕೆ ಕೈ ಹಾಕುವುದಕ್ಕೆ ಹೋಗಬೇಡಿ. ಅನೇಕ ಕಷ್ಟನಷ್ಟಗಳು ಈಗಾಗಲೇ ಆಗಿವೆ. ಹಿಂದೆ ಮಹಾಜನ್ ಕಮಿಷನ್ ನೇಮಕ ಮಾಡಿದಾಗ ಗೊಂದಲವುಂಟಾಗಿ ದಾವಣಗೆರೆಯಲ್ಲಿ ಮತ್ತು ಚಿಕ್ಕಮಗಳೂರಿನಲ್ಲಿ ಇನ್ನೂ ಮುಂತಾದ ಕಡೆಗಳಲ್ಲಿ ಎಷ್ಟೋ ಮಕ್ಕಳು ಗುಂಡಿಗೆ ಸಿಕ್ಕಿ ಸತ್ತುಹೋದರು. ಈ ದೃಷ್ಟಿಯಿಂದ ಎಸ್. ಆರ್. ಸಿ. ಆಕ್ಟ್ ಪ್ರಕಾರ ಈಗ ಇರತಕ್ಕ ಸ್ಟೇಟಸ್‌ಕೋ ಆಂಟೆ (Status Quo Ante) ಇಡಬೇಕಾದ್ದು ಸೂಕ್ತ ಎಂದು ನಾವೆಲ್ಲರೂ ಮೀಟಿಂಗ್‌ಮಾಡಿ ಯೋಚನೆಮಾಡಿ ಇದನ್ನು ತಂದಿದ್ದೇವೆ. ಈ ನಮ್ಮ ನಿರ್ಣಯ ಮಹಾಜನ್ ಕಮಿಷನ್ನಿನ ವರದಿಗಿಂತ ಉತ್ತಮವಾದದ್ದು, ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಒಪ್ಪಿಕೊಳ್ಳುತ್ತಾರೆ ಎಂದು ನಾನು ತಿಳಿದಿದ್ದೇನೆ. ಮಹಾಜನ್ ಕಮಿಷನ್ನಿನ ವರದಿಯಿಂದ ನಮಗೆ ಕೆಲವು ಕನ್ನಡ ಭಾಗಗಳು ಬಿಟ್ಟು ಹೋಗುತ್ತವೆ. ನಮ್ಮ ನಿರ್ಣಯವನ್ನು ಒಪ್ಪಿಕೊಂಡರೆ ಈಗ ಹೇಗಿದೆಯೋ ಹಾಗೆಯೇ ಇರುತ್ತದೆ. ಇರುವ ಒಂದು ಇಂಚು ಜಾಗಕೂಡ ಹೋಗುವುದಿಲ್ಲ. ಹಣೆಗೆ ತಿಲಕ ಇಡಲು ಮಣ್ಣು ಕೊಡಬೇಕಾದ ಪರಿಸ್ಥಿತಿ ಬರುವುದಿಲ್ಲ. ನಮ್ಮ ನಿರ್ಣಯವನ್ನು ನೀವು ಯೋಚನೆ ಮಾಡುತ್ತೀರಿ ಎಂದು ನಾನು ತಿಳಿದಿದ್ದೇನೆ. ನಮ್ಮ ನಿರ್ಣಯ ನಿಮಗೆ ಸರಿಯಾಗಿಲ್ಲದಿದ್ದರೆ ಶ್ರೀಮಾನ್ ಶ್ರೀಕಂಠಯ್ಯನವರ ನಿರ್ಣಯವನ್ನು ಒಪ್ಪಿಕೊಳ್ಳಿರಿ. ಏತಕ್ಕೆಂದರೆ ಅವರು ಪ್ರೊಫೆಸರ್ ಆಫ್ ಪಾಲಿಟಿಕ್ಸ್, ಹಿಸ್ಟರಿಯಲ್ಲಿ ಗಡಿ ಸಮಸ್ಯೆ ಬಂದಾಗ ಯಾವರೀತಿ ಆಗಿದೆ, ಏನೇನು ಆಗಿವೆ, ಎಂಬುದನ್ನು ತಿಳಿದುಕೊಂಡು ಅವರು ಅವರ ನಿರ್ಣಯವನ್ನು ತಂದಿದ್ದಾರೆ. ಇಲ್ಲಿ ನಾನು ತಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಹಿಂದೆ ಬರ್ಲಿನ್‌ನಲ್ಲಿ ಹಿಟ್ಲರ್ ಏನು ಮಾಡುತ್ತಿದ್ದ ಎಂದರೆ ಒಂದು ಕಡೆ ಆರ್ಮಿಯನ್ನು ಮಾರ್ಚ್ ಮಾಡುವುದು, ಇನ್ನೊಂದು ಕಡೆ ಚೇಂಬರ್‌ಲೀನ್ ಅವರನ್ನು ಅವರ ಚೇಂಬರಿಗೆ ಕರೆಸಿಕೊಂಡು ರಾಜಿ ಮಾಡಿಕೊಳ್ಳೋಣ ಎಂದು ನಟನೆ ಮಾಡುತ್ತಿದ್ದ. ಈ ರೀತಿಯಾಗಿ ಪ್ರಪಂಚದ ಚರಿತ್ರೆಯಲ್ಲಿ ಬಹಳ ಬಹಳ ಕುತಂತ್ರಗಳು ನಡೆದಿವೆ. ಹೀಗೆ ಈ ಬಗ್ಗೆ ಕುತಂತ್ರಮಾಡದೆ ಇದನ್ನು ಸರಿಯಾದ ರೀತಿಯಲ್ಲಿ ಬಗೆಹರಿಸಬೇಕಾದರೆ ಒಂದು ಹೈಪವರ್ ಕಮಿಷನ್ ಅನ್ನು ನೇಮಕ ಮಾಡಬೇಕು ಎನ್ನುವ ಒಂದು ವಾದವನ್ನು ಇಡುವುದಕ್ಕೆ ಯೋಚನೆಮಾಡಬೇಕು. ಪೂರ್ವಾಪರ ಯೋಚನೆ ಮಾಡಿ ಇದನ್ನು ಮಾಡತಕ್ಕದ್ದು ಬಹಳ ಒಳ್ಳೆಯದು.

ಇನ್ನೊಂದು ವಿಷಯವನ್ನು ನಾನು ಹೇಳುತ್ತೇನೆ. ಇದನ್ನು ನೀವು ದೊಡ್ಡದಾಗಿ ಎಲ್ಲಾ ಸೇರಿಕೊಂಡು ಏನೇನೋ ಮಾಡುತ್ತೇವೆ ಎಂದು ಹೋಗಿ ಏನೋ ಆಗುವುದಕ್ಕಿಂತ ಸ್ವಲ್ಪ ಶಾಂತ

ಚಿತ್ತರಾಗಿ ಯೋಚನೆ ಮಾಡಿ. ಇವೊತ್ತಿನ ದಿವಸ ಈ ರಾಜ್ಯದಲ್ಲಿ ಶ್ರೀಮಾನ್ ವೀರೇಂದ್ರ ಪಾಟೀಲರು ಅಧಿಕಾರವಲ್ಲಿದ್ದಾರೆ. ಆದ್ದರಿಂದ ಅವರು ಬರೆದದ್ದೇ ಆರ್ಡರು ಅವರು ಏನು ಬರೆದರೂ ನಾವು ಅದನ್ನು ಅನುಭವಿಸುತ್ತೇವೆ ಎನ್ನುವುದಕ್ಕಿಂತ ಆರ್ಟ್ ಆಫ್ ಪರ್‌ಸ್ವೂಯೇಷನ್ (Art of persuasion) ನಿಂದ ಹೋಗುವಂಥಾದ್ದು ಬಹಳ ಮುಖ್ಯವಾದದ್ದು. ಈಗ್ಗೆ ಎರಡು ವರ್ಷಗಳ ಹಿಂದೆಯೇ ನಾನು ಹೇಳಿದ್ದೇನೆ. ಇದು ಎಲ್ಲರಿಗೂ ಸೇರಿದೆ ಎನ್ನುವ ಭಾವನೆ ಬರಬೇಕಾದರೆ ಇಲ್ಲಿ ಒಂದು ಸಂಯುಕ್ತ ಮಂತ್ರಿಮಂಡಲ ರಚಿಸಬೇಕು. ಇದು ನಿಮ್ಮ ಕೈಯಲ್ಲಿ ಆಗುವುದಿಲ್ಲ. ನಿಮಗೆ ಜಾಂಡೀಸ್ ಬಂದುಹೋಗಿದೆ. ನಿಮ್ಮಿಂದ ಈ ಕಾರ್ಯ ಮಾಡುವುದಕ್ಕಾಗುವುದಿಲ್ಲ. ನೀವು ನಿಮ್ಮ ಜಾಗವನ್ನು ಬಿಟ್ಟು ಇಳಿದರೆ ದೇಶಕ್ಕೆ ನೀವು ದೊಡ್ಡ ಉಪಕಾರ ಮಾಡುತ್ತೀರಿ. ನೀವು ಇದಕ್ಕಿಂತ ಹೆಚ್ಚಿನ ಉಪಕಾರಮಾಡಬೇಕಾದ್ದಿಲ್ಲ. Trust begets tiust, love begtes love ! and hatred begets hatred ಎನ್ನುವ ಹಾಗೆ ನಿಮಗೆ ಕೇಂದ್ರಸರ್ಕಾರದಲ್ಲಿ ಸರಿಯಾದ ಹೊಂದಾಣಿಕೆ ಇಲ್ಲ. ನಮಗೆ ತೊಂದರೆಯಾಗುತ್ತದೆ. ಏತಕ್ಕೋಸ್ಕರ ಈ ರಾಜ್ಯವನ್ನು ಕಷ್ಟಕ್ಕೆ ಸಿಕ್ಕಿಸುತ್ತೀರಿ ? ಯಾರಾದರೂ ಮಹನೀಯರು ನಿಮ್ಮ ಸ್ಥಾನಕ್ಕೆ ಬರಬಹುದು. ಅನುಕೂಲವಾದ ವಾತಾವರಣವನ್ನುಂಟುಮಾಡತಕ್ಕವರು ಬರಲಿ. ಈಗ ನಾನು ಹೇಳುವುದೇನೆಂದರೆ ಈಗ ನೀವು ವಾದಗ್ರಸ್ತರಾದ ಒಬ್ಬ ವ್ಯಕ್ತಿಯಾಗಿದ್ದೀರಿ. ನೀವು ಬೆಳಗಾವಿಯಲ್ಲಿ ಭಾಷಣ ಮಾಡಿ ನಿಮ್ಮ ಅಧಃಪತನಕ್ಕೆ ದಾರಿ ಮಾಡಿಕೊಂಡಿರಿ. ಇವೊತ್ತು ಈ ದೇಶವನ್ನು ಉಳಿಸಬೇಕೆಂಬ ಆಶೆ ಆಕಾಂಕ್ಷೆ ನಿಮಗೆ ಇದ್ದರೆ ಈಗಲೇ ನಿಮ್ಮ ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟುಬಿಡಿ ಎಂದು ಕೇಳುತ್ತೇನೆ.

ಇನ್ನೊಂದು ವಿಚಾರ ಹೇಳುತ್ತೇನೆ. ಇವತ್ತು ಆಲ್ ಪಾರ್ಟಿ ಡೆಲಿಗೇಷನ್ ಹೋಗಬೇಕೆಂದು ಹೇಳುತ್ತಿದ್ದಾರೆ. ಇದರಿಂದ ಏನು ಸಾಧಿಸುತ್ತಾರೆಂದು ನನಗಂತೂ ಅರ್ಥವಾಗುತ್ತಾ ಇಲ್ಲ. ಇವತ್ತು ಅಲ್ಲಿ ನಮ್ಮ ಪಾರ್ಲಿಮೆಂಟ್ ಸದಸ್ಯರು ಇದ್ದೇ ಇರುತ್ತಾರೆ. ಆಲ್ ಪಾರ್ಟಿ ಡೆಲಿಗೇಷನ್ ಎಂದು ಮಾಡುವುದಕ್ಕಿಂತ ನೀವು ಒಂದು ತಿಂಗಳು ಅಲ್ಲಿ ಕ್ಯಾಂಪ್ ಮಾಡಿ ; ಒಂದು ಆಸನ ಹಾಕಿಕೊಂಡು ಕೂತುಕೊಂಡು ಬಿಡಿ. ನಿಮಗೆ ಆ ರೀತಿ ಮಾಡತಕ್ಕ ಶಕ್ತಿ ಇದೆ. ಅಲ್ಲಿ ಹೋಗಿ ಕೇಳಿ. ಆದ್ದರಿಂದ ನಾನಾದರೂ ಹೇಳುತ್ತೇನೆ—ಇದು ಬಹಳ ದುರ್ದೈವದ ಸಂಗತಿ, ಇದನ್ನು ಬೆಳೆಸುವುದಕ್ಕೆ ಬಿಡಬೇಡಿ. ಇವತ್ತು ಹುಬ್ಬಳ್ಳಿ, ಧಾರವಾಡದ ಮಕ್ಕಳು ಇದರಿಂದ ಸಂಕಟಕ್ಕೆ ಗುರಿಯಾಗಿದ್ದಾರೆ. ಇದರಿಂದ ಕಷ್ಟಕ್ಕೆ ಸಿಗತಕ್ಕವರು ಮಕ್ಕಳು ಮತ್ತು ನಿರಪರಾಧಿಗಳು. ಯಾರು ಇದಕ್ಕೆ ಕಾರಣಕರ್ತರು ಇದ್ದಾರೋ ಅವರು ಇದಕ್ಕೆ ಈಡಾಗುವುದಿಲ್ಲ, ಈಡಾಗುವುದು ನಿರಪರಾಧಿಗಳು. ಆದ್ದರಿಂದ ಇದನ್ನು ಬಗೆಹರಿಸಲು ಕೂಡಲೇ ಮುಖ್ಯಮಂತ್ರಿಯವರು ಹೋಗಬೇಕು. ಇದರಲ್ಲಿ ಇಜ್ಜತ್ ಅಥವಾ ಅಹಂ ಎಂದು ಏನು ಇದೆ, ಅದನ್ನು ಬಿಟ್ಟು ಅಲ್ಲಿ ಹೋಗಿ ಕೂತುಕೊಂಡು, ಕೇಂದ್ರ ಸರ್ಕಾರದವರೊಡನೆ ವ್ಯವಹರಿಸಿ ಇದನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ ಬೆಳಗಾಂನಲ್ಲಿರತಕ್ಕ ಜನರಾಗಲಿ, ಉತ್ತರ ಕರ್ನಾಟಕದ ಜನರಾಗಲಿ, ಯಾರೇ ಆದರೂ ತಪ್ಪು ತಿಳಿದುಕೊಳ್ಳುವುದಕ್ಕೆ ಅವಕಾಶವಿಲ್ಲ. ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಅವರ ಸಂಘಟನೆಯಲ್ಲಿ ನಾವೂ ಭಾಗಿಯಾಗಿ ಅವರಿಗೆ ಏನು ಸಹಾಯ ಬೇಕಾಗುತ್ತದೆ, ಅದನ್ನು ನಮ್ಮ ಪಕ್ಷದವರು ಕೊಡಲು ತಯಾರಾಗಿದ್ದೇವೆ. ಆದರೆ ನಮ್ಮ ಸಹಕಾರವನ್ನು ಮತ್ತು ಸಹಾಯವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಮನಸ್ಸಿಲ್ಲ, ಎಂಬುದನ್ನು ಹೇಳಿ ಈ ನಿರ್ಣಯವನ್ನು ಅಂಗೀಕರಿಸಬೇಕೆಂದು ಸೂಚಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಸಭಾಧ್ಯಕ್ಷರೇ, ಈಗ ತಾನೆ ಮಾನ್ಯ ಸಿದ್ದವೀರಪ್ಪನವರು ಈ ನಿರ್ಣಯವನ್ನು ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಅಂತ್ಯದಲ್ಲಿ ಕೊನೆಯ ಪಕ್ಷ ಈ ಸಭೆ ಶ್ರೀಕಂಠಯ್ಯನವರ ನಿರ್ಣಯವನ್ನಾದರೂ ಒಪ್ಪಿಕೊಳ್ಳಬೇಕು ಇತ್ಯಾದಿ ಹೇಳಿದ್ದಾರೆ. ಇನ್ನೂ ಅನೇಕ ನಿರ್ಣಯಗಳು ಇವೆ. ನಾನೂ ಒಂದು ನಿರ್ಣಯವನ್ನು ಕೊಟ್ಟಿದ್ದೇನೆ ; ಮತ್ತು ಈಗಾಗಲೇ ಆ ನಿರ್ಣಯದ ಪ್ರತಿಗಳನ್ನು ತಾವು ಹಂಚಿದ್ದೀರೆಂದು ತಿಳಿದುಕೊಂಡಿದ್ದೇನೆ. ಇದರಲ್ಲಿ ಮಾನ್ಯ ಸಿದ್ದವೀರಪ್ಪನವರು ನನ್ನ ಹೆಸರಿನಲ್ಲಿರುವ ನಿರ್ಣಯದ ಅಂಗ್ಲ ಭಾಷೆಯ ಪ್ರತಿಯನ್ನು ಓದಿದ್ದಾರೆಂದು ನಾನಂದುಕೊಂಡಿದ್ದೇನೆ. ಹಾಗೇ ಅವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು—ಅದು ಮಾಡಬೇಕೇ ಬೇಡವೇ ಅನ್ನುವುದು ಅದರ ಔಚಿತ್ಯವನ್ನು ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನನ್ನ ಹೆಸರು ಇಲ್ಲಿ ಬಂದಿರುವುದರಿಂದ ಅಷ್ಟಕ್ಕೆ ಮಾತ್ರ ಉತ್ತರ ಕೊಡುತ್ತೇನೆ. ನಿನ್ನೆಯ ದಿವಸ ನಾವು ಎಲ್ಲಾ, ಅಂದರೆ, ಸಿದ್ದವೀರಪ್ಪನವರು, ಶಿವಪ್ಪನವರು ನಾನು ಮತ್ತು ಇತರ ನಮ್ಮ ಮಿತ್ರರು, ಒಂದು ಸಭೆಯಲ್ಲಿ ಸೇರಿದಾಗ ಕೆಲವು ವಿಷಯಗಳ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ನಮ್ಮ ನಿಲುವು

(ಶ್ರೀ ಎಸ್. ಗೋಪಾಲಗೌಡ)

ಏನು ಇರಬೇಕು ; ಮತ್ತು ಈ ಸಂದರ್ಭದಲ್ಲಿ ಪತ್ರಿಕೆಗಳ ವರದಿಗಳನ್ನು ಗಮನದಲ್ಲಿಟ್ಟುಕೊಂಡರೆ ರಾಜ್ಯಸರ್ಕಾರದವರು ಏನು ನಿಲುವನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಬಹಳ ಪ್ರಸ್ತಾಪ ಮಾಡಿದ್ದೇವೆ. ಈ ಸಂದರ್ಭದಲ್ಲಿ ಸಂಕ್ಷಿಪ್ತವಾಗಿ ಹಿಂದಿನ ನಿಲುವಿನ ವಿಷಯವನ್ನು ತಿಳಿಸಿ, ನಂತರ ಈ ಪರಿಸ್ಥಿತಿಯಲ್ಲಿ ರಾಜ್ಯಸರ್ಕಾರ ಅಥವಾ ವಿಧಾನಸಭೆ ತಾಳಿರುವ ನಿರ್ಣಯದ ದೃಷ್ಟಿಯಿಂದ ರಾಜ್ಯದ ಹಿತದೃಷ್ಟಿಯಿಂದ, ಸಮಗ್ರತೆಯ ದೃಷ್ಟಿಯಿಂದ, ಕಲ್ಯಾಣವಾದೀತು ಎಂಬುದನ್ನು ಗಮನದಲ್ಲಿಟ್ಟು ಕೊಂಡು ಅಲ್ಲಿಯೇ ಒಂದು ಕರಡು ನಿರ್ಣಯವನ್ನು ಬರೆದೆ. ಅದರಲ್ಲಿ ಇಷ್ಟೇ ಇವೆ. ಮಹಾಜನ್ ಆಯೋಗದ ತೀರ್ಪನ್ನು ಕೇಂದ್ರಸರ್ಕಾರ ಕಾರ್ಯಗತಗೊಳಿಸುವಲ್ಲಿ ತೀರಾ ವಿಳಂಬ ಮಾಡಿರು ವುದಲ್ಲದೆ, ಈಗ ಪತ್ರಿಕೆಗಳ ವರದಿಗಳ ಪ್ರಕಾರ ಏಕಪಕ್ಷೀಯವಾಗಿ ಮಹಾರಾಷ್ಟ್ರಕ್ಕೆ ಅನುಕೂಲ ವಾಗುವಂತಹ ತಿದ್ದುಪಡಿ ಮಾಡಿ, ಕೇಂದ್ರಸರ್ಕಾರದವರು ತಮ್ಮ ತೀರ್ಪನ್ನು ಕಾರ್ಯಗತ ಮಾಡುವ ಸಿದ್ಧತೆಯಲ್ಲಿರುವರೆಂಬುದನ್ನು ತಿಳಿದು ಈ ಸಭೆ ತನ್ನ ತೀವ್ರ ಆಶ್ಚರ್ಯ ಮತ್ತು ಕಳವಳವನ್ನು ವ್ಯಕ್ತಪಡಿಸುತ್ತಾ, ಕರ್ನಾಟಕ ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ ಇದನ್ನು ಪ್ರತಿಭಟಿಸುವುದಲ್ಲದೆ, ಮುಂದಿನ ಆಗುಹೋಗುಗಳ ಬಗ್ಗೆ ಕೇಂದ್ರಸರ್ಕಾರವೇ ಹೊಣೆಯಾಗ ಬೇಕಾಗುವುದು ಎಂದು ಈ ಸಭೆಯು ಸ್ಪಷ್ಟಪಡಿಸುತ್ತದೆ ಎಂದು ಇಂಥ ಒಂದು ನಿರ್ಣಯವನ್ನು ಮಾಡೋಣ, ಯಾರನ್ನೂ ಟೀಕೆ ಮಾಡುವುದು ಬೇಡ ಎಂದು ಈ ನಿರ್ಣಯವನ್ನು ಇಟ್ಟೆ. ಅದನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡಿದರು. ನಾನು ಏನೋ ಸ್ವಲ್ಪ ತಡವಾಗಿ ಬಂದಿರುವುದರಿಂದ ಒಂದು ಮಾತು ಹೇಳಿದೆ. 1967 ನೇ ಇಸವಿ ಡಿಸೆಂಬರ್ 15ನೇ ತಾರೀಖಿನಂದು ಈ ಸಭೆಯು ಅಂಗೀಕರಿ ಸಿರುವ ನಿರ್ಣಯವನ್ನು ಪುನರುಚ್ಚರಿಸುತ್ತಾ, ಕೊನೆಯಲ್ಲಿ ಬೇಕೆಂದರೆ, ಒಂದು ಕಮಿಷನ್ ನೇಮಕ ಮಾಡುವುದೋ, ಡೆಲಿಗೇಷನ್ ಕಳಿಸುವುದೋ—ಅದನ್ನು ಜೋಡಿಸಿ ತಿದ್ದುಪಡಿ ಮಾಡಿ ಇಂಥ ಒಂದು ನಿರ್ಣಯವನ್ನು ಈ ಸಂದರ್ಭದಲ್ಲಿ ರಾಜ್ಯಸರ್ಕಾರದವರು ಅಂಗೀಕರಿಸುವುದರಲ್ಲಿ ತಪ್ಪೇನಿಲ್ಲವೆಂದು ನಾನು ಹೇಳಿದೆ; ಮತ್ತು ಯಾರು ಈ ನಿರ್ಣಯವನ್ನು ಮಂಡಿಸಬೇಕೆಂಬುದು ಇನ್ನೊಂದು ಪ್ರಶ್ನೆ. ಅದಕ್ಕೆ ಮಂಚೆಯೂ ಯಾರಾದರೂ ಕೊಟ್ಟಿದ್ದಾರೋ ಎಂದು ಗೊತ್ತಿಲ್ಲ. ನಾನು ಬರೆದುಕೊಟ್ಟ ವಿಷಯವನ್ನು ಅವರು ಓದಿದ್ದಾರೆ. ಅದರ ಮೇಲೆ ಅವರು ಏನು ಹೇಳಿದ್ದಾರೆಂದರೆ, ನಮಗೆ ಸ್ಪಷ್ಟ ವಾದ ಕರಡು ನಿರ್ಣಯವನ್ನು ಕೊಡಿ, ಅದನ್ನು ನಾವು ನಮ್ಮ ಪಕ್ಷದ ಸದಸ್ಯರ ಮುಂದೆ ಇಡುತ್ತೇವೆ ಮತ್ತು ನಾವು ಅದನ್ನು ಸಮರ್ಥನೆ ಮಾಡಬೇಕೋ ವಿರೋಧಿಸಬೇಕೋ ಎಂಬ ತೀರ್ಮಾನವನ್ನು ಕೈಗೊಳ್ಳುತ್ತೇವೆಂದು ನಿನ್ನೆ ಅವರು ಹೇಳಿದಂತಹ ಮಾತು. ಆದರೆ ಇವತ್ತು 11 ಗಂಟೆಗೆ ಬಂದಾಗ ಏನು ಗೊತ್ತಾಯಿತು ಎಂದರೆ, ಶ್ರೀ ಹಾನ್ ಸಿದ್ದವೀರಪ್ಪನವರು ಈ ಸಭೆಯಲ್ಲಿ ಭಾಗವಹಿಸುವುದಿಲ್ಲ ವೆಂದು ಹೇಳಿದ್ದಾರೆ ಎಂದು. ನಾವು ಸ್ವಲ್ಪಮಟ್ಟಿಗೆ ಅವರು ಬರುವುದಿಲ್ಲವೆಂಬುದನ್ನು ತಿಳಿದು ವಿವಂಚನೆಗೆ ಒಳಗಾಗಿದ್ದರೂ, ಇಲ್ಲಿಯ ಕೆಲಸವನ್ನು ಮಾಡಬೇಕಾಯಿತು. ಅದರ ಕನ್ನಡ ಪ್ರತಿ ಈಗಲೂ ನನಗೆ ಸಿಗಲಿಲ್ಲ. ನಾನು ಒಂದು ಸೂಚನೆಯನ್ನು ಸಭೆಯ ಮುಂದೆ ಇಡುತ್ತೇನೆ ಎಂದು ಇವತ್ತಿನ ಕಾರ್ಯ ಕಲಾಪದಲ್ಲಿ ಸೇರಿಸಿದ್ದರು. ಅದನ್ನು ನೋಡಿ ಮಾನ್ಯ ಶ್ರೀ ಕೃಷ್ಣನ್ ಅವರಿಗೆ ಎಷ್ಟು ಆಶ್ಚರ್ಯವಾಯಿತೋ ನನಗೂ ಅಷ್ಟೇ ಆಶ್ಚರ್ಯವಾಯಿತು. ನಾನು ಒಂದು ತಪ್ಪು ಮಾಡಿದೆ. ನಿನ್ನೆ ಸ್ಪೀಕರ್ ಲಾಂಜ್‌ನಲ್ಲಿ ತಾವು ಒಂದು ಡ್ರಾಫ್ಟನ್ನು ಓದಿದಾಗ ಅದು ಹೆಚ್ಚುಕಡಿಮೆ ನನ್ನ ಮೂಲ ನಿರ್ಣಯದ ಹಾಗೆಯೇ ಇತ್ತು. ಅದರಲ್ಲಿ ಕೆಲವು ವಾಕ್ಯಗಳನ್ನು ಸೇರಿಸಲಾಗಿತ್ತು. ಅದನ್ನು ನಾನು ಒಪ್ಪಿಕೊಂಡೆ. ಮಾನ್ಯ ಶ್ರೀ ನಾಗಪ್ಪನವರ ನಿರ್ಣಯವೂ ಕೂಡ ಅದೇ ರೀತಿಯಲ್ಲಿದೆ. ಹೀಗೆ ಅನೇಕ ನಿರ್ಣಯಗಳು ಇವೆ. ಆದ್ದರಿಂದ ನಾನು ಕೇಳಿ ಯೋಚಿಸಿ ಈ ನಿರ್ಣಯವನ್ನು ಸಭೆಯ ಮುಂದೆ ಸರ್ಕಾರದ ಪರವಾಗಿ ಮಂಡಿಸುತ್ತಾ ಇಲ್ಲ.

3–30 P.M.

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರು ಒಪ್ಪಿಕೊಂಡರೆ ಒಂದು ಮಾತನ್ನು ಹೇಳು ತ್ತೇನೆ. ನೀವು ಯೋಚಿಸಿ ಇದನ್ನು ಇಟ್ಟಿದ್ದೀರಿ ಎಂದು ನನ್ನ ಆಪಾದನೆಯಲ್ಲ. ನಾನು ನಿನ್ನೆ ಮಧ್ಯಾಹ್ನ ಒಂದೂವರೆ ಘಂಟೆಗೆ ಮುಖ್ಯ ಮಂತ್ರಿಗಳನ್ನು ಕಂಡು ಮಾತನಾಡಿದ ಮೇಲೆ, ಸರ್ಕಾರದ ಪರವಾಗಿ ಮಾನ್ಯ ಶ್ರೀ ವೆಂಕಟರಮಣಯ್ಯರ್ ಅವರು ಒಂದು ನಿರ್ಣಯವನ್ನು ಬರೆದುಕೊಟ್ಟರು. ಯಾರು ಇದನ್ನು ಸಭೆಯ ಮುಂದೆ ಮೂವ್ ಮಾಡುವವರು ಎಂಬುದಾಗಿ ಕೇಳಿದಾಗ ನಾಳೆ 11 ಘಂಟೆಗೆ ಅದನ್ನು ತೀರ್ಮಾನ ಮಾಡೋಣವೆಂದು ಹೇಳಿದ ಮೇಲೆ ಆ ನಿರ್ಣಯವನ್ನು ನಾವು ತೆಗೆದು ಕೊಂಡು ಹೋಗಿ ಸಾಯಂಕಾಲ ಸಭೆ ಸೇರಿ ಯೋಚನೆ ಮಾಡುತ್ತಿರುವಾಗ, ಅಜೆಂಡಾ ಪೇಪರ್‌ನಲ್ಲಿ

ಈ ನಿರ್ಣಯದ ನೋಟೀಸ್ ನಮ್ಮ ಮುಂದೆ ಬಂತು. ಆದ್ದರಿಂದ ಮಾನ್ಯ ಶ್ರೀ ಗೋಪಾಲಗೌಡರು ಅದನ್ನು ಈ ಸಭೆಯಲ್ಲಿ ಇಟ್ಟಿದ್ದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಎಲ್ಲರೂ ಕೂತು ಕೊಂಡು ಯೋಚನೆಮಾಡಿ ಈ ನಿರ್ಣಯವನ್ನು ಇಡಬೇಕು. ನಮಗೆ ಅದರ ಕರಡನ್ನು ಯೋಚನೆ ಮಾಡುವುದಕ್ಕೆ ಅವಕಾಶವಿಲ್ಲದೇ ಇರುವಾಗ ಈ ನಿರ್ಣಯದ ನೋಟೀಸ್ ಬಂತು. ಅಷ್ಟೇ ಹೊರತು ಇನ್ನೊಂದೂ ಇಲ್ಲ.

ಶ್ರೀ ಎಸ್. ಗೋಪಾಲಗೌಡ.--ಮಾನ್ಯ ಸದಸ್ಯರ ವಿವರಣೆ ಬಗ್ಗೆ ನಾನು ಚಿರಋಣಿಯಾಗಿದ್ದೇನೆ. ಇವತ್ತು ಸಭೆ ಸೇರಿದಾಗ ಹೇಳಿದೆ. ನಿನ್ನೆ ಮಾನ್ಯ ಶ್ರೀ ಸಿದ್ಧವೀರಪ್ಪನವರ ಮುಂದೆ ಚರ್ಚೆ ಮಾಡಿದಂಥ ಆಂಗ್ಲಭಾಷೆಯಲ್ಲಿ ಬರೆದಂಥ ನಿರ್ಣಯದಲ್ಲಿ ಸ್ವಲ್ಪ ತಿದ್ದುಪಡಿಯಾಗಿದೆಯೆಂದು. ಕಾರಣ, ಅದರಲ್ಲಿ ಕಾಸರಗೋಡು ವಿಷಯ ಬಿಟ್ಟುಹೋಗಿತ್ತು. ಅದು ತಿದ್ದುಪಡಿಯಾಗಿದೆ. ಅದಕ್ಕೆ ಇನ್ನೊಂದು ಕಾರಣ, ಮಾನ್ಯ ಶ್ರೀ ಕೃಷ್ಣನ್ ಅವರು ಅದೇ ತರಹ ತಿದ್ದುಪಡಿಗಳನ್ನು ತಂದಿದ್ದರೂ ಬಹಳ ದೊಡ್ಡ ಮನಸ್ಸು ಮಾಡಿ ಅದನ್ನು ಹಿಂದೆ ತೆಗೆದುಕೊಂಡಿದ್ದಾರೆ. ಏಕೆಂದರೆ ಅವರ ನಿರ್ಣಯದಲ್ಲಿಯೂ ನನ್ನ ನಿರ್ಣಯದಲ್ಲಿದ್ದಂಥ ಎಲ್ಲಾ ವಿಷಯಗಳು ಅಡಕವಾಗಿವೆ. ನಿನ್ನೆ ನಮ್ಮ ಕೈಯಲ್ಲಿ ಇದ್ದಂಥ ನಿರ್ಣಯವನ್ನು ತಿದ್ದುಪಡಿ ಮಾಡಲಾಗಿದೆ. ನಂತರ ಈ ನಿರ್ಣಯವನ್ನು ಸಭೆಯ ಮುಂದೆ ಇಡಲು ನಾನು ಸಿದ್ಧವಿರಲಿಲ್ಲ. ಮುಖ್ಯಮಂತ್ರಿಗಳು ಈ ನಿರ್ಣಯವನ್ನು ಇಡಲಿಕ್ಕೆ ಒಂದು ಕಷ್ಟವಿದೆಯೆಂದು ತಿಳಿದಮೇಲೆ, ನಾನು ಆ ವಿಷಯವನ್ನು ಅರ್ಥಮಾಡಿಕೊಂಡು ಈ ನಿರ್ಣಯವನ್ನು ವಿರೋಧಪಕ್ಷದ ನಾಯಕರಾಗಲೀ ಅಥವಾ ಸಿದ್ಧವೀರಪ್ಪನವರಾಗಲೀ ಸಭೆಯ ಮುಂದೆ ಇಡಬಹುದೆಂದು ನಾನು ಹೇಳಿ, ಹೀಗೆ ಎರಡು ಹೆಸರುಗಳನ್ನು ಸ್ಪಷ್ಟಪಡಿಸಿದ್ದೇನೆ. ನನ್ನ ಡ್ರಾಫ್ಟ್ ಎಂದು ಕೊಟ್ಟಿಲ್ಲ. ಇಂತಹ ನಿರ್ಣಯವನ್ನು ಈ ಸಂದರ್ಭದಲ್ಲಿ ವಿಧಾನಸಭೆ ಅಂಗೀಕರಿಸುವುದರಲ್ಲಿ ತಪ್ಪು ಇಲ್ಲ. ಅಂಗೀಕರಿಸುವ ಅಗತ್ಯವಿದೆಯೆಂದು ಹೇಳಿದೆನೇ ಹೊರತು ನಾನು ಇನ್ನು ಹೆಚ್ಚಿಗೆ ಏನನ್ನೂ ಹೇಳಲಿಲ್ಲ. ನಾನು ಒಂದು ವಿನಂತಿಯನ್ನು ಬೇಡಬೇಕಾಗಿದೆ. ಮಾನ್ಯ ಏಕೀಕರಣ ಸಮಿತಿಯ ಸದಸ್ಯರ ವಿರುದ್ಧ ಗೋಪಾಲಗೌಡರು ಮಾತನಾಡುತ್ತಿದ್ದಾರೆಂದು ದಯವಿಟ್ಟು ಭಾವಿಸಬಾರದೆಂಬುದಾಗಿ ನಾನು ಅವರಲ್ಲಿ ಮೊದಲೇ ಕೇಳಿಕೊಳ್ಳುತ್ತೇನೆ. ಎರಡನೆಯದು, ಹಳ್ಳಿಯನ್ನು ಒಂದು ಘಟಕವಾಗಿ ಇಟ್ಟುಕೊಳ್ಳಬೇಕೆಂಬ ವಿಭಜನೆಯ ಸೂತ್ರವನ್ನು ಕೊಟ್ಟಂಥ ಪಂಡಿತ ಪಾಟಸ್ಕರ್ ಅವರು ಇವತ್ತು ಇಲ್ಲ. ಅವರು ದಿವಂಗತರಾಗಿದ್ದಾರೆ, ಅವರ ಬಗ್ಗೆ ನನ್ನ ಅನುತಾಪವನ್ನು ಸೂಚಿಸುತ್ತೇನೆ. ಮತ್ತು ಮಹಾಜನ್ ಆಯೋಗದ ವರದಿಯನ್ನು ಬರೆದಂಥ ಮಹಾಜನ್ ಅವರು ದಿವಂಗತರಾಗಿದ್ದಾರೆ. ನಾನು ಹಿಂದೆ ಇದರ ಬಗ್ಗೆ ಮಾತನಾಡಿದಾಗ, ಹೋದಸಾರಿಯೂ ಹೀಗೆಯೇ ಆಯಿತು. ಇದು ಬಹುಶಃ ನನ್ನ ದುರಾದೃಷ್ಟವೆಂದು ನಾನು ತಿಳಿಯುತ್ತೇನೆ. ಆಗಲೂ ತಾವೇ ಉಪಾಧ್ಯಕ್ಷರಾಗಿದ್ದಿರಿ. ಯಾರು ಕೊಟ್ಟಿರುವ ವರದಿಯನ್ನು ಈ ಸಭೆ ಚರ್ಚಿಸಿ ತನ್ನ ಅಭಿಮತವನ್ನು ವ್ಯಕ್ತಪಡಿಸಬೇಕಾಗಿತ್ತೋ ಅವರು ಈಗ ನಮ್ಮ ಮುಂದೆ ಇಲ್ಲ. ಮಹಾಜನ್ ಆಯೋಗದ ವರದಿಯನ್ನು ಚರ್ಚೆಮಾಡುವ ಮುಂಚೆ ಮಹಾಜನ್ ಅವರು ತೀರಿಹೋಗಿದ್ದಾರೆ. ಅವರಿಗೆ ನಮ್ಮ ಸಂತಾಪ ಸೂಚಿಸಿದ್ದೇನೆ. ಮೊನ್ನೆತನಕ ಇದ್ದಂಥ ಶ್ರೀ ಪಾಟಸ್ಕರ್ ಅವರೂ ಈಗ ಇಲ್ಲ. ಇದು ಒಂದು ರೀತಿಯಲ್ಲಿ ದುರದೃಷ್ಟಕರ.

ಎರಡನೆಯದಾಗಿ ಈಗ ಪ್ರಕೃತ ನನ್ನ ನಿರ್ಣಯ ಸ್ವಯಂಸ್ಪಷ್ಟವಿದೆ. ಆದರೆ ನಾನು ಕನ್ನಡಿಗನಾಗಿರುವುದರಿಂದ ಕನ್ನಡದಲ್ಲಿ ಬರೆದಿರುತ್ತೇನೆ. ಕೈಬರಹದ ಪ್ರತಿಯೊಂದನ್ನು ಕೊಟ್ಟಿದ್ದೇನೆ. ನನ್ನ ನಿರ್ಣಯ ಸ್ವಯಂಸ್ಪಷ್ಟವಾಗಿದೆ. ಈಗ ನಾವು ಪಕ್ಷ ಬದಲಾಯಿಸಬಹುದು. ಆದರೆ ನಮ್ಮ ನಿಲುವನ್ನು ಬದಲಾಯಿಸುವುದು ಕಷ್ಟ. ಯಾವಾಗ ಒಂದು ವಿಷಯದ ಬಗ್ಗೆ ಒಂದು ಧೋರಣೆಯನ್ನು ತಳೆಯುತ್ತೇವೋ ಆಗ ಯಾವುದೋ ಒಂದು ಕಾರಣಕ್ಕಾಗಿ ಅದನ್ನು ಪದೇ ಪದೇ ಪ್ರತಿದಿವಸ ಬದಲಾವಣೆ ಮಾಡುವುದು ಕಷ್ಟ. ಹಿಂದಿನ ಭಾಷಣದಲ್ಲಿ ಹೇಳಿದ್ದೇನೆ, ನಮ್ಮ ಅಭಿಪ್ರಾಯ ಇದ್ದುದು ಭಾಷೆ ಆಧಾರದಮೇಲೆ ಪ್ರಾಂತ ರಚನೆಯಾಗಬೇಕು, ಇದು ಇತಿಹಾಸದ ವಿಷಯವಾಗಿದೆ. ಭಾಷೆಯ ಆಧಾರದಮೇಲೆ ಪ್ರಾಂತಗಳ ವಿಭಜನೆಯಾಯಿತು, ಫಜ್ಲಾಲಿ ಆಯೋಗದ ವರದಿ ಕೂಡ ಬಂತು, ಅದನ್ನು ಕೂಡ ಕೇಂದ್ರ ಸರಕಾರ ಒಂದು ಐತೀರ್ಪೆಂದು ಭಾವಿಸಿ, ಚಾಚೂ ತಪ್ಪದೆ ಜಾರಿಗೆ ಕೊಡಲಿಲ್ಲ, ಅನಾಹುತವಾಯಿತು. ಕೇಂದ್ರ ಸರಕಾರ ರಾಜ್ಯಗಳನ್ನು ವಿಭಜಿಸುವಾಗ ಒಂದು ಸರ್ವಸಮ್ಮತವಾದ ಸೂತ್ರವನ್ನು ಕಂಡುಹಿಡಿಯಬೇಕು, ಆಯೋಗ ಕೊಡುವ ತೀರ್ಪನ್ನು ಯಾರೂ ವಿರೋಧ ಮಾಡಬಾರದು, ಯಾವ ರಾಜ್ಯದ ಮುಖ್ಯ ಮಂತ್ರಿಯಾಗಲಿ ಅಥವ ಪ್ರಧಾನ ಮಂತ್ರಿಯಾಗಲಿ ವಿರೋಧಿಸಬಾರದು, ಅದು ತಪ್ಪಾಗಿದ್ದರೂ ಅದನ್ನು ಒಪ್ಪಿಕೊಳ್ಳಬೇಕು ಎಂದು ಹಿಂದೆ ವಿರೋಧ ಪಕ್ಷದವರೆಲ್ಲಾ ಸೇರಿದಾಗ ನಿರ್ಣಯಮಾಡಿದ್ದೆವು. ಇದು ಅಖಿಲಭಾರತಕ್ಕೆ ಅನ್ವಯವಾಗಬೇಕು. ಯಾರ ಒತ್ತಾಯಕ್ಕೂ ಮಣಿಯಬಾರದು. ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ವಿವಾದ ಮಾತ್ರವಲ್ಲದೆ, ಕೇರಳ, ಮದ್ರಾಸು, ಆಂಧ್ರ ಇವುಗಳಿಗೆ ಸಂಬಂಧಪಟ್ಟ ಹಾಗೆ ಕೂಡ ವಿವಾದವಿದೆ. ಅನೇಕ ಗಡಿ ಭಾಗಗಳು ಇನ್ನೂ ವಿವಾದಾಸ್ಪದವಾಗಿಯೇ ಇವೆ.

(ಶ್ರೀ ಎಸ್. ಗೋಪಾಲಗೌಡ)

ಕಾಸರಗೋಡು, ತಾಳವಾಡಿ ಫಿರ್ಕಾ ಮುಂತಾದವು ಗಡಿಗಳಿಗೆ ಸಂಬಂಧಪಟ್ಟಂತೆ ವಿವಾದಗಳಿರುವಾಗ ಒಂದೇ ಒಂದು ಕಮಿಷನ್ ನೇಮಕವಾಗುವುದು ಸಮಂಜಸವಲ್ಲ, ಒಂದು ಸೂತ್ರ ಕಂಡುಹಿಡಿಯ ಬೇಕು, ಅದಕ್ಕಾಗಿ ಒಂದು ಆಯೋಗ, ಹೈ ಪವರ್ ಕಮಿಷನ್, ಒಂದು ಉಚ್ಚ ಮಟ್ಟದ ಆಯೋಗ ನೇಮಕವಾಗಿ ಅವರ ತೀರ್ಪನ್ನು ಒಪ್ಪಿ ಕಾರ್ಯಗತವಾಗಬೇಕು. ಹಾಗೆ ಮಾಡಿ ರಾಜ್ಯಗಳ ಹೋರಾಟವನ್ನು ನಿಲ್ಲಿಸಬೇಕು, ಈಗಿರುವ ರಾಜ್ಯಗಳು ಮತ್ತೆ ವಿಚ್ಛಿದ್ರವಾಗುವುದು ಬೇಡ ಎಂದು ನಿರ್ಣಯದಲ್ಲಿ ತಿಳಿಸಿದ್ದರೂ ಅದರಂತೆ ಮಾಡಿಲ್ಲ. ಮಹಾಜನ್ ಕಮಿಷನ್ ಮಾಡಬೇಕೆಂದು ಒತ್ತಾಯಮಾಡಿದವರೂ ಕೂಡ ಅದರಂತೆ ನಡೆದುಕೊಳ್ಳಲಿಲ್ಲವೆಂದು ಮುಖ್ಯಮಂತ್ರಿಗಳು ಹೇಳಿದರು ಹೆಸರು ಹೇಳುವುದು ಸರಿಯಲ್ಲವೆಂದು ಅವರು ಹೇಳಿದರು. ಅವರ ಹೆಸರನ್ನು ನಾನು ಹೇಳುತ್ತೇನೆ, ಚವಾಣ್‌ರವರು ಗೃಹ ಮಂತ್ರಿಗಳಾಗಿ ಆಯೋಗ ನೇಮಕ ಮಾಡಿದವರು, ಅವರೇ ಒಪ್ಪಿರುವ ಆಯೋಗ. ನಾಯಕರವರೂ ಕೂಡ ಅವರ ತೀರ್ಪನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆಂದು ಪದೇ ಪದೇ ಹೇಳಿದ್ದಾರೆ. ಆದರೆ ಅವರು ಈಗ ಮಹಾಜನ್ ವರದಿಯನ್ನು ಒಪ್ಪುವುದಿಲ್ಲವೆಂದು ಹೇಳುತ್ತಾ ಇದ್ದಾರೆ. ಚವಾಣರವರೂ ಹಾಗೆಯೇ ಹೇಳುತ್ತಿದ್ದಾರೆ. ಫಜ್ಲಲಿ ವರದಿಯನ್ನು ದಿವಂಗತ ನೆಹರು ಅವರು ವಿಮಾನದಲ್ಲಿ ಪ್ರಯಾಣ ಮಾಡುವಾಗ ಓದಿ ಅದನ್ನು ನೋಡಿ ಆಶ್ಚರ್ಯ ವಾಯಿತೆಂದು ಪ್ರತಿಕ್ರಿಯೆ ವ್ಯಕ್ತಪಡಿಸಿದ್ದರು. ಪ್ರಧಾನಿಗಳೇ ಹಾಗೆ ಹೇಳಿದ ಮೇಲೆ ನಮ್ಮ ಪಾಡೇನು? ಅನೇಕ ಸಮಿತಿಗಳೇನು ಅದರಲ್ಲಿದ್ದವು ಅವು ಅವರಿಗೆ ವೈಯಕ್ತಿಕವಾಗಿ ಒಪ್ಪಿಗೆ ಆಗಿರಲಿಲ್ಲ. ಬಹುಶಃ ಸರ್ವಸಮ್ಮತವಾದ ಸೂತ್ರವಾಗಿರಲಿಲ್ಲ. ಸಾಧಾರಣವಾಗಿ ಒತ್ತಾಯಗಳಿಗೆ ಮಣಿದು ಯಾವ ರಾಜ್ಯಕ್ಕೆ ಯಾವ ಭಾಗ ಸೇರಿಸಬೇಕಾಗಿತ್ತೋ ಅದನ್ನು ಸೇರಿಸದೆ ಬಿಟ್ಟರು, ಐಕ್ಯತೆ ಉಂಟಾಗಬಾರದು ಎಂಬ ಅರ್ಥ ಬರುವ ರೀತಿಯಲ್ಲಿ ಫಜ್ಲಲಿ ವರದಿಯನ್ನು ಕಾರ್ಯಗತ ಮಾಡಿದರು. ಅದಿನ್ನೂ ಪೂರ್ಣವಾಗಿ ಕಾರ್ಯಗತವಾಗಿಲ್ಲ. ಸಿದ್ದವೀರಪ್ಪನವರ ನಿರ್ಣಯದಲ್ಲಿ ಕೂಡ ರಾಜ್ಯ ಪುನರ್ವಿಂಗಡಣೆಗೆ ಸಂಬಂಧಪಟ್ಟ ಆಯೋಗದ ತೀರ್ಪನ್ನು ಒಪ್ಪಿಕೊಳ್ಳೋಣ ಎಂದು

[Mr. CHAIRMAN (SRI D. M. SIDDIAH) in the Chair]

ತಿಳಿಸಿದ್ದಾರೆ. ಚನ್ನಯ್ಯನವರೂ ಹೇಳಿದ್ದಾರೆ, ಅವರು ಬೆಳಗಾವಿ ಮತ್ತಿತರ ಭಾಗಗಳನ್ನೆಲ್ಲಾ ಸುತ್ತಿದ್ದಾರೆ. ಅವರ ವರದಿ ಬಹುಶಃ ಪ್ರಕಟಣೆಯಾಗಿಲ್ಲ ಎಂದು ಕಾಣುತ್ತದೆ. ರಾಜ್ಯ ಸರಕಾರ ಕೆಲವರನ್ನು ಮೆಹರಿಗೆ ಕಳಿಸಿತ್ತು, ನಮ್ಮ ಕಡೆಯಿಂದ ಚನ್ನಯ್ಯನವರು, ಮಹಾರಾಷ್ಟ್ರದಿಂದ ಒಬ್ಬರು ಹೀಗೆ 3 ಜನರ ಆಯೋಗವೋ ಏನೋ ನೇಮಕವಾಗಿ ಅದು ಎಲ್ಲವನ್ನೂ ನೋಡಿ ಅರ್ಥಮಾಡಿಕೊಂಡಿದೆ. ಈ ದಿನ ಮಹಾಜನ್ ಕಮಿಷನ್ ವರದಿ ತಾತ್ಕಾಲಿಕ ಎಂದು ಹೇಳುವ ಕಥೆ ಏನಿದೆ ಅದರಲ್ಲಿ ಒಳಿತು ಎಷ್ಟಿದೆಯೋ ಅದಕ್ಕಿಂತ ಕೆಡಕು ಜಾಸ್ತಿ ಇದೆ. ಗೋಪಾಲಗೌಡರ ಹಿಂದಿನ ಭಾಷಣಕ್ಕೂ ಇಂದಿನ ಭಾಷಣಕ್ಕೂ ವ್ಯತ್ಯಾಸವಿದೆ ಎಂದು ಯಾರೋ ಮಾತನಾಡಿಕೊಂಡರಂತೆ, ಆಶ್ಚರ್ಯವಾಗಬಹುದು. ಶಿವಪ್ಪನವರೂ, ನಾನೂ ಈಗಿರುವ ಸರಕಾರದೊಂದಿಗೆ ಸೇರಿಕೊಂಡಂತೆ ಕಾಣುತ್ತದೆ ಎಂಬ ವದಂತಿ ಹಬ್ಬಿದೆ. ಈ ವದಂತಿ ಹಬ್ಬುವುದಕ್ಕೆ ಕಾರಣವಿದೆ. ಇದು ಕೇವಲ ಮುಖ್ಯ ಮಂತ್ರಿಗಳ ಪ್ರಶ್ನೆಯಲ್ಲ ಅಥವ ಮಂತ್ರಿಮಂಡಲದ ಪ್ರಶ್ನೆಯಲ್ಲ ಅಥವ ಕಾಂಗ್ರೆಸ್ಸಿನ ಒಂದು ಅಥವ ಎರಡು ಗುಂಪುಗಳ ಪ್ರಶ್ನೆಯಲ್ಲ, ಇದು 213 ಜನ ಸದಸ್ಯರಿರುವ 2 ಕೋಟಿ 40 ಲಕ್ಷ ಜನರಿರುವ ಈ ರಾಜ್ಯದ ಪ್ರಶ್ನೆ. ಈ ವಿಭಜನೆ ತಪ್ಪು, ಭಾಷೆ ಆಧಾರ ತಪ್ಪು, ಅದರಿಂದ ಗೊಂದಲ ಆಯಿತು, ಇದು ಸರಿಯಲ್ಲ ಎಂದು ಕೆಲವರು ಹೇಳಬಹುದು. ವಿದ್ವಾಂಸರು ವ್ಯಾಖ್ಯಾನ ಮಾಡಿದ್ದಾರೆ. ಆ ವ್ಯಾಖ್ಯಾನದ ಬಗ್ಗೆ ನಾನು ಇನ್ನೂ ಒಪ್ಪಿಲ್ಲ. ಏಕೆಂದರೆ ಈ ದೇಶದಲ್ಲಿ ಅಮೆರಿಕದ ತರಹ ಅಥವಾ ಆಸ್ಟ್ರೇಲಿಯಾದ ತರಹ ಗೆರೆಗಳನ್ನು ಎಳೆಯುವುದಾದರೆ, ಈ ದೇಶ ಆ ಒಂದು ತರಹ ಕೇವಲ ಆಡಳಿತ ದೃಷ್ಟಿಯನ್ನಿಟ್ಟುಕೊಂಡು ವಿಭಜಿಸಿರುವ ದೇಶವಾದರೆ ಆ ರೀತಿ ಮಾಡಬಹುದು. ಅಮೆರಿಕಾ ದಲ್ಲೂ ಕೂಡ ಅಂತಹ ರಾಜ್ಯಗಳಲ್ಲಿ ಯುದ್ಧವಾಗಿದೆ. ಯಾವ ಕಾರಣಕ್ಕಾಗಿ ಅನ್ನುವುದನ್ನು ತಾವು ಇತಿಹಾಸ ಓದಿದವರೆಲ್ಲ ತಿಳಿದುಕೊಂಡಿದ್ದೀರಿ. ಅಮೆರಿಕದಲ್ಲಿ ಏನೂ ನಡೆದಿಲ್ಲ ಎಂದು ಭಾವಿಸುವುದು ಬೇಡ. ಇಲ್ಲಿ ಈ ವಿಭಜನೆಯ ಪ್ರಶ್ನೆ ಒಳಿತಿಗೋ ಕೆಡುಕಿಗೋ ಗೊತ್ತಿಲ್ಲ, ಒಂದೊಂದು ಭಾಗದಲ್ಲಿ ಒಂದೊಂದು ಭಾಷೆಯ ಜನ ಹೆಚ್ಚು ಹೆಚ್ಚಾಗಿ ಈ ದೇಶದಲ್ಲಿ ಇದ್ದುಬಿಟ್ಟಿದ್ದಾರೆ, ಒಂದೇ ಕಡೆ ಒಂದೇ ಭಾಷೆಯ ಜನ ಇಲ್ಲ, ಹಾಗೆಯೇ ಒಂದೇ ಜಾತಿಯ ಜನ ಒಂದೇ ಮತದ ಜನ ಯಾವ ದೇಶದಲ್ಲೂ ಕಂಡುಬರುವುದಿಲ್ಲ. ಹಾಗೆಯೇ ಈ ದೇಶದಲ್ಲೂ ಒಂದು ಭಾಷೆಯ ಜನ ಒಂದು ರಾಜ್ಯದಲ್ಲಿ ಪ್ರತ್ಯೇಕ ವಾಗಿ ಕುಳಿತುಕೊಂಡಿಲ್ಲ. ನಾನು ಈ ದೇಶದ ಸ್ವಲ್ಪ ಭಾಗಗಳನ್ನು ನೋಡಿದ್ದೇನೆ. ಒಂದೇ ಭಾಷೆಯ ಜನ ನಮ್ಮ ಈ ಬೆಂಗಳೂರಿನಲ್ಲೂ ಇಲ್ಲ, 61 ಭಾಷೆಯ ಜನ ಇಲ್ಲಿ ಇದ್ದಾರೆ ಅಂತ ಹೇಳಿ

ಮಾನ್ಯ ಮಲ್ಲಾರಾಧ್ಯರ ಸೆನ್ಸಸ್ ವರದಿಯ ಪ್ರಕಾರ ನಮೂದಾಗಿದೆ. ಆದ್ದರಿಂದ ಕನ್ನಡಿಗರ ನಾಡು, ನುಡಿಯ ಬಗ್ಗೆ ಅಭಿಮಾನ, ಹೆಮ್ಮೆ ಇರಬೇಕು, ದುರಭಿಮಾನ ಬೇಡ, ಅದನ್ನು ನಾನು ಒಪ್ಪಿಕೊಳ್ಳು ತ್ತೇನೆ. ಮಾರ್ಚಿ ಎರಡನೇ ತಾರೀಖಿನ ಒಳಗೆ ಮಹಾಜನ್ ವರದಿಯನ್ನು ಕಾರ್ಯಗತ ಮಾಡದೇ ಇದ್ದಲ್ಲಿ—ನಾವು ಕೇಳಿರುವ ರೀತಿಯಲ್ಲಿ ಕಾರ್ಯಗತ ಮಾಡದೇ ಇದ್ದಲ್ಲಿ—ಶಿವಸೇನೆ ಕರ್ನಾಟಕದ ಮೇಲೆ ದಂಡೆತ್ತಿ ಬರುತ್ತದೆ ಅಂತ ಇದೆ. ತೀರ್ಮಾನ ಆಗಿಹೋಗಿದೆ. ಇದು ಎಲ್ಲರಿಗೂ ಗೊತ್ತಿರ ತಕ್ಕ ತೀರ್ಮಾನ, ಈಗಾಗಲೇ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ನಿರ್ಣಯ ಮಾಡಿರತಕ್ಕದ್ದು ಇದು. ಇದನ್ನು ಯಾರು ಅಲ್ಲಗಳೆಯುವುದಕ್ಕೆ ಆಗುವುದಿಲ್ಲ. ನಾನು ಅವರಿಗೆ ಏನೂ ಹೇಳುತ್ತಿಲ್ಲ, ಶಿವಸೇನೆ, ಬಸವಸೇನೆ ಎಲ್ಲಿದೆಯೋ ನಾನು ನೋಡಿಲ್ಲ, ಅದರ ಲೀಡರ್ ಯಾರೋ ನಾನು ನೋಡಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಭೀಮ ಸೇನೆ ಅಂತ ಇದೆಯಲ್ಲಾ ಅದು ಗೊತ್ತಿರಬಹುದು.

ಶ್ರೀ ಎಸ್. ಗೋಪಾಲಗೌಡ.—ಅದನ್ನು ನೋಡಿದ್ದೇನೆ. ಅದು ಇರುವುದು ನಿಜ. ಅದು ಬೇರೆ ವಿಷಯವಾಯಿತು. ಹರಿಜನೋದ್ಧಾರಕ್ಕಾಗಿ ಭೀಮ ಸೇನೆ ಇದೆ ಅಂತ ಯಾರೋ ಹೇಳಿದರು. ಭೀಮ ಎಂದರೆ ಅಂಬೇಡ್ಕರ್‌ರವರಿಗೆ ಭೀಮ ಅಂತ ಹೇಳುತ್ತಾ ಇದ್ದರು. ಯಾರು ಅವರ ತತ್ವವನ್ನು ಒಪ್ಪುತ್ತಾರೆ ಅವರು—ಎಂದರೆ ಅಬೇಡ್ಕರ್‌ರವರು ವೇದ, ಶ್ರುತಿ, ಸ್ಮೃತಿ ಇವುಗಳನ್ನೆಲ್ಲಾ ವ್ಯಾಖ್ಯಾನ ಮಾಡಿದ್ದಾರೆ, ಮತ್ತು ಆಧುನಿಕ ಮನು ಅಂತಲೂ ಕೂಡ ಅವರು ಕರೆಸಿಕೊಂಡಿದ್ದಾರೆ. ಅವರ ತತ್ವ ವನ್ನು ಒಪ್ಪಿಕೊಂಡಿರತಕ್ಕವರು ಭೀಮಸೇನೆ ಅಂತ ಮಾಡಿಕೊಂಡರು. ಅದು ಇಲ್ಲಿ ಅಪ್ರಕೃತ. ಈ ಬಸವ ಸೇನೆಯ ವಿಷಯ ನನಗೆ ಅಷ್ಟು ಗೊತ್ತಿಲ್ಲ, ಶ್ರೀಮಾನ್ ಸಿದ್ದವೀರಪ್ಪನವರು ದಯಮಾಡಿ ತಿಳಿಸಿದರೆ ಅವರಿಗೆ ಕೃತಜ್ಞನಾಗಿರುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಗೋಪಾಲಸೇನೆ ಅಂತ ಕೂಡ ಒಂದು ಇದೆ.

ಶ್ರೀ ಎಸ್. ಗೋಪಾಲಗೌಡ.—ಅದು ಎ. ಕೆ. ಗೋಪಾಲನ್ ಅವರದು. ಅದು ಇರಲಿ. ಜನ ಜಾಗೃತಿ ಅಂತ ಹೇಳಿ ಇದು ಒಂದು ಸಣ್ಣ ಪತ್ರಿಕೆ ಇದರಲ್ಲಿ ಹುಬ್ಬಳ್ಳಿಯ ಕನ್ನಡಿಗರ ಹಿತ ರಕ್ಷಣ ಸಂಘ ಅಂತ ಅನ್ನುವವರು ಈ ಶಿವಸೇನೆಯ ಕಾರ್ಯಚಟುವಟಿಕೆ ಖಂಡನಾರ್ಹ ಎಂದು ತಿಳಿಸಿದ್ದಾರೆ ಎಂಬುದಾಗಿ ಬರೆದಿದ್ದಾರೆ. ಅದೇ ರೀತಿ ಶ್ರೀಮಾನ್ ವೀರೇಂದ್ರಪಾಟೀಲ್‌ರವರು ಮಾಡಿದ ಬೆಳಗಾವಿ ಭಾಷಣದ ಮೇಲೂ ಕೂಡ ಇತ್ತೀಚೆಗೆ ಆರಂಭವಾಗಿರುವ ಒಂದು ಸಣ್ಣ ಪತ್ರಿಕೆ ವಿಶ್ವಕಲ್ಯಾಣ ಅಂತ ಅನ್ನುವುದು ಅದರಲ್ಲಿ ಅವರನ್ನು ತುಂಬಾ ಮೆಚ್ಚಿಕೊಂಡಿದೆ. ವೀರೇಂದ್ರ ಪಾಟೀಲರು ಬೆಳಗಾವಿಯ ನಿಲುವು ಬಿಟ್ಟ ನಿಲುವು ಎರಡೂವರೆಕೋಟಿ ಕನ್ನಡಿಗರು ಹೆಮ್ಮೆ ಪಡಬೇಕಾದ ನಿಲುವು ಎಂದು ಹೇಳಿ ಇತ್ಯಾದಿ ಇತ್ಯಾದಿ ಬರೆದಿದೆ. ಕಾರಣಾಂತರದಿಂದ ಆ ನಿಲು ವನ್ನು ಬದಲಾಯಿಸದೇ ಇರಲಿ ಅಂತ ಮಾತ್ರ ನಾವು ಅಪೇಕ್ಷಿಸುತ್ತೇವೆ ಅಂತ ಆ ಸಣ್ಣ ಪತ್ರಿಕೆಯಲ್ಲಿ ಇದೆ. ದೊಡ್ಡ ಪತ್ರಿಕೆಗಳವರು ಬರೆದಿರುವುದನ್ನು ಕೇಳಿದ್ದೀರಿ, ಓದಿದ್ದೀರಿ. ಅವರ ಭಾಷಣವನ್ನು ಅವರು ಪ್ರಕಟಿಸಿದ್ದಾರೆ. ಎಲ್ಲಾ ಪತ್ರಿಕೆಗಳವರ ಹೆಸರನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಬೇರೆ ಬೇರೆ ಭಾಷಾ ಪತ್ರಿಕೆಗಳವರು ಬೇರೆ ಬೇರೆ ರೀತಿಯಲ್ಲಿ ಬರೆಯುತ್ತಾರೆ. ಇಲ್ಲಿ ಒಂದು ಅಂಶ ವನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಮೈಸೂರು ಮಹಾರಾಷ್ಟ್ರ ಕೇರಳದ ಗಡಿ ಸಮಸ್ಯೆ ಬಗ್ಗೆ ಮಹಾರಾಷ್ಟ್ರ ಸರ್ಕಾರ ಶಿವಸೇನೆ ನಡೆಸುತ್ತಿರುವ ಅನ್ಯಾಯ ಅಪಚಾರದ ವಿರುದ್ಧ ಹೋರಾಡಲು ಕನ್ನಡಿಗರ ಹಿತರಕ್ಷಣ ಸಂಘ ದೃಢ ಪ್ರತಿಜ್ಞೆ ಮಾಡುವುದಲ್ಲದೆ ಆ ಬಗ್ಗೆ ಅಖಿಲಭಾರತ ಕಾಂಗ್ರೆಸ್ ಪಕ್ಷದ ಲಕ್ಷ್ಯ ಸೆಳೆದು ಮಹಾಜನ್ ವರದಿ ಅನ್ವಯ ಪೂರ್ತಿ ಮಾಡುವಂತೆ ಕಳ ಕಳಿಯ ಬಿನ್ನಹ ಮಾಡಿಕೊಂಡಿದೆ. ಇದು ಒಂದು. ಮಾರ್ಚಿ ಎರಡರಂದು ಮುಂಬೈ ಬಂದು ಮಾಡುವ ಬೆದರಿಕೆ ಹಾಕಿರುವ ಶಿವಸೇನೆಯ ಕೃತ್ಯವನ್ನು ಕನ್ನಡಿಗರ ಹಿತ ರಕ್ಷಣೆಯ ಸಂಘದವರು ಪ್ರತಿ ಭಟಿಸಿದೆ. ಕೇಂದ್ರ ಸರ್ಕಾರದವರು ಅಂತಹ ಒತ್ತಾಯಕ್ಕೆ ಮಣಿಯುವುದೇ ಆದರೆ ಸಮಗ್ರ ಕರ್ನಾಟಕದಲ್ಲಿ ಹೋರಾಟ ಕೈಕೊಳ್ಳಬೇಕಾಗಿಬರುವುದು ಎಂದು ಹೇಳಿ ಈ ಸಭೆ ಕೇಂದ್ರ ಸರ್ಕಾರಕ್ಕೂ ಮತ್ತು ರಾಜ್ಯ ಸರ್ಕಾರಗಳಿಗೆ ಎಚ್ಚರಿಕೆ ಕೊಡಬಯಸುತ್ತದೆ. ಶಿವಸೇನೆಯ ಉಪಟಳದಿಂದ ಕನ್ನಡ ತೆಲುಗು, ತಮಿಳು ಜನರ ಜೀವಕ್ಕೆ ಗಂಡಾಂತರ ಒದಗಿದಂತೆ ಈ ಸಲವೂ ನಡೆಯಬಹುದು ಎಂಬ ಮುನ್ನೆಚ್ಚರಿಕೆಯನ್ನು ಕೇಂದ್ರ ಸರ್ಕಾರಕ್ಕೆ ಕೊಡುತ್ತಾ ಅಂತಹ ಪ್ರಸಂಗದಲ್ಲಿ ಕೇಂದ್ರ ಸರ್ಕಾರದವರು ಮುಂಬೈಗೆ ರಿಸರ್ವ್ ಪೋಲೀಸ್ ಕಳುಹಿಸಿ ಅಲ್ಲಿ ಆಗಬಹುದಾದ ಅನಾಹುತದ ಬಗ್ಗೆ ಮುಂಜಾಗರೂಕತೆಯ ಕ್ರಮ ಕೈಕೊಳ್ಳಬೇಕೆಂದು ಈ ಸಭೆ ಆಗ್ರಹಪಡಿಸುತ್ತದೆ ಅಂತ ಅನ್ನುವುದು ಎರಡನೆಯದು. ಮೂರನೆಯದು ತಾಳವಾಡಿ ಫಿರ್ಕಾ ಬಗ್ಗೆ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ತಾಳಿದ ನಿಲುವನ್ನು ಬೆಂಬಲಿಸುತ್ತಾ ಮದ್ರಾಸು ಮೈಸೂರು ರಾಜ್ಯ ಸರ್ಕಾರ ಈ ಬಗ್ಗೆ ಸಮಂಜಸ ವಾದ ಧೋರಣೆಯನ್ನು ತಾಳಿ ಈ ಸಮಸ್ಯೆಯನ್ನು ಬಿಡಿಸಬೇಕೆಂದು ಈ ಸಭೆ ಆಗ್ರಹಪಡಿಸುತ್ತದೆ. ನಾಲ್ಕನೆಯದು, ಮಹಾರಾಷ್ಟ್ರ ಸರ್ಕಾರ ಗಡಿನಾಡಿನಲ್ಲಿರುವ ಕನ್ನಡ ಜನತೆಗೆ ಅನೇಕ ತರಹದ

(ಶ್ರೀ ಎಸ್. ಗೋಪಾಲಗೌಡ)

ಕಷ್ಟನಷ್ಟಗಳನ್ನು ಕೊಟ್ಟು ತೊಂದರೆ ತೊಸುಕುಗಳನ್ನು ತಂದೊಡ್ಡುತ್ತಿರುವುದನ್ನು ಕಂಡು ಈ ಸಭೆಗೆ ಅತ್ಯಂತ ಕಳವಳವಾಗಿದೆ ಮತ್ತು ಅಲ್ಲಿಯ ಕನ್ನಡಿಗರು ಈ ಒಂದು ಹೋರಾಟವನ್ನು ಕರೆದದ್ದನ್ನು ಈ ಸಭೆ ಸ್ವಾಗತಿಸಿ ಅವರಿಗೆ ಬೆಂಬಲ ಕೊಡಬಯಸುತ್ತದೆ ಇತ್ಯಾದಿ ಇತ್ಯಾದಿ ಈ ಪತ್ರಿಕೆಯಲ್ಲಿ ಬಂದಿದೆ.

4-00 P.M.

ಈ ರೀತಿ ಈಹೊತ್ತು ಮಾನ್ಯ ಸಿದ್ಧವೀರಪ್ಪನವರು ಹಿಂದೆ ಮಹಾಜನ್ ಆಯೋಗದ ವರದಿ ಚರ್ಚೆ ಆಗುವ ದಿನದ ಸಭೆಯ ನಾಯಕರು ಮಂಡಿಸಬೇಕು ಎಂದು ಆಗ್ರಹ ಮಾಡಿರುವುದು ಇದೆ, ಯಾಕೆಂದರೆ ಅವರ ಹೆಸರಿನಲ್ಲಿ ಇತ್ತು. ಅವರಿಗೆ ಗೊತ್ತಿರಬಹುದು ನಾನು ಮುಖ್ಯ ಮಂತ್ರಿಯಾಗಿ ಮುಂದೆ ಕಾಂಗ್ರೆಸ್‌ನ ಅಧ್ಯಕ್ಷನಾಗುವುದರಿಂದ ಅಂತಹ ಘೋರ ಶಿಕ್ಷೆ ತಾಳುವುದರಿಂದ ವೈಯುಕ್ತಿಕವಾಗಿ ಅವರಿಗೂ ಕಷ್ಟವಾಗುತ್ತದೆ, ಮತ್ತು ರಾಜ್ಯ ಸರಕಾರದ ನಿಲುವೇ ಈ ನಿರ್ಣಯ ಎನ್ನುವ ಅರ್ಥವಾಗುತ್ತದೆ. ಎನ್ನುವ ಕಾರಣಕ್ಕಾಗಿ ಮಹಾಜನ ವರದಿಯ ಮೇಲೆ ಶ್ರೀ ನಿಜಲಿಂಗಪ್ಪನವರು ಜತ್ತಿಯವರ ಮೂಲಕ ನಿರ್ಣಯ ಮಂಡಿಸುವುದಕ್ಕೆ ಒಪ್ಪಿಕೊಂಡರು. ಹಾಗೇನೇ ಅವೊತ್ತಿನ ದಿವಸ ಭಾಷಣ ಇದೆ. ಶ್ರೀ ಶರಣಗೌಡರು ಬೆಂಬಲ ಕೊಟ್ಟರು. ನನ್ನ ಭಾಷಣವನ್ನು ಓದುತ್ತಾ ಇದ್ದೆ. ಅವರು ಹೇಳುವ ಪ್ರಕಾರ ರಾಜ್ಯದ ಹಿತಕ್ಕೆ ಧಕ್ಕೆಬಂತೋ ಎಂದು ನಾನು ಅದನ್ನೆಲ್ಲಾ ನೋಡಿದೆ. ಈ ನಿರ್ಣಯವನ್ನು ಮತ್ತೆ ನಾನು ಓದುವ ಗೋಜಿಗೆ ಹೋಗುವುದಿಲ್ಲ. ಹೊತ್ತಾಗುತ್ತದೆ. ಅನೇಕರು ನಿರ್ಣಯವನ್ನು ಕೊಟ್ಟಿರುವವರು ಇದ್ದಾರೆ. ಮುಖ್ಯವಾಗಿ ನಾನು ಕೇಂದ್ರದಿಂದ ಬರುತ್ತೇನೆ. ಈಗ ಕಾಂಗ್ರೆಸ್ ಹೋಳಾದ ಮೇಲೆ ಉಂಟಾಗಿರುವ ಇಂಡಿಕೇಟ್, ಸಿಂಡಿಕೇಟ್ ಇವುಗಳು ಈವೊತ್ತು ಕೆಲವರ ದೃಷ್ಟಿಯಿಂದ ದೇಶಕ್ಕೆ ದುರದೃಷ್ಟಕರ, ಕೆಲವರ ದೃಷ್ಟಿಯಿಂದ ಅದೃಷ್ಟಕರ. ಅದು ಆಯಿತು. ಈ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಬೇಕಾದರೆ ಪ್ರಧಾನಿಯವರು ಕೇಂದ್ರದಲ್ಲಿ ಇಂಡಿಕೇಟಿನವರು, ನಮ್ಮ ರಾಜ್ಯದಲ್ಲಿ ಮುಖ್ಯ ಮಂತ್ರಿಗಳು ಸಿಂಡಿಕೇಟಿನವರು. ಈ ಗೊಂದಲದಲ್ಲಿ ಅನೇಕವೇಳೆ ನ್ಯಾಯಾನ್ಯಾಯ ಯಾರ ಕಡೆ ಇದೆ ಎಂದು ಹೇಳುವುದು ನನಗೆ ಗೊತ್ತಿಲ್ಲ. ಈಗ ನಾನು ಕೇಳಿದ ವರದಿ ಪ್ರಕಾರ ಲೋಕಸಭೆಯ ನಮ್ಮ ರಾಜ್ಯದ ಸದಸ್ಯರು ಎಲ್ಲರೂ ಸೇರಿ ಹೆಚ್ಚು ಕಡಿಮೆ ಒಮ್ಮತ ತೀರ್ಮಾನ ಮಾಡಿದ್ದಾರೆ. ಮಹಾಜನ ಆಯೋಗದ ತೀರ್ಪನ್ನು ಅವಿಳಂಬ ಕೇಂದ್ರ ಕಾರ್ಯಗತ ಮಾಡಬೇಕು ಎಂದು ಒತ್ತಾಯ ಮಾಡಿದ್ದಾರೆ ಎಂದು ಲೋಕ ಸಭೆಯಿಂದ ನನ್ನ ಗೆಳೆಯ ಶ್ರೀ ಪಾಟೀಲರು ಹೇಳಿದರು ? ಆದುದರಿಂದ ನೀವು ಒತ್ತಾಯ ಮಾಡುವುದರಲ್ಲಿ ಏನೂ ತಪ್ಪಿಲ್ಲ. ಈ ವರದಿಯನ್ನು ಇವತ್ತೋ ನಾಳೆಯೋ ಪೂರ್ಣವಾಗಿ ಚರ್ಚೆ ಒಪ್ಪದೆ, ವಿಳಂಬ ಮಾಡುವುದರಿಂದ, ಅನಾಹುತ ಆಗುವದಾದರೆ, ಅದನ್ನು ತಡೆದುಕೊಳ್ಳುವ ಶಕ್ತಿ ಕೇಂದ್ರಕ್ಕೆ ಇರುವುದಾದರೆ, ಮಾನ್ಯ ಶ್ರೀಕಂಠಯ್ಯನವರು ಹೇಳಿದ ಹಾಗೆ ಸಿದ್ಧವೀರಪ್ಪನವರು ಪ್ರತಿಪಾದನೆ ಮಾಡಿರುವ ರೀತಿ, ಸ್ಟೇಟಸ್‌ಕೋ ಮೇನ್‌ಟೇನ್ ಮಾಡಿ, ಎಸ್. ಆರ್. ಸಿ. ಕಮಿಷನ್‌ನವರು ಹೇಳಿದ ಹಾಗೆ ಇಟ್ಟುಬಿಡೋಣ ಎಂದು ಹೇಳುವುದಾದರೆ, ಮೊದಲು ನಾವು ಶಿವಸೇನೆ ಧಾಳಿಯನ್ನು ತಡೆಗಟ್ಟಬೇಕಾಗುತ್ತದೆ. ಇನ್ನೊಂದು ನಮ್ಮ ಜನರ ಒತ್ತಾಯವನ್ನೂ ಹಿತಾಸಕ್ತಿಗಳನ್ನೂ ಕಾಪಾಡಬೇಕಾದದ್ದು ಈ ಸಭೆ ಮತ್ತು ರಾಜ್ಯದ ಮಂತ್ರಿ ಮಂಡಲ ಮತ್ತು ಈ ಸಭೆಯ ಮಾನ್ಯ ಸದಸ್ಯರುಗಳು ಹಾಗೂ ಜನತೆಯ ಒಂದು ಪವಿತ್ರ ಕರ್ತವ್ಯ ಮತ್ತು ಮೂಲಭೂತವಾದ ಕರ್ತವ್ಯ ಎಂದು ನನಗೆ ಅನಿಸುತ್ತದೆ. ನಾವು ಯಾವುದೇ ಊರಿಗೆ ಸೇರಿರಲಿ, ತಾಳವಾಡಿ, ಫಿರೋಜ್‌ವಲ್ಲಿ ಇರಲಿ, ಹೊರನಾಡಿನಲ್ಲಿ ಇರಲಿ, ಕನ್ನಡದ ಬಗ್ಗೆ ಒಂದು ಮಾತು ಕವಿ ಕುವೆಂಪುರವರು ಹೇಳಿದ್ದಾರು. "ಎಲ್ಲಾದರು ಇರು ಎಂತಾದರು ಇರು, ಕನ್ನಡಿಗನಾಗಿರು" ಎಂದು. ಆ ಮಾತನ್ನು ಸಮರ್ಥಿಸುವುದಕ್ಕೆ ಆಗುವುದಿಲ್ಲ. ಅದರೆ ಕನ್ನಡವನ್ನು ಮರೆಯಬಾರದು ಎಂದು ಅವರು ಹೇಳಿದ್ದಾರೆ. ಅಂದರೆ ದುರಭಿಮಾನದಿಂದ ಜಗಳವಾಡಬೇಕು, ಕನ್ನಡಿಗರಲ್ಲದೆ ಇರುವವರನ್ನು ಹೊರಗೆ ಹಾಕಬೇಕು ಎಂದು ನನ್ನ ಅಭಿಪ್ರಾಯವಲ್ಲ. ಶ್ರೀ ವಾಟಾಳ್ ನಾಗರಾಜರು ತಾಳವಾಡಿಗೆ ಹೋಗುವುದಕ್ಕೆ ಮುಂಚೆ ತಮಿಳ್‌ನಾಡಿನ ಮುಖ್ಯ ಮಂತ್ರಿಗಳು ಹೇಳಿಕೆ ಕೊಡುವುದು, ಪ್ರತಿಬಂಧಕಾಜ್ಞೆಯನ್ನು ವಿಧಿಸುವುದು, ಮೈಸೂರು ರಾಜ್ಯದಿಂದ ಯಾರಾದರೂ ತಾಳವಾಡಿಗೆ ಬಂದರೆ ಜೈಲಿಗೆ ಹಾಕುತ್ತೇವೆ ಎಂದು ಹೇಳುವುದು, ಮತ್ತು ಸನ್ನಾಹ ಪ್ರತಿಬಂಧಕಾಜ್ಞೆಯನ್ನು ಮುರಿದದ್ದಕ್ಕಾಗಿ ಹದಿನೈದು ದಿವಸ ರಿಮ್ಯಾಂಡ್ ಮಾಡುವುದು, ಜೈಲಿಗೆ ಹಾಕುವುದು, ಮಾಜಿಸ್ಟ್ರೇಟರ ಆರ್ಡರ್ ಕೊನೆಗೆ ಬರುವುದು ಇತ್ಯಾದಿ ಇತ್ಯಾದಿ, ಮಾಡುವುದಾದರೆ ಈ ದೇಶದಲ್ಲಿ ಮುಂದೆ ನಡೆಯಬಹುದಾದ ಅಂತರ ರಾಜ್ಯ ಕಲಹಗಳ ಪ್ರಶ್ನೆ ಹೇಗೆ ? ಅದು ಬಹಳ ಮುಖ್ಯವಾದ ಪ್ರಶ್ನೆ. ಇದು ಬಗೆಹರಿಸಬೇಕಾದ ಪ್ರಶ್ನೆ ಕೂಡ.

ಅದರಿಂದ ಪ್ರಶ್ನೆ ಹಾಕುವುದಕ್ಕೆ ಹೋಗುವುದಿಲ್ಲ. ಯಾಕೆಂದರೆ ತಾಳವಾಡಿಯಲ್ಲಿ ಇರತಕ್ಕಂಥ ತಮಿಳರು ಕನ್ನಡಿಗರ ಮೇಲೆ ದೌರ್ಜನ್ಯ ಮಾಡುತ್ತಿದ್ದಾರೆ ಎಂದು ವರದಿ ಓದಿದ್ದೇನೆ. ವಾಟಾಳ್ ನಾಗರಾಜರಿಗೆ ಯಾರೂ ಬೆಂಬಲ ಕೊಡಲು ಮುಂದೆ ಬರಲಿಲ್ಲ. ನಾನು ಹೋದೆ. ರಸಲ್ ಮಾರ್ಕೆಟ್‌ನಲ್ಲಿ ಮಾತನಾಡಬೇಕಾಗಿತ್ತು. ಆಗ ನಾನು ಮುಂದಕ್ಕೆ ನೋಡೋಣ, ಕಣ್ಣು ಇರುವುದು ಮುಂದಕ್ಕೆ ಹಿಂದುಗಡೆ ತಲೆಯಲ್ಲಿ ಕಣ್ಣು ಇಲ್ಲ. ಆದುದರಿಂದ ಇತಿಹಾಸವನ್ನು ಹುಡುಕಿಕೊಂಡು ಹಿಂದಕ್ಕೆ ಹೋಗುವುದು ಬೇಡ. ಔರಂಗಜೇಬ್, ಪುಲಿಕೇಶಿ ಕಾಲಕ್ಕೆ ಹೋಗುವುದು ಬೇಡ ಮುಂದಕ್ಕೆ ನೋಡೋಣ, ಮಂಗಳ ಗ್ರಹಕ್ಕೆ ಹೋದರು, ಇನ್ನು ಯಾವ ಗ್ರಹಕ್ಕೆ ಹೋಗಬೇಕು, ಈ ತರಹ ಹೋಗಿ ನೋಡದೆ ಯಾವ ಯಾವ ಹಾದಿಯಲ್ಲಿ ಹೋದವರು ಎಲ್ಲೆಲ್ಲಿ ಮುಗ್ಗರಿಸಿದ್ದಾರೆ ಅದನ್ನು ಗಮನದಲ್ಲಿ ಇಟ್ಟುಕೊಂಡು ಮುಗ್ಗರಿಸದೆ ಬೇರೆಯವರು ಹೋಗದಂಥ ಬೇರೆಯವರು ಪಡೆದಿರುವ ಅನುಭವವನ್ನು ಪಡೆದು ಅದಕ್ಕಿಂತ ಮುಂದಿರುವ ಹೆಜ್ಜೆಯನ್ನು ಹಾಕೋಣ ಎಂದು ಆ ಸಭೆಯಲ್ಲಿ ಹೇಳಿದಾಗ ಬಹಳ ಜನ ಒತ್ತಾಯ ಮಾಡಿದರು ತಾಳವಾಡಿಗೆ ಬನ್ನಿ ಎಂದು. ವಾಟಾಳ್ ನಾಗರಾಜರವರು ಈ ಮಾನ್ಯ ಸಭೆಯ ಸದಸ್ಯರು. ಅವರಿಗೆ ಭುಜ ಚಪ್ಪರಿಸುವುದು ಬೇಡ, ಅವರು ಬಂದರಲ್ಲಾ ಎಂದು ಅಭಿಮಾನದಿಂದ ಮೇಜು ಕುಟ್ಟುವುದು ಬೇಡ. ನಾನು ಬಂದು ಕೂತು ಅವರು ಬಂದಿದ್ದಾರೆ ಎಂದು ಸಭಾಧ್ಯಕ್ಷರಿಗೆ ತಿಳಿಸಿದೆ. ಹಿಂದಿನ ದಿನಸ ಮಾತನಾಡಲು ಅವಕಾಶ ಕೊಡುತ್ತೇನೆ ಎಂದು ಸಭಾಧ್ಯಕ್ಷರು ಹೇಳಿದ್ದರು. ಆದರೆ ಅವರಿಗೆ ಅವಕಾಶ ಕೊಡಲಿಲ್ಲ. ಕಾರಣ ವಾಟಾಳರು ಬಹಳ ಕಟುವಾಗಿ ಮಾತನಾಡುತ್ತಾರೆ, ಚಿಕ್ಕ ವಯಸ್ಸಿನವರು ಬಿಸಿ ರಕ್ತ ಅವರದು. ಭಾಷಣಮಾಡುವ ಕಲೆ ಅವರ ಕಸಬು ಅಲ್ಲ. ಮಾತನಾಡಬೇಕು ಮಾತನಾಡುತ್ತಾರೆ. ಹೆಚ್ಚು ಕಡಿಮೆ ಮಾತನಾಡುತ್ತಾರೆ. ಅವರು ಹೆಚ್ಚು ಕಡಿಮೆ ಮಾತನಾಡಿದರೆ ಅಧ್ಯಕ್ಷರು ವರದಿಯಿಂದ ಕಿತ್ತುಹಾಕಿ ಒಳ್ಳೆಯ ಶಬ್ದಗಳನ್ನು ಹಾಕಿ ಎಂದು ಹೇಳಬಹುದು. ಉಚಾಯಿಸಿ ನಾನು ಒಂದು ಶಬ್ದ ಉಪಯೋಗ ಮಾಡಿ ಮಾತನಾಡಿದರೆ ಅದು ಒಳ್ಳೆಯ ಶಬ್ದವಲ್ಲ, ಒಳ್ಳೆಯ ಶಬ್ದ ಹಾಕಿರಿ ಎಂದರೆ ಘರ್ಷಣೆಯ ಪ್ರಶ್ನೆಯೇ ಇಲ್ಲ. ಅನ್‌ಪಾರ್ಲಿಮೆಂಟರಿ ಎಂದು ರೂಲಿಂಗ್ ಕೊಡುತ್ತಾರಲ್ಲ, ಆ ರೀತಿ ಮಾಡಿದರೆ ಅದು ಅಲ್ಲಿಗೇ ನಿಂತು ಹೋಗುತ್ತದೆ. ಆದರೆ ಅವರಿಗೆ ಶಿಕ್ಷೆಯೂ ಆಯಿತು, ಅದನ್ನು ನಿನ್ನೆ ತೆಗೆದದ್ದೂ ಆಯಿತು.

ಈ ಹೊತ್ತು ಮಾನ್ಯ ಮದ್ರಾಸಿನ ಮುಖ್ಯಮಂತ್ರಿಯವರು ಹೇಳಿರುವಂತೆ ಕರ್ಣಾಟಕದಲ್ಲಿರುವ ಬೆಂಗಳೂರಿನಲ್ಲಿರುವ ತಮಿಳರು ಕನ್ನಡಿಗರಾಗಿ ಇರಬೇಕು ಎಂದು ಹೇಳಿದಮೇಲೆ ಅದಕ್ಕಿಂತ ಅವರಿಂದ ಆಶ್ವಾಸನೆ, ಭರವಸೆ ಏನು ಬೇಕು ? ಅದಕ್ಕೆ ನಮ್ಮ ಸ್ನೇಹಿತರು ಕೆಲವರು ಹೇಳಿದರು, ನನ್ನ ಮನೆ ಸುಟ್ಟರು, ನಮ್ಮ ಮನೆ ಸುಟ್ಟರು, ನಾವು ತಮಿಳರಾಗಿರುವುದೇ ಅಪರಾಧವಾಗಿದೆ ಇತ್ಯಾದಿ ಇತ್ಯಾದಿ ಹೇಳಿದರು. ಬಹಳ ದೊಡ್ಡ ಪ್ರಮಾಣಕ್ಕೆ ಹೋಗಿದೆ, ಈ ಭಾಷಾ ಸಮಸ್ಯೆ. ಅದನ್ನು ನಾನು ಅಲ್ಲಗಳೆಯುವುದಿಲ್ಲ. ಪಶ್ಚಿಮ ಬಂಗಾಳದಲ್ಲಿ ಏನು ಪರಿಸ್ಥಿತಿ ಇದೆ, ತಮಿಳುನಾಡಿನಲ್ಲಿ ಏನು ಪರಿಸ್ಥಿತಿ ಇದೆ ಕೇರಳದಲ್ಲಿ ಏನು ಪರಿಸ್ಥಿತಿ ಇದೆ, ಕರ್ಣಾಟಕದೊಳಗೆ ಏನು ಪರಿಸ್ಥಿತಿ ಇದೆ, ಮಹಾರಾಷ್ಟ್ರದಲ್ಲಿ ಏನು ಪರಿಸ್ಥಿತಿ ಇದೆ, ಆಂಧ್ರದಲ್ಲಿ ಏನುಪರಿಸ್ಥಿತಿ ಇದೆ, ಆಂಧ್ರದಲ್ಲಿನ ತೆಲಂಗಾಣ ಸಮಸ್ಯೆ ಏನಿದೆ, ಇದನ್ನೆಲ್ಲ ನಾನು ಗೌಣ ಮಾಡುವುದಕ್ಕೆ ತಯಾರಿಲ್ಲ, ಸಣ್ಣಪುಟ್ಟ ವಿಷಯಗಳು ಎಂದು ಹೇಳುವುದಕ್ಕೆ ತಯಾರಿಲ್ಲ. ಅನ್ನಬಟ್ಟೆ ಸಮಸ್ಯೆ ಇದ್ದರೂ ಮಾನದಿಂದ ಅನ್ನ ಬಟ್ಟೆ ಬೇಕು. ಯಾರಾದರೂ ಒಂದು ತುತ್ತು ಬಿಸಾಕಿದರೆ ತಿನ್ನುವುದಕ್ಕಾಗುವುದಿಲ್ಲ, ಪ್ರಾಣ ಹೋದರೂ ತಿನ್ನುವುದಕ್ಕೆ ಆಗುವುದಿಲ್ಲ. ಹಾಗೆ ಕಾರಣಾಂತರದಿಂದ ಸಹಸ್ರ ಸಹಸ್ರ ವರ್ಷಗಳು, ಪುರಾಣಗಳ ಇತಿಹಾಸದಿಂದ ಬಂದಿರತಕ್ಕ ಈ ದೇಶದಲ್ಲಿ ಒಂದು ಭಾಷೆಯನ್ನು ಮಾತನಾಡುವ, ಹೆಚ್ಚು ಹೆಚ್ಚು ಜನ ಒಂದೊಂದು ಕಡೆ ಇದ್ದಾರೆ. ಇಲ್ಲವಾದಲ್ಲಿ ನಮ್ಮ ರಾಷ್ಟ್ರಗೀತೆಯಲ್ಲಿ ಅನೇಕ ವಿಷಯಗಳನ್ನು ಹೇಳುವ ಅಗತ್ಯತೆ ಇರಲಿಲ್ಲ. ಆದರಲ್ಲಿ ಏನೇನಿದೆ ಎನ್ನುವುದು ತಮಗೆಲ್ಲಾ ಗೊತ್ತಿದೆ. ಈ ಸಂದರ್ಭದಲ್ಲಿ ಮಾನ್ಯ ಸಿದ್ದವೀರಪ್ಪನವರಲ್ಲಿ ನನ್ನ ವಿನಂತಿ ಏನೆಂದರೆ, ಅವರು ಯಾವ ಕೋಟೆಗೇ ಸೇರಿರಲಿ, ಅಪೋಸಿಷನ್‌ನಲ್ಲಿ ನಾವೆಲ್ಲಾ ಇದ್ದೇವೆ ಮತ್ತು ಕೇಂದ್ರದಲ್ಲಿ ಈ ಹೊತ್ತು ಮಹಾಜನ್ ಕಮಿಷನ್ ಕೊಡದೆ ಇರುವ ಭಾಗಗಳನ್ನು ಹಳಿಯಾಳ, ಷಹಾಪುರ ಇವುಗಳನ್ನು ಮಹಾರಾಷ್ಟ್ರಕ್ಕೆ ಕೊಡುವ ಪ್ರಯತ್ನ ನಡೆದಿದೆ. ಷಹಾಪುರವನ್ನು ನಾನು ನೋಡಿದ್ದೇನೆ. ಬೆಳಗಾಮಿಗೆ ಹೋಗುವ ಎಡಭಾಗದಲ್ಲಿ ಬರುತ್ತದೆ ಹಿಂದೆ ಇದೇ ಸಭೆಯ ಸದಸ್ಯರಾಗಿದ್ದ ಶ್ರೀ ಸಾಮಜಿ ಅವರ ಗ್ರಾಮಕ್ಕೂ ಹೋಗಿದ್ದೇನೆ. ಅವರ ಊರು ಬೆಳಗಾಮಿಗೆ ಹೋಗುವುದಕ್ಕೆ ಮೊದಲು ಸಿಕ್ಕುತ್ತದೆ. ಶ್ರೀ ಸಾಮಜಿ ಅವರ ಗ್ರಾಮ ಪಂಚಾಯಿತಿ ವ್ಯವಹಾರಗಳು ಮರಾಠಿಯಲ್ಲಿ ನಡೆಯುತ್ತವೆ. ಇದೇ ಸಂದರ್ಭದಲ್ಲಿ ನಾನು ಈ ಮಾತನ್ನು ಹೇಳುತ್ತೇನೆ, ಯಾರ ಮಾತೃಭಾಷೆ ಕನ್ನಡವಲ್ಲ, ಅವರಿಗೆ ಅವರ ಮಾತೃಭಾಷೆಯಲ್ಲಿ ಈ ಪ್ರಾಥಮಿಕ ವಿದ್ಯಾಭ್ಯಾಸವಾಗಬೇಕು, ಅವರ ಭಾಷೆಗೆ ನಾವು ಪುರಸ್ಕಾರ ಕೊಡಬೇಕು. ಈ ಸಭೆಯಲ್ಲಿ

(ಶ್ರೀ ಎಸ್. ಗೋಪಾಲಗೌಡ)

ಭಾಷಾಂತರ ಮಾಡುವುದು ಕಷ್ಟವಾಗಬಹುದು, ಬರೆದುಕೊಳ್ಳುವುದು ಕಷ್ಟವಾಗಬಹುದು. ಆದರೂ ಈ ಹೊತ್ತಿನವರೆಗೂ ನನಗೆ ಅರ್ಥವಾಗಿಲ್ಲ, ಸರ್ಕಾರಿ ಕಾಗದ ಎಂದರೆ ಇಂಗ್ಲೀಷಿನಲ್ಲಿಯೇ ಇರಬೇಕು, ಅದೇ ಅಧಿಕೃತ ಭಾಷೆ ಎಂದು ಹೇಳುವ ಮಾತು ಅಥವಾ ಹಿಂದಿಯಲ್ಲಿರಬೇಕು ಎಂದು ಹೇಳುವ ಮಾತು ನನಗೆ ಇನ್ನೂ ಸ್ಪಷ್ಟವಾಗಿಲ್ಲ. ರಾಜ್ಯಾಂಗವನ್ನು ಬರೆದವರು ಏನು ಅರ್ಥದಲ್ಲಿ ಹೇಳಿದರೋ, ಏಕೆ ಹೇಳಿದರೋ ಗೊತ್ತಿಲ್ಲ. 200 ವರ್ಷ ಆಂಗ್ಲರು ಹೇಳಿರುವುದರಿಂದ ಕನ್ನಡದಲ್ಲಿ ಹೇಳುವವರು ಯಾರೂ ಇಲ್ಲ ಎಂದು ಹೇಳಿದರೋ ಏನೋ! ಆ ಅರ್ಥದಲ್ಲಿ ಹೇಳಿದ್ದಾರೆಂದು ಕಾಣುತ್ತದೆ. ಆದರೆ ತನ್ನ ಮಾತೃಭಾಷೆಯಲ್ಲಿ ತನ್ನ ಅಭಿಪ್ರಾಯಗಳನ್ನು ಅಭಿವ್ಯಕ್ತಗೊಳಿಸುವ ಒಂದು ಹಕ್ಕು, ಮೂಲಭೂತವಾದ ಹಕ್ಕುಗಳಲ್ಲಿ ಒಂದು ಎಂದು ನಾನು ಪರಿಗಣಿಸಿದ್ದೇನೆ. ನನ್ನ ಭಾಷೆಯಲ್ಲಿ, ನನ್ನ ತಾಯಿಭಾಷೆಯಲ್ಲಿ ಮಾತನಾಡಬೇಡ ಎಂದು ಯಾವುದಾದರೂ ಸರ್ಕಾರ ಅಥವಾ ಯಾರಾದರೂ ದೇಶದಲ್ಲಿ ಒತ್ತಾಯಪಡಿಸಿದರೆ ನನಗೆ ಸಿಟ್ಟೂ, ನನ್ನ ನಾಲಗೆಯನ್ನು ಕತ್ತರಿಸಿದಷ್ಟು ನೋವೂ ಆಗುತ್ತದೆ. ಬೇರೆ ಕಡೆಯಲ್ಲಿ ಹೋದಾಗಲೂ ನನ್ನ ಭಾಷೆಯಲ್ಲಿ ಮಾತನಾಡಬಹುದು. ಸೋನೇಮಲದಲ್ಲಿ ನಾನು ಕನ್ನಡದಲ್ಲಿ ಮಾತನಾಡಿದಾಗ ಬೇರೆಯವರು ಅದನ್ನು ತರ್ಜುಮೆ ಮಾಡಿದರು. ಪಾಟ್ನದಲ್ಲಿ ಹೋದಾಗ ನಾನು ಹಿಂದಿಯಲ್ಲಿಯೇ ಮಾತನಾಡಿದೆ. ಅರ್ಧರ್ಧ ಮಾತನಾಡಿದೆ, ನಮ್ಮವರು ಇಂಗ್ಲೀಷಿನಲ್ಲಿ ಮಾತನಾಡುತ್ತಾರಲ್ಲ ಹಾಗೆ. 'ಐ ಆಲ್ಸೊ ನೋಸ್ ಇಂಗ್ಲಿಷ್, ಹಿಯರ್ಸ್ ಇಂಗ್ಲಿಷ್' ಎನ್ನುವುದು ನನಗೂ ಗೊತ್ತಿದೆ. ಈ ದೇಶದಿಂದ ಇಂಗ್ಲೀಷರನ್ನು ಕಳುಹಿಸಿದಮೇಲೆ ಇಂಗ್ಲೀಷ್ ಭಾಷೆಯನ್ನು ಕೊಲೆ ಮಾಡುವುದು ಬೇಡ ಎಂದು ನಾನು ಅದರ ತಂಟೆಗೇ ಹೋಗಿಲ್ಲ. 25 ವರ್ಷವಾದರೂ ಎಲ್ಲ ವಸ್ತುಗಳಿಗೂ ಏನು ಶಬ್ದ ಎನ್ನುವುದು ನನಗೆ ಗೊತ್ತಿಲ್ಲ. ಕನ್ನಡದಲ್ಲಿ ನನ್ನ ಮನಸ್ಸು ಬಿಚ್ಚಿ, ಹೃದಯ ಬಿಚ್ಚಿ, ಇನ್ನೊಬ್ಬರಿಗೆ ನಾಟುವಂತೆ ಹೇಳಬಲ್ಲೆ. ಬಹಳ ಸೂಕ್ಷ್ಮವಾದ ವಿಷಯಗಳನ್ನು ಹೇಳಬಲ್ಲೆ. ನಿಮ್ಮನ್ನೆಲ್ಲ ನಗಿಸುವಂತೆ ಹೇಳಬಲ್ಲೆ, ಅಳುವಂಥ ವಿಷಯಗಳನ್ನು ಹೇಳಬಲ್ಲೆ, ಆದರೆ ಪರಭಾಷೆಯಲ್ಲಿ ಇಷ್ಟೊಂದು ಮಾತನಾಡುವುದು ಕಷ್ಟ. ಬೇಕಾದಷ್ಟು ಸಮಸ್ಯೆಗಳೇನಿವೆ, ಮಾನ್ಯ ಕದಂ ಮತ್ತು ಅವರ ಸ್ನೇಹಿತರು ನಮಗೆ ಶಾಲೆ ಕೊಡುವುದಿಲ್ಲ, ನಮ್ಮನ್ನು ಕಡೆಗಣಿಸಿದ್ದಾರೆ ಎಂದು ಹೇಳುತ್ತಾರೆ. ಯಾರನ್ನೂ ಕಡೆಗಾಣಿಸಬಾರದು. ಶಿವಮೊಗ್ಗದಲ್ಲಿ ತಮಿಳು ಶಾಲೆ ಇದೆ. ಅವರಿಗೆ ಪ್ರತ್ಯೇಕ ಶಾಲೆಗಳನ್ನು ಕೊಡಬೇಕು. 25–40 ಹುಡುಗರು ಮಾತ್ರ ಇದ್ದರೆ ಕನ್ನಡ ಶಾಲೆಯಲ್ಲಿ ಒಂದು ಭಾಗವನ್ನು ತೆರೆದು ಅಲ್ಲಿ ಒಬ್ಬ ತಮಿಳು ಉಪಾಧ್ಯಾಯರನ್ನು ಇಡುವುದರಲ್ಲಿ ರಾಜ್ಯಕ್ಕೆ ಏನೂ ನಷ್ಟವಾಗುವುದಿಲ್ಲ. 40 ಮಕ್ಕಳ ತಂದೆ ತಾಯಿಗಳು ಈ ಮಣ್ಣಿನಲ್ಲಿ ದುಡಿಯುತ್ತಾರೆ. ಆದುದರಿಂದ ನಮ್ಮ ಪ್ರಮುಖ ಕರ್ತವ್ಯವೆಂದರೆ ಯಾವುದೇ ರಾಜ್ಯದಲ್ಲಿ, ಮರಾಠಿ ರಾಜ್ಯದಲ್ಲಿ ಕನ್ನಡ ಶಾಲೆಗಳನ್ನೂ, ಕನ್ನಡ ರಾಜ್ಯದಲ್ಲಿ ಮರಾಠಿ ಶಾಲೆ, ತಮಿಳು ಶಾಲೆ ಇತ್ಯಾದಿ ಶಾಲೆಗಳನ್ನು ತೆಗೆಯಬೇಕಾದ್ದು ಬಹಳ ಅಗತ್ಯ.

ನಾನು ಇನ್ನು ಈ ವಿಷಯದ ಬಗ್ಗೆ ಹೇಳುತ್ತ ಈ ಹೊತ್ತು ನಾವು ಮಾಡಬೇಕಾದ ಕಾರ್ಯವೇನು ಎಂದು ಮಾನ್ಯ ಸಿದ್ಧವೀರಪ್ಪನವರನ್ನು ಕೇಳಿದೆ. ಈಗ ರಾಜ್ಯ ಪುನರ್ವಿಂಗಡಣಾ ಸಮಿತಿಯವರು ಕೊಟ್ಟ ವರದಿ ಅಥವಾ ತೀರ್ಪು ಕಾರ್ಯಗತವಾಗಿರುವುದು ಯಾವ ರಾಜ್ಯಕ್ಕೂ ತೃಪ್ತಿಕರವಾಗಿಲ್ಲ, ಯಾವ ಭಾಷೆಯ ಜನಕ್ಕೂ ಸಮಾಧಾನವಾಗಿಲ್ಲ. ಇದು ಒಂದು ವಿಷಯ. ಎರಡನೆಯದು ರಾಜ್ಯ ಸರ್ಕಾರದವರು ತಪ್ಪು ಮಾಡಿದ್ದಾರೆಂದು ನಾನು ಟೀಕೆ ಮಾಡಿಬಿಟ್ಟಿದ್ದೇನೆ. ಏಕೆಂದರೆ ಬರೀ ಮಹಾರಾಷ್ಟ್ರದ ಒತ್ತಾಯಕ್ಕೆ ಮಣಿದು, ಮಹಾಜನರ ಆಯೋಗವನ್ನು ಒಪ್ಪಿಕೊಂಡಿರಿ, ಕಣ್ಣು ಒರೆಸುವುದಕ್ಕಾಗಿ ಕಾಸರಗೋಡನ್ನು ಅದರಲ್ಲಿ ಸೇರಿಸಿದರು. ತಾಳವಾಡಿ ಫಿರ್ಕಾ, ಹೊಸೂರು, ಮಡಕಸಿರಾ ಇಂಥ ವಿವಾದಕ್ಕೆ ಕಾರಣವಿಲ್ಲದೆ ಇರತಕ್ಕ ಭಾಗಗಳನ್ನು ಕೂಡ ಕೆಲವನ್ನು ಬಿಟ್ಟಿರಿ. ಅದನ್ನೆಲ್ಲ ಹಿಂದೆ ಹೇಳಿದ್ದಾಗಿದೆ. ಸರ್ಕಾರ ಈ ತಪ್ಪು ಮಾಡಿದೆ ಎಂದು ಹೇಳಿದ್ದಾಗಿದೆ. ಆಗ ಇವರಮೇಲೆ ಬಹಳ ಒತ್ತಾಯ, ಒತ್ತಡ ಇತ್ತು, ಇವರು ಒಪ್ಪಿಕೊಂಡರು. ಮಹಾಜನ್ ಆಯೋಗ ಆಯಿತು, ತೀರ್ಪು ಕೊಟ್ಟದ್ದೂ ಆಯಿತು. ತೀರ್ಪನ್ನು ತಕ್ಷಣ ಮಹಾರಾಷ್ಟ್ರದವರೂ ತಿರಸ್ಕರಿಸಿದ್ದೂ ಆಯಿತು, ನಮ್ಮವರು ಒಪ್ಪಿಕೊಂಡದ್ದೂ ಆಯಿತು. ಲಾಭವೋ ನಷ್ಟವೋ ಅದನ್ನು ಹೇಳಲಾರೆ. ನಾಲ್ಕು ಕೋಟಿ ಆದಾಯಕರ (ಇನ್‌ಕಂಟ್ಯಾಕ್ಸ್) ಬರುವಂಥ ನಿಪ್ಪಾಣಿ ಹೋದಮೇಲೆ ಬಾಕಿ ಊರು ಇದ್ದರೆ ಏನು ಅನ್ನಿಸುತ್ತದೆ; ಒಂದೊಂದುಸಲ ನಿಪ್ಪಾಣಿ ಹೋದಮೇಲೆ ಷಹಾಪುರ

(MR. SPEAKER in the Chair)

ಇದ್ದರೆ ಏನು ಅನ್ನಿಸುತ್ತದೆ. ಆದರೆ ಶಹಾಪೂರ ಕೊಡುವುದರಿಂದ ರಕ್ತಪಾತವಾದೀತು, ಬರ್ಲಿನ ನಗರದಂತಾದೀತು ಎಂದು ಈ ಸಮಸ್ಯೆ ಬಗ್ಗೆ ಮಾತನಾಡಿದ್ದಾರೆ. ಆದುದರಿಂದ ಈ ಸಮಸ್ಯೆ ಬಗ್ಗೆ

ಹೆಚ್ಚು ಹೇಳಬೇಕಾದದ್ದು ಇಲ್ಲವಾದರೂ ಕೂಡ ಮಹಾರಾಷ್ಟ್ರದವರಿಗೆ ತಮ್ಮ ರಾಜ್ಯ ಮಹಾರಾಷ್ಟ್ರ ಹೇಗೆ ಆಗುತ್ತದೆ ಎಂದು ನಾನು ಕೇಳಿದ್ದೇನೆ. ನಮ್ಮ ಅಧ್ಯಕ್ಷರೊಬ್ಬರು ಮಹಾರಾಷ್ಟ್ರದವರು ಇದ್ದರು. ಈ ನಮ್ಮ ದೇಶ ಒಂದು ರಾಷ್ಟ್ರ. ಈ ನಮ್ಮ ರಾಷ್ಟ್ರದೊಳಗೆ ಮಹಾರಾಷ್ಟ್ರ ಇರಲಿಕ್ಕೆ ಸಾಧ್ಯವೇ ? ಎಂದಿಗೂ ಸಾಧ್ಯವಾಗುವುದಿಲ್ಲ. ಯಾಕೆಂದರೆ ಒಂದು ಸಣ್ಣ ಕೊಡಪಾನದಲ್ಲಿ ಒಂದು ದೊಡ್ಡ ಹಂಡೆ ಇರಲು ಸಾಧ್ಯವೇ ? ಅದಕ್ಕಾಗಿ ನಿಮ್ಮ ರಾಜ್ಯಕ್ಕೆ ಮರಾಠಾ ಎಂದು ಎನ್ನಿ. ಅದನ್ನು ಒಪ್ಪುತ್ತೇನೆ. ಇದಕ್ಕೆ ಇತಿಹಾಸ ಇದೆ. ಮಹಾರಾಷ್ಟ್ರ ವಿಸ್ತರಿಸತಕ್ಕಂಥ ಮನೋಭಾವ ಬಿಡಬೇಕು, ಕನ್ನಡಿಗರ ಮೇಲೆ ಕತ್ತಿ ಕಟ್ಟುವುದನ್ನು ಬಿಡಬೇಕು ಎಂದು ನಾನು ಅವರಿಗೆ ತಿಳಿಸಿದ್ದೇನೆ. ಎಲ್ಲ ಪಕ್ಷಗಳಲ್ಲಿ ಕೂಡ ಭಾಷಾ ರಾಜ್ಯ ವಿಭಜನೆಯಾದಮೇಲೆ ಒಡಕು ಇದೆ. ಸರ್ವಸಮ್ಮತಿ ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಪಕ್ಷದವರು ಮುಂಬಯಿನಲ್ಲಿ ಇಲ್ಲಿ ಇರತಕ್ಕಂಥ ಸ್ನೇಹಿತರನ್ನು ಕೇಳಿದರೆ ಬೆಳಗಾಂವ ನಮಗೆ ಬರಬೇಕು, ನಿಪ್ಪಾಣಿ, ಹಳ್ಯಾಳ ಬರಬೇಕು, ಕಾರವಾರ ಜಿಲ್ಲಾ ಪೂರ್ತಿ ಬರಬೇಕು ಎಂಬ ಬೇಡಿಕೆ ಇಡುತ್ತಾರೆ ನಾವು ಇರ್‌ರಾಷನಲ್ ಎಂದು ಅಂದರೆ ನೀವು ಇರ್ರ್ಯಾಷನಲ್ಲಾಗಿ ಭಾವನಾತ್ಮಕವಾಗಿ ಮಾತನಾಡುತ್ತೀರಿ, ದೇಶ ಬಾಲ್ಕನೈಸ್ ಮಾಡಲು ಹೊರಟಿದ್ದೀರಿ ಎಂದು ಆರೋಪಿಸುತ್ತಾರೆ. ಎಮೋಷನಲ್ಲಾಗಿ ಭಾಷೆಯ ಬಗ್ಗೆ ವ್ಯಾಮೋಹ ಏಕೆ ಎಂದು ಹೇಳಿದರೆ ಅದಕ್ಕೆ ಉತ್ತರ ಹೇಳುವುದಕ್ಕಾಗುವುದಿಲ್ಲ. ವ್ಯಾಮೋಹ ಬಿಟ್ಟು ಕೊಟ್ಟರೆ, ನೀವು ರ್ಯಾಷನಲ್ಲಾದರೆ ನಾವು ನಿಮ್ಮಿಂದ ಕಲಿಯಲಿಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಉತ್ತರ ಕೊಡುತ್ತೇನೆ.

ಈ ದಿನ ನಮ್ಮ ರಾಜ್ಯಕ್ಕೆ ಇಕ್ಕಟ್ಟಿನ ಪರಿಸ್ಥಿತಿ ಇದೆ. ಕೇಂದ್ರದಲ್ಲಿ ಇಂಡಿಕೇಟ್ ಸರಕಾರ ಇದೆ, ನಮ್ಮ ರಾಜ್ಯದಲ್ಲಿ ಸಿಂಡಿಕೇಟ್ ಸರಕಾರ ಇದೆ. ಇದರಿಂದ ಒಂದು ರೀತಿ ತೊಂದರೆ ಇದೆ. ಅದನ್ನು ವಿವರಿಸುವುದಕ್ಕೆ ನಾನು ಹೋಗುವುದಿಲ್ಲ. ಮುಖ್ಯ ಮಂತ್ರಿಗಳು ಟೆಲಿಫೋನಿನಲ್ಲಿ ಪ್ರಧಾನಿಗಳೊಡನೆ ಮಾತನಾಡಿದರು, ಇವರು ಬರವಣಿಗೆಯಲ್ಲಿ ಕೊಡಿ ಎಂದು ಹೇಳಿದ್ದು ಒಂದು ಇಕ್ಕಟ್ಟು. ಅದನ್ನು ಪ್ರಸ್ತಾಪ ಮಾಡುವುದಿಲ್ಲ. ಅವರವರು ತಮ್ಮ ತಮ್ಮ ಸ್ಥಾನಮಾನದ ಮೇಲೆ ನಿಂತುಕೊಳ್ಳುತ್ತಾರೆ. ಬರವಣಿಗೆಯಲ್ಲಿ ಕೊಟ್ಟರೆ ನಾನು ಇಕ್ಕಟ್ಟಿಗೆ ಸಿಕ್ಕಿಕೊಳ್ಳಬಹುದು ಎಂದು ಪ್ರಧಾನಿಯವರು ತಿಳಿದುಕೊಳ್ಳಬಹುದು. ಬಾಯಿ ಮಾತಿನಲ್ಲಿ ಈ ವ್ಯವಹಾರ ಮಾಡಿಕೊಂಡರೆ ವಿಧಾನ ಸಭೆಯಲ್ಲಿ ಬೇರೆ ಕಡೆಯಲ್ಲಿ ಕೇಳಿದರೆ ಏನು ಹೇಳಬೇಕು ಎಂದು ಮುಖ್ಯ ಮಂತ್ರಿಗಳು ತಿಳಿದುಕೊಳ್ಳಬಹುದು. ಜವಾಬ್ದಾರಿ ತಲೆಯಮೇಲೆ ಹೊತ್ತುಕೊಳ್ಳಬೇಕೇ ? ಹೊಣೆಗಾರಿಕೆ ತಲೆಯಮೇಲೆ ಬೀಳುತ್ತದೆ. ಇದು ನಮಗೆ ಅಪಾಯ ಅಲ್ಲವೇ ? ಆದುದರಿಂದ ಈ ವಿಷಯದ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಅದಕ್ಕೆ ಅವಕಾಶ ಇಲ್ಲ. ಯಾಕೆಂದರೆ ನನ್ನ ಭಾಷಣದ ಕಾಲ ಮುಗಿದಿದೆ ಎಂದು ಅಧ್ಯಕ್ಷರಿಂದ ಸಂದೇಶ ಬಂದಿರುವುದರಿಂದ ಅದನ್ನು ಪರಿಪಾಲನೆ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಇಷ್ಟೇ ಹೇಳುತ್ತೇನೆ. ಶ್ರೀಮಾನ್ ಸಿದ್ದವೀರಪ್ಪನವರಿಗೆ ಮುಖ್ಯವಾಗಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಇದನ್ನು ಅನೇಕ ಸಲ ಹೇಳಿದ್ದಾರೆ ರಾಜ್ಯದ ಹಿತ ಕಾಪಾಡುವುದರಲ್ಲಿ ನಾನು ಯಾರಿಗಿಂತಲೂ ಕಡಿಮೆ ಅಲ್ಲ ಎಂದು ಅವರು ಹೇಳಿದ್ದಾರೆ. ಈ ಒಂದು ಹೇಳಿಕೆಯ ಬಗ್ಗೆ ನಾನು ಅವರಿಗೆ ತುಂಬಾ ಆಭಾರಿಯಾಗಿದ್ದೇನೆ. ಅಂಥ ಹೇಳಿಕೆ ಎಲ್ಲರಿಂದ ನಿರೀಕ್ಷಣೆ ಮಾಡುತ್ತೇನೆ. ಈ ಸಂದರ್ಭದಲ್ಲಿ ಈ ಒಂದು ವಿಷಯವನ್ನು ಇದು ಪಕ್ಷದ, ರಾಜಕೀಯದ ವಿಷಯ ಅಂತಾ ಭಾವಿಸದೆ ಈ ರಾಜ್ಯದ ಸಮಗ್ರತೆ ಕಾಪಾಡಿಕೊಳ್ಳುವುದು ಹೇಗೆ ? ಒದಗಿ ಬಂದಿರತಕ್ಕಂಥ ಗಂಡಾಂತರ ಆಗಬಹುದಾದ ರಕ್ತಪಾತ ಕೊಲೆ ಸುಲಿಗೆ ತಪ್ಪಿಸುವುದು ಹೇಗೆ ಎನ್ನುವುದನ್ನು ಯೋಚನೆ ಮಾಡಬೇಕಾದುದು ಎರಡೂ ಸರಕಾರದ ಕರ್ತವ್ಯ ಲಾ ಅಂಡ್ ಆರ್ಡರ್ ಕರ್ತವ್ಯ ನಿರ್ವಹಿಸಲೇ ಬೇಕು. ಇದು ಭಾವನಾತ್ಮಕವಾದ ರಾಷ್ಟ್ರೀಯ ಸಮಸ್ಯೆಯಾಗಿದ್ದು ಇದರಲ್ಲಿ ಈಗಾಗಲೇ ಧಾರವಾಡ ಹುಬ್ಬಳ್ಳಿಯ ಯುವಕರು ಚಳವಳಿ ಆರಂಭ ಮಾಡಿರುವುದರಿಂದ ಅದಕ್ಕೆ ನಾವು ಹೆಚ್ಚು ಪ್ರಚೋದನೆ ಕೊಡಬೇಕು ಎಂದು ಹೇಳುವುದಿಲ್ಲ. ನಾವು ದೊಡ್ಡವರು ಇದನ್ನು ತೀರ್ಮಾನ ಮಾಡುತ್ತೇವೆ, ನೀವು ಚಳವಳಿ ಮಾಡದೆ ಪರೀಕ್ಷೆಗಳು ಹತ್ತಿರ ಬಂದಿರುವುದರಿಂದ ನಿಮ್ಮ ಕಾಲ ಕಳೆದುಕೊಳ್ಳಬೇಡಿ ಎಂದು ನಾವು ಅವರಿಗೆ ಹೇಳಬೇಕು ; ಮುಖ್ಯ ಮಂತ್ರಿಗಳು ಹೇಳಬೇಕು ; ಪ್ರಧಾನ ಮಂತ್ರಿಗಳೂ ಸಹ ಹಾಗೆ ಹೇಳಬೇಕು. ಮಕ್ಕಳು ಚಳವಳಿ ಮಾಡಿ ಬೀದಿಯಲ್ಲಿ ತೀರ್ಮಾನ ಮಾಡುವ ಪ್ರಶ್ನೆ ಇದಲ್ಲ. ಅದನ್ನು ನಾವು ವಿಚಾರ ಮಾಡುತ್ತೇವೆ ಎಂದು ಹೇಳಬೇಕು ದೇಶದಲ್ಲಿ ಅನಾಹುತವಾದರೆ ಪ್ರಾಣ ಆಸ್ತಿ ನಾಶವಾದರೆ ಅದರಿಂದ ಇದನ್ನು ಬಗೆಹರಿಸುವುದಕ್ಕೆ ಅಪಾಯ ಹೇಗೆ ಉಂಟಾಗುತ್ತದೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಈಗಾಗಲೇ ಇದು ವಿಳಂಬವಾಗಿದೆ ಆದರೂ ಕೂಡ ಚಿಂತೆ ಇಲ್ಲ. ನಮ್ಮ ನಿರ್ಣಯದಲ್ಲಿ ಇದು ಸ್ಪಷ್ಟವಾಗಿದೆ. ಈ ಗಡಿ ವಿವಾದದ ಬಗ್ಗೆ ಕರ್ನಾಟಕ ಮತ್ತು ಮಹಾರಾಷ್ಟ್ರ ಹಾಗು ಕಾಸರಗೋಡು ಬಗ್ಗೆ ಎದ್ದಿರತಕ್ಕಂಥ ವಿವಾದ ಬಗೆಹರಿಸಲು ಕೇಂದ್ರ ಸರಕಾರ ವಿಳಂಬ ಮಾಡಿರುವುದಲ್ಲದೆ ಏಕ ಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲು ಪ್ರಯತ್ನಿಸಿ ಮೈಸೂರಿನವರನ್ನು ಕೇಳಲಿಲ್ಲ. ಈ ಆರೋಪ ಬೇರೆ ಇದೆ. ಅಲ್ಲದೆ

(ಶ್ರೀ ಎಸ್. ಗೋಪಾಲಗೌಡ)

ಸೌಜನ್ಯದ ದೃಷ್ಟಿಯಿಂದ ಕೇಂದ್ರ ಸರಕಾರ ನಡೆಸುವವರು, ಹೊಣೆ ಹೊತ್ತಿರತಕ್ಕಂಥ ರಾಜ್ಯ ಸರಕಾರದ ಮಂತ್ರಿಗಳನ್ನು ಕೂಡಿಸಿಕೊಂಡು ಇದರ ಪರಿಣಾಮ ಏನಾದೀತು, ಇದನ್ನು ಜಾರಿಗೆ ಕೊಟ್ಟರೆ ಏನು ಪರಿಣಾಮ ಆದೀತು, ಜಾರಿಗೆ ಕೊಡದೇ ಇದ್ದರೆ ಏನಾದೀತು. ಎನ್ನುವುದನ್ನು ಸಾರಾಸಾರ ವಿಚಾರ ಮಾಡಿ ಪ್ರಮುಖ ಸಂಘ ಸಂಸ್ಥೆಗಳ ಜೊತೆಗೆ ಮಾತನಾಡಿ ಒಂದು ತೀರ್ಮಾನಕ್ಕೆ ಬಂದಿದ್ದರೆ ನಮಗೆ ಏನೂ ಬೇಸರ ಇರಲಿಲ್ಲ. ಒಂದು ಹಳ್ಳಿ ಕರ್ನಾಟಕದಲ್ಲಿ ಇದ್ದರೆ ಒಂದು ಹಳ್ಳಿ ಮಹಾರಾಷ್ಟ್ರದಲ್ಲಿ ಉಳಿದರೆ ಅದರಲ್ಲಿ ಅಷ್ಟೇನೂ ತೊಂದರೆ ಕಾಣುವುದಿಲ್ಲ. ಹೊಳೆಯ ಇತ್ತಕಡೆಯ ಹಳ್ಳಿಯನ್ನು ಅತ್ತ ಕಡೆಯ ರಾಜ್ಯಕ್ಕೆ ಸೇರಿಸಿ ಬಿಟ್ಟರೆ, ಶಾಲೆಗೆ ಹೋಗುವ ಮಕ್ಕಳು ಹೊಳೆ ದಾಟಿ ಶಾಲೆಗೆ ಹೋಗಬೇಕಾಗುವ ಸಂದರ್ಭ ಬರುತ್ತದೆ. ಇಂಥ ಅಸಮಂಜಸ ತೀರ್ಮಾನ ಕೈಕೊಳ್ಳುವುದು ಸರಿಯಲ್ಲ. ಶಹಾಪೂರನ್ನು ಮಹಾರಾಷ್ಟ್ರಕ್ಕೆ ಸೇರಿಸುತ್ತೇವೆ ಅಂದರೆ ದಿವಂಗತ ಜಿನ್ನಾ ಸಾಹೇಬರು ಪಾಕಿಸ್ಥಾನಕ್ಕೆ ಕಾರಿಡರ್ ಕೊಡಿ ಎಂದು ಕೇಳಿದಹಾಗೆ ಅಸಮಂಜಸವಾಗುತ್ತದೆ. ಕಲಕತ್ತಾದಿಂದ ಕರಾಚಿ ವರೆಗೆ ದಾರಿ ಕೊಡಿ ಎಂದು ಕೇಳಿದಂತಾಗುತ್ತದೆ. ಇದು ರಾಷ್ಟ್ರದ ಮಧ್ಯೆ ಬರ್ಲಿನ್ ಗೋಡೆ ಬಂದಂತಾಗುತ್ತದೆ. ಇಂಥ ಕೃತಕ ವಿಭಜನೆ ಸಮಂಜಸವಲ್ಲ. ದೇಶದ ಸಮಗ್ರತೆ ಕಾಪಾಡಬೇಕು. ಭಾರತೀಯರಾದ ನಮ್ಮ ಭಾವನೆ ಹೇಗೆ ತೋರಿಸುವುದು ?

4-30 P.M.

ಅದಕ್ಕಾಗಿಯೇ ಇದಕ್ಕೆ ಯಾವುದಾದರೂ ಒಂದು ಸೂತ್ರವನ್ನು ಅಂದರೆ ಸರ್ವರಿಗೂ ಸಮ್ಮತವಾದಂಥ ಒಂದು ಸೂತ್ರವನ್ನು ಸಿದ್ಧಪಡಿಸಬೇಕೆಂದು ಹೇಳುತ್ತಿದ್ದೇನೆ. ಆದರೆ ದಿವಂಗತ ಪಾಟಸ್ಕರ್ ಮಹಾಶಯರ ಸೂತ್ರಗಳೇನಿದ್ದವು ಆ ಪ್ರಕಾರ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳು ನಿರ್ಮಾಣವಾದಾಗ ಗುಜರಾತಿಗೆ ಯಾವ ಯಾವ ಹಳ್ಳಿಗಳನ್ನು ಆ ಪಾಟಸ್ಕರರ ಸೂತ್ರದ ಪ್ರಕಾರ ಬಿಟ್ಟುಕೊಡಬೇಕಾಗಿತ್ತೋ ಅವುಗಳನ್ನು ಬಿಟ್ಟುಕೊಡಲಿಲ್ಲ. ಆ ವಿಚಾರ ನನಗೆ ಬಹಳ ಚೆನ್ನಾಗಿ ಗೊತ್ತಿದೆ. ಏಕೆಂದರೆ ನಾನು ಇದೇ ರಾಜಕೀಯದಲ್ಲಿ ಕಳೆದ 25 ವರ್ಷಗಳಿಂದಲೂ ಶ್ರಮಿಸುತ್ತಾ ಬಂದಿದ್ದೇನೆ. ನಮಗೆ ಎಲ್ಲಿ ಯಾವ ತತ್ವಗಳು ಅನುಕೂಲವೋ ಅಲ್ಲಿ ತತ್ವಗಳನ್ನು ಪ್ರತಿಪಾದಿಸುತ್ತಾ ಒಂದು ಕಡೆ ಹಳ್ಳಿಗಳನ್ನು ಯೂನಿಟ್ ಮಾಡಬೇಕೆಂದು ಕೇಳುವುದು, ಎಲ್ಲಿ ಹಳ್ಳಿಗಳ ಅನುಕೂಲವಿರುವುದಿಲ್ಲವೋ ಅಲ್ಲಿ ಹೋಬಳಿಗಳನ್ನು ಯೂನಿಟ್ ಮಾಡಬೇಕೆನ್ನುವುದು, ಇನ್ನು ಕೆಲವು ಕಡೆ ಜಿಲ್ಲೆಗಳನ್ನು ಯೂನಿಟ್ ಮಾಡಬೇಕೆನ್ನುವುದು, ಇನ್ನು ಕೆಲವು ಕಡೆ ಕಾರಿಡಾರುಗಳನ್ನು ಮಾಡಿಕೊಡಿ ಎಂದು ಕೇಳುವುದು ಸರಿಯಲ್ಲ. ಇದರಲ್ಲಿ ಯಾವ ಒಂದು ತತ್ವವೂ ಅಡಕವಾಗಿಲ್ಲ. ರಾಜ್ಯಗಳ ಪುನರ್ವಿಂಗಡಣೆಯ ವಿಚಾರದಲ್ಲಿ ಫಜಲಾಲಿ ಕಮಿಷನ್ನಿನವರು ಹೇಳಿರತಕ್ಕ ತತ್ವಗಳನ್ನು ಇಡೀ ಭಾರತದಾದ್ಯಂತವೂ ಅನೇಕ ರಾಜ್ಯಗಳವರು ಮನ್ನಣೆಕೊಟ್ಟು ಒಪ್ಪಿಕೊಂಡು ಅದರಂತೆ ರಾಜ್ಯಗಳನ್ನು ವಿಭಜನೆ ಮಾಡಲಾಯಿತು. ಆಗಲೂ ಈ ಮಹಾರಾಷ್ಟ್ರೀಯರು ಅದಕ್ಕೆ ಒಪ್ಪಲಿಲ್ಲ. ಅವರ ಒಂದು ಒತ್ತಾಯಕ್ಕಾಗಿ ಮತ್ತೆ ಮಹಾಜನ್ ಕಮಿಷನ್ನನ್ನು ನೇಮಕ ಮಾಡಲಾಯಿತು. ಅವರು ದೇಶಾದ್ಯಂತವೂ ಸುತ್ತಾಡಿ ವಿಚಾರ ಮಾಡಿ ಉಭಯತ್ರರಿಗೂ ಒಂದು ತೀರ್ಮಾನ ಕೊಟ್ಟರು. ಇಂಥಾ ವಿಚಾರಗಳಲ್ಲಿ ಯಾರು ಮಾಡುವುದಾದರೂ ಅಷ್ಟೇ. ಇಂಥ ವಿಭಜನೆಯ ಬಗ್ಗೆ ಯಾವುದಾದರೊಂದು ಶಾಸ್ತ್ರಾಧಾರವಿದೆಯೇ ? ಅಂಥಾದ್ದು ಯಾವುದು ಇದೆ ? ಇದ್ದರೆ ಅದರ ಪ್ರಕಾರ ನಾವು ಯಾವ ಭಾಗಕ್ಕೆ ಹೊಂದಿಕೊಳ್ಳಬೇಕು ? ಆ ಶಾಸ್ತ್ರ ಇಂಥ ಒಂದು ವಿಭಜನೆಯನ್ನು ಆಡಳಿತ ದೃಷ್ಟಿಯಿಂದ ಮಾಡಬೇಕೆಂದು ಹೇಳುತ್ತಿದೆಯೇ ಒಂದು ಶಾಲಾ ದೃಷ್ಟಿಯಿಂದ ಮಾಡಬೇಕೆಂದು ಹೇಳುತ್ತಿದೆಯೇ, ಅಥವಾ ಒಂದು ಭಾಷಾದೃಷ್ಟಿಯಿಂದಲೇ ಮಾಡಬೇಕೆಂದು ಹೇಳುತ್ತಿದೆಯೇ ಎನ್ನುವುದನ್ನೆಲ್ಲಾ ತಜ್ಞರು ಶಾಸ್ತ್ರೀಯವಾಗಿ ನಿರ್ಧರಿಸಿ ಅದಕ್ಕೆ ಒಂದು ಸೂತ್ರವನ್ನು ಕಂಡು ಹಿಡಿಯಬೇಕಾಗಿದೆಯೇ ವಿನಾ ಎಲ್ಲಿಯೂ ಇವಕ್ಕೆಲ್ಲಾ ಆಧಾರಗಳನ್ನು ರೂಪಿಸತಕ್ಕ ಶಾಸ್ತ್ರವಿಲ್ಲ. ಈ ವಿಚಾರಗಳನ್ನೆಲ್ಲಾ ತಜ್ಞರಾದವರು ಕುರಿತು ಆಲೋಚಿಸಿ ಒಂದು ಸೂತ್ರವನ್ನು ನಿರ್ಧರಿಸಲಿ. ಹೇಗೂ ಈ ವಿಚಾರದಲ್ಲಿ ಸಾಕಷ್ಟು ನಿಧಾನವಾಗಿದೆ ಈಗಾಗಲೆ. ಆದಾಗ್ಯೂ ಇದನ್ನು ಒಂದು ಶಾಸ್ತ್ರೀಯ ರೀತಿಯಲ್ಲಿ ತೀರ್ಮಾನಮಾಡುವುದಕ್ಕೆ ಒಂದು ಸೂತ್ರವನ್ನು ರೂಪಿಸಬೇಕೆಂಬುದು ನನ್ನ ಒಂದು ಸಲಹೆ. ಅದಕ್ಕಾಗಿ ನಾನು ಈಗ ಸಭೆಯ ಮುಂದೆ ಒಂದು ನಿರ್ಣಯವನ್ನು ಮಂಡಿಸುವುದಕ್ಕೆ ಇಷ್ಟಪಟ್ಟಿದ್ದೇನೆ, ಆ ನಿರ್ಣಯವನ್ನು ನಾನು ನನ್ನ ಹೆಸರಿನಲ್ಲೇ ಮಂಡಿಸಬೇಕು ಎಂಬ ಆಗ್ರಹ ನನಗೇನೂ ಇಲ್ಲ. ಅದಕ್ಕೆ ಯಾರು ಇಷ್ಟಪಟ್ಟರೆ ಅವರ ಹೆಸರನ್ನೇ ಹಾಕಿಕೊಳ್ಳಬಹುದು. ಆ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ. ಈ ಹಿಂದೆ ಕೂಡ ಈ ವಿಚಾರದಲ್ಲಿ ಮಾನ್ಯ ಶ್ರೀ ಶಿವಪ್ಪನವರು ಮಾತನಾಡಬೇಕಾಗಿತ್ತು. ಆ ದಿವಸ ಅವರು ಸಭೆಗೆ ಬರಲಿಕ್ಕಾಗದೆ ಇದ್ದಕಾರಣ

ನಾನು ಆ ದಿವಸ ಈ ಚರ್ಚೆಯಲ್ಲಿ ಭಾಗವಹಿಸಿದ್ದೆ. ಆದರೆ ಈ ದಿವಸ ಅವರು ಸಭೆಯಲ್ಲಿ ಇದ್ದಾಗ್ಯೂ ಅವರು ಈ ಕೆಲಸವನ್ನು ನನಗೆ ವಹಿಸಿದ್ದಾರೆ. ಈ ಸಂದರ್ಭದಲ್ಲಿ ಕೆಲವರು ನಾನಾ ಅರ್ಥಗಳನ್ನು ಕಲ್ಪನೆ ಮಾಡಿಕೊಂಡಿರಬಹುದು. ಆದರೆ ಅಂಥಾದ್ದಕ್ಕೆ ಅವಕಾಶವೇ ಇಲ್ಲವೆಂದು ಹೇಳುತ್ತೇನೆ. ನಾವು ಈ ಸರ್ಕಾರದ ಪರವಾಗಿದ್ದೇವೆ ಎಂಬ ಕಲ್ಪನೆ ಯಾರಿಗೂ ಬೇಡ. ಕೇಂದ್ರದಲ್ಲಿರತಕ್ಕ ಇಂದಿರಾಗಾಂಧಿಯವರ ಸರ್ಕಾರವನ್ನು ಉರುಳಿಸುವುದು ಹೇಗೆ ನಮ್ಮ ಗುರಿಯಾಗಿದೆಯೋ ಅದೇ ನಮ್ಮ ಗುರಿ ಈ ರಾಜ್ಯ ಸರ್ಕಾರದ ಬಗ್ಗೆ ಕೂಡ. ಯಾವ ಸರ್ಕಾರ ನಮ್ಮ ಪಕ್ಷದ ಕನಿಷ್ಠ ಪರಿಮಿತಿಯ ಕಾರ್ಯಕ್ರಮಗಳನ್ನು ಒಪ್ಪುವುದಿಲ್ಲವೋ ಅಂಥ ಸರ್ಕಾರವನ್ನು ಉರುಳಿಸುವುದೇ ನಮ್ಮ ಪಕ್ಷದ ಗುರಿ. ಈ ವಿಚಾರ ತಮಗೂ ಗೊತ್ತಿದೆ, ಇಡೀ ದೇಶಕ್ಕೂ ಗೊತ್ತಿದೆ. ಆದುದರಿಂದ ಈ ವಿಚಾರದಲ್ಲಿ ಯಾರೂ ಒಂದು ತಪ್ಪು ಭಾವನೆ ಮಾಡಿಕೊಳ್ಳುವುದು ಬೇಡ. ಇದು ಒಂದು ರಾಜ್ಯದ ಅಥವಾ ದೇಶದ ಪ್ರಶ್ನೆಯಲ್ಲ. ಇದು ರಾಷ್ಟ್ರಕ್ಕೆ ಸಂಬಂಧಿಸಿದ ಪ್ರಶ್ನೆ......

ಶ್ರೀ ಕೆ. ಪ್ರಭಾಕರ್.—ಮಾನ್ಯ ಸದಸ್ಯರು ಈಗಿನ ಪರಿಸ್ಥಿತಿಯಲ್ಲಿ ಪಕ್ಷಾತೀತವಾಗಿ ಈ ಸಮಸ್ಯೆಯನ್ನು ಬಗೆಹರಿಸುವುದು ಹೇಗೆ ಎಂಬುದರ ಬಗ್ಗೆ ಸಲಹೆ ನೀಡುತ್ತಾರೆಯೇ?

ಶ್ರೀ ಎಸ್. ಗೋಪಾಲಗೌಡ.—ರಾಷ್ಟ್ರದಲ್ಲಿ ಕಾಂಗ್ರೆಸ್ ಪಕ್ಷವು ವಿಭಜನೆಯಾಗುವುದಕ್ಕೆ ಮೊದಲೇ ಮಹಾಜನ ಆಯೋಗವನ್ನು ನೇಮಕ ಮಾಡಲಾಗಿತ್ತು. ಹಾಗೆ ಅದು ನೇಮಕವಾದ ಕಾಲಕ್ಕೆ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ನಿಲುವಿನ ಬಗ್ಗೆ ನಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದೇವೆ. ಆ ದಿವಸ ನಾವು ಆ ವಿಚಾರದಲ್ಲಿ ಏನು ಹೇಳಿದ್ದೇವೆಂಬುದು ಇತಿಹಾಸಕ್ಕೆ ಸಂಬಂಧಪಟ್ಟ ವಿಷಯವಾಗಿದೆ ನಾನು ಆ ದಿವಸ ಏನು ಭಾಷಣ ಮಾಡಿದ್ದೇನೆಂಬುದನ್ನು ಈಗ ಓದಿ ಹೇಳುವುದಕ್ಕೆ ಕಾಲಾವಕಾಶವಿಲ್ಲ. ಆದರೆ ಆ ದಿವಸ ಯಾರು ಕಾಡಿ—ಬೇಡಿ ಆ ಮಹಾಜನ್ ಆಯೋಗವನ್ನು ನೇಮಕ ಮಾಡಲೇಬೇಕೆಂದು ಒತ್ತಾಯಪಡಿಸಿ ಅದನ್ನು ನೇಮಕ ಮಾಡಿದರೋ ಅವರು ಈ ದಿವಸ ಆ ವರದಿಯನ್ನು ಮರ್ಯಾದೆಯಿಂದ ಒಪ್ಪಿಕೊಂಡು ಈ ವಿಚಾರದಲ್ಲಿ ಅದೇ ಅಖೈರು ತೀರ್ಪೆಂದು ಪರಿಗಣಿಸಿ ಅದನ್ನು ಜಾರಿಗೆ ಕೊಡಬೇಕು. ಆ ವರದಿಯೇ ಅಖೈರು ತೀರ್ಪು ಮತ್ತು ಅದಕ್ಕೆ ಎಲ್ಲ ರಾಜ್ಯಗಳು ಬದ್ಧವಾಗಿರಬೇಕು. ಇಂಥ ವಿಷಯಗಳ ಬಗ್ಗೆ ದಿನಕ್ಕೊಂದು ಆಯೋಗಗಳನ್ನು ನೇಮಕ ಮಾಡುವುದಕ್ಕಾಗುವುದಿಲ್ಲ. ಹಾಗೆ ನೋಡುವುದಾದರೆ ಮಹಾಜನ್ ವರದಿಯಿಂದ ಕನ್ನಡ ನಾಡಿಗೇ ಇನ್ನೂ ಬಹಳ ನಷ್ಟವಾಗಿದೆ; ಕನ್ನಡ ನಾಡಿಗೆ ಸೇರಬೇಕಾಗಿದ್ದ ಅನೇಕ ಭಾಗಗಳು ಹಾಗೇ ಆ ವರದಿಯಿಂದ ಕೈಬಿಟ್ಟು ಹೋಗಿವೆ. ಆದಾಗ್ಯೂ ನಾವು ರಾಜ್ಯದ ಹಾಗೂ ರಾಷ್ಟ್ರದ ಒಂದು ಹಿತದೃಷ್ಟಿಯಿಂದ ಅದನ್ನು ಒಪ್ಪಬೇಕಾಯಿತು. ಈಗಲೂ ಸಹಾ ಆ ಮಹಾಜನ್ ವರದಿಯನ್ನೇ ಒಂದು ಅಖೈರು ತೀರ್ಪೆಂದು ಭಾವಿಸಿ ಎಲ್ಲರೂ ಅದನ್ನು ಒಪ್ಪಿಕೊಂಡು ಅದರಂತೆ ತೀರ್ಮಾನ ಮಾಡಿಕೊಳ್ಳುವುದು ಸರ್ವರಿಗೂ ಒಳ್ಳೆಯದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಈ ಚರ್ಚೆಯನ್ನು ನಾಳೆಗೂ ಮುಂದುವರಿಸಬೇಕೆಂದು ಒತ್ತಾಯಮಾಡುತ್ತೇನೆ. ನಮ್ಮಲ್ಲಿನ್ನೂ ಮಾತನಾಡತಕ್ಕವರು 30-40 ಜನರಿದ್ದಾರೆ.

ಶ್ರೀ ಎಸ್. ಎಂ. ಚನ್ನಬಸಪ್ಪ.—ಇದು ಆತುರದಲ್ಲಿ ತೀರ್ಮಾನ ಮಾಡತಕ್ಕ ಪ್ರಶ್ನೆಯಲ್ಲ. ಬಜೆಟ್ ಚರ್ಚೆಗೆ ಕಾಲ ಮೊಟಕಾಗುತ್ತದೆಂಬ ವಾದ ಸಲ್ಲದು. ಅದಕ್ಕೆ ಬೇಕಾದರೆ ನಾವು ಓಟ್ ಆನ್ ಅಕೌಂಟ್ ಪಡೆದು ತದನಂತರ ನಿಧಾನವಾಗಿ ಅದನ್ನು ಚರ್ಚೆಮಾಡಬಹುದು......

ಶ್ರೀ ಎಸ್. ಎಸ್. ಅರಕೇರಿ.—ಅಧ್ಯಕ್ಷರಲ್ಲಿ ನನ್ನದೊಂದು ವಿನಂತಿ. ಈ ಒಂದು ರೆಸೆಲ್ಯೂಷನ್ ಬಗ್ಗೆ ಈ ಸಭೆಯು ಮುಂದೆ ನಾವು ಮಾತನಾಡಬೇಕಾಗಿದೆ. ಅದಕ್ಕೆ ತಾವು ಟೈಂ ಲಿಮಿಟ್ ಮಾಡಬಾರದು ಎಂದು ಹೇಳುತ್ತೇನೆ. ಶ್ರೀಮತಿ ಇಂದಿರಾಗಾಂಧಿಯವರು ಬಾರ್ಡರ್ ಕಟ್ ಮಾಡಿದ ಹಾಗೆ ತಾವು ಟೈಂ ಕಟ್ ಮಾಡಿದರೆ ಆಗುವುದಿಲ್ಲ. ಇದಕ್ಕೆ ಸಾಕಾದಷ್ಟು ಟೈಂ ಕೊಡಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು.—ಈ ವಿಷಯದಲ್ಲಿ ಮಾನ್ಯ ಪಾರ್ಲಿಮೆಂಟರಿ ಮಂತ್ರಿಗಳ ಅಭಿಪ್ರಾಯ ಏನು?

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ಪ್ರಸಕ್ತ ಸನ್ನಿವೇಶದಲ್ಲಿ ಇದರ ಬಗ್ಗೆ ಚರ್ಚೆ ಆಗುವುದು ಯೋಗ್ಯ ಎಂದು ಈ ಚರ್ಚೆಗೆ ನಿನ್ನೆ ಮತ್ತು ಈ ದಿನ ಗೊತ್ತು ಮಾಡಿ ಇದನ್ನು ಅಖೈರು ಮಾಡುವುದು ಎಂದು ತೀರ್ಮಾನ ಮಾಡಿದರು. ನಾಳೆ ದಿವಸ ಆಯವ್ಯಯದಮೇಲೆ ಚರ್ಚೆ ಆಗುವುದಕ್ಕೆ ಕಾಲಬೇಕಾಗುತ್ತದೆ. ಆದುದರಿಂದ ಈಗಲೂ ಬಿಸಿನೆಸ್ ಅಡ್ವೈಸರಿ ಕಮಿಟಿಯ ಅಭಿಪ್ರಾಯದಂತೆ ಮಾಡುವುದು ಯೋಗ್ಯ ಎಂದು ನನಗೆ ಅನಿಸುತ್ತದೆ.

ಶ್ರೀ ಎಸ್. ಎಸ್. ಅರಕೇರಿ.—ಸ್ವಾಮಿ, ಇದು ಸೀರಿಯಸ್ ಸಿಚುಯೇಷನ್ ಆಗಿರುವುದರಿಂದ ಇದಕ್ಕೆ ಬಹಳ ಕಾಲ ಬೇಕು. ಇದಕ್ಕೆ ಮಿತಿ ಹಾಕುವುದು ಸರಿಯಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಯವರು ಈರೀತಿ ಮಾಡುತ್ತಾ ಹೋದರೆ ಬಹಳ ತೊಂದರೆಯಾಗುತ್ತದೆ.

Mr. SPEAKER.—It is for the two sides to come to an understanding. There are a number of speakers. I think some of them should be accommodated on both sides. At the same time, the business should not suffer.

ಶ್ರೀ ಕೆ. ಪುಟ್ಟಸ್ವಾಮಿ.—ಏನಾದರೂ ಒಂದು ಸೂಚನೆ ಮಾಡಿದರೆ ಅದಕ್ಕೆ ಆಧಾರ ಇದ್ದರೆ ಮುಂದಿನ ಚರ್ಚೆಗೆ ಅನುಕೂಲವಾಗುತ್ತದೆ. ನಾನು ಈಗ ಏನು ಹೇಳುವುದಕ್ಕೂ ಸಂಕೋಚವಾಗುತ್ತದೆ. ಈಗ ತಮ್ಮ ಅಭಿಪ್ರಾಯ ನೋಡಿದರೆ ಇನ್ನಷ್ಟು ಕಾಲ ವಿಸ್ತರಿಸಿಕೊಡೋಣ ಎಂದು ಇದೆ. ಆದುದರಿಂದ ಈ ದಿವಸ ಎಷ್ಟು ಹೊತ್ತು ಕೂತುಕೊಳ್ಳುವುದಕ್ಕೆ ಸಾಧ್ಯವೋ ಅಷ್ಟು ಹೊತ್ತು ಕೂತುಕೊಂಡು ಚರ್ಚೆ ಮಾಡಬಹುದು. ಈಗ ಆಗದೆ ಹೋದರೆ ನಾಳೆ ಬೆಳಗ್ಗೆ ಹಾಕಿಕೊಳ್ಳಬಹುದು.

Sri K. H. PATIL.—Sir, you can take the sense of the House and decide the matter.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಈ ವಿಷಯದಲ್ಲಿ ಯಾರು ಯಾರು ಮಾತನಾಡುತ್ತಾರೋ ಅವರೆಲ್ಲಾ ಮಾತನಾಡಲೇ ಬೇಕು. ಇದು ಪ್ರಾಮುಖ್ಯವಾದ ವಿಚಾರ.

ಶ್ರೀ ಬಿ. ಭಾಸ್ಕರಶೆಟ್ಟಿ.—ಇದು ಮಹತ್ತರವಾದ ವಿಷಯ. ಇದನ್ನು ಅವಸರವಾಗಿ ಮುಗಿಸುವುದು ಸರಿಯಲ್ಲ.

Mr. SPEAKER.—Now that two hon. members have spoken, others should be brief.

Sri R. DAYANANADA SAGAR (Chamarajpet).—Sir, the whole of tomorrow may be allotted for this. If necessary, you can take 'vote on account' for the Budget.

Mr. SPEAKER.—The Hon. Minister for Parliamentary Affairs suggested that the Chief Minister may reply tomorrow. Supposing we sit today till 8-00 P.M.

Sri M. MALLIKARJUNASWAMY (Malavalli).—Sir, we cannot sit beyond 6-00 P.M.

Sri S. SIVAPPA.—Sir, you know the sense of the House. Many hon. members are anxious to participate in the debate. I think some members who have already given their names should be accommodated...

Sri R. DAYANANDA SAGAR.—Sir, this is a burning issue. More time should be allowed for this. If necessary, you can take 'vote on account' for the budget.

Mr. SPEAKER.—The hon. Member should not intervene with a loud voice like this. The dignity of the House should be maintained.

Sri S. SIVAPPA.—Sir, I request you to kindly allot tomorrow also for this discussion.

Mr. SPEAKER.—I am helpless in the matter.

Sri S. SIVAPPA.—The gap can be filled up on other days. ಅಧ್ಯಕ್ಷರೇ ಈಗ ಇರತಕ್ಕಂಥಾದ್ದು ಒಂದೇ ಒಂದು ದಾರಿ. ಈ ವಿಷಯದಲ್ಲಿ ಮಾತನಾಡಬೇಕು ಅನ್ನತಕ್ಕಂಥ ಆಕಾಂಕ್ಷೆ ಬಹಳ ಜನರಲ್ಲಿರುವುದರಿಂದ ಅವರಿಗೆ ಕಾಲ ಒದಗಿಸುವುದು ಈ ಸಭೆಯ ಕರ್ತವ್ಯ. ಆದುದರಿಂದ ಈಗ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಕೂಡ ನಿರ್ಣಯದಂತೆ ಆಗಬೇಕು ಎಂದು ಹೇಳು

ತ್ತಾರೆ. ಅವರು ಏನು ವಾದ ಹೇಳಿದ್ದಾರೆ ಅದು ಈ ಸಮಯದಲ್ಲಿ ಅಲ್ಲ. ಈ ಸಮಸ್ಯೆ ಬೃಹದಾಕಾರವಾಗಿರುವುದರಿಂದ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಬೇಕು ಬೇರೆ ದಾರಿಯೇ ಇಲ್ಲ.

Sri K. H. PATIL.—Please take the sense of the House.

Mr. SPEAKER.—If both sides do not come to an understanding, I shall take the sense of the House. I request both sides to come to an understanding to enable me to decide as to what should be done.

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, ಈ ದಿನ ನನ್ನದು ಅರ್ಧ ಗಂಟೆ ಕಾಲ ಚರ್ಚೆ ಇದೆ. ತಮ್ಮ ಕಾರ್ಯಾಲಯದಲ್ಲಿ ಕೆಲವು ಇನ್‌ಫರ್ಮೇಷನ್ ಕೇಳಿದೆ. ಕಾರ್ಯದರ್ಶಿಯವರನ್ನು ವಿಚಾರಿಸಿದ್ದರಲ್ಲಿ ಆ ಫೈಲು ಮಂತ್ರಿಗಳ ಹತ್ತಿರ ಇದೆ ಅಲ್ಲಿಂದ ಬರುವುದೇ ಕಷ್ಟ ಎಂದು ಹೇಳುತ್ತಾರೆ. ತಮ್ಮ ಆಫೀಸಿನಲ್ಲಿ ಒಂದು ಲಿಸ್ಟ್ ಆಫ್ ಬಿಸಿನೆಸ್ ತಯಾರು ಮಾಡಿದಮೇಲೆ ಸರ್ಕಾರದವರು ಗೌರವ ಕೊಟ್ಟು ಅದಕ್ಕೆ ಸರಿಯಾದ ರೀತಿಯಲ್ಲಿ ನಡೆಯತಕ್ಕಂಥಾದ್ದು ಸೂಕ್ತ.

Mr. SPEAKER.—I shall find out.

ಶ್ರೀ ಹೆಚ್. ಎನ್. ನಂಜೇಗೌಡ.—ನನಗೆ ಬೇಕಾದ ಇನ್‌ಫರ್ಮೇಷನನ್ನು ನಾನು ಚರ್ಚೆ ಮಾಡುವುದಕ್ಕೆ ಮುಂಚೆ ತರಿಸಿಕೊಟ್ಟರೆ ಒಳ್ಳೆಯದು ಇಲ್ಲದಿದ್ದರೆ ಕಷ್ಟವಾಗುತ್ತದೆ.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಚರ್ಚೆಯಾಗುತ್ತಿರುವ ನಿರ್ಣಯದ ಬಗ್ಗೆ ಪ್ರತ್ಯೇಕವಾಗಿ ಮಾನ್ಯ ಸದಸ್ಯರಾದ ಶ್ರೀ ಗೋಪಾಲಗೌಡರು ಈ ಹೊತ್ತು ಒಂದು ಸಬ್‌ಸ್ಟಿಟ್ಯೂಟ್ ಮೋಷನನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಅದನ್ನು ನಾನು ಹೃತ್ಪೂರ್ವಕವಾಗಿ ಅನುಮೋದನೆ ಮಾಡುವುದಕ್ಕಾಗಿ ನಿಂತಿದ್ದೇನೆ. 1956ನೇ ಇಸವಿಯಲ್ಲಿ ಭಾಷಾವಾರು ಪ್ರಾಂತಗಳ ಪುನರ್ವಿಂಗಡಣೆಯಾದಾಗ ಮೈಸೂರು ರಾಜ್ಯಕ್ಕೆ ಐದು ರಾಜ್ಯಗಳಿಂದ ಅನೇಕ ಭಾಗಗಳು ಬಂದು ಸೇರಿ ಈ ಹೊಸ ರಾಜ್ಯವಾಯಿತು. 1955 ನೇ ಇಸವಿಯಲ್ಲಿ ಮಹಾರಾಷ್ಟ್ರದ ಗಡಿ ಹಾಗೂ ಕೇರಳದ ಗಡಿ ಹಾಗೂ ಇನ್ನಿತರ ಗಡಿಗಳ ವಿವಾದದ ವಿಚಾರದಲ್ಲಿ ಸರ್ವಸಮ್ಮತವಾದ ನೀತಿಯನ್ನು ಅನುಸರಿಸಿ ಭಾಷಾ ರಾಜ್ಯಗಳು ಆಗಬೇಕೆಂದು ಎಲ್ಲರೂ ಒಪ್ಪಿ ಇದಕ್ಕನುಸಾರವಾಗಿ ಎಸ್. ಆರ್. ಸಿ. ರಿಪೋರ್ಟ್ ಕೂಡ ಬಂತು. ಮಹಾರಾಷ್ಟ್ರ ಹಾಗೂ ಮೈಸೂರು ಗಡಿಗಳ ಮತ್ತು ಕೇರಳದ ಗಡಿಗಳನ್ನು ಪುನಃ ಪರಿಶೀಲಿಸಲು ಒಂದು ಉನ್ನತ ಮಟ್ಟದ ಕಮಿಷನ್ ನೇಮಕ ಮಾಡಬೇಕು ಮತ್ತು ಈ ಕಮಿಷನ್ ಕೊಡುವ ತೀರ್ಪಿಗೆ ಎಲ್ಲರೂ ಒಪ್ಪಬೇಕು ಎಂದು ಹೇಳಿ ಮಹಾಜನ ಕಮಿಷನ್ ನೇಮಕವಾಗಿ ಅವರು ಒಂದು ವರದಿ ಕೊಟ್ಟರು. ಆ ವರದಿ ನಮ್ಮ ರಾಜ್ಯಕ್ಕೆ ಅನಾನುಕೂಲವಾಗಿದ್ದರೂ ಅದನ್ನು ಸಂಪೂರ್ಣವಾಗಿ ಒಪ್ಪಲೇಬೇಕು ಎಂದು ಒಂದು ನಿರ್ಣಯ ಮಾಡಿ ಕಳುಹಿಸಲಾಗಿತ್ತು. ಮಹಾರಾಷ್ಟ್ರದವರ ಒತ್ತಾಯದಿಂದಲೇ ಮಹಾಜನ್ ಕಮಿಷನ್ ಏರ್ಪಾಡಾದುದರಿಂದ ಆ ಕಮಿಷನ್ನಿನವರು ಒಂದು ವರದಿ ಕೊಟ್ಟಮೇಲೆ ಅದನ್ನು ಪೂರ್ತಿಯಾಗಿ ಒಪ್ಪುವ ಔಚಿತ್ಯವನ್ನು ಅವರು ತೋರಿಸಬೇಕಾಗಿತ್ತು. ಕೇಂದ್ರ ಸರಕಾರದಲ್ಲಿದ್ದ ಆಡಳಿತದ ಕಾಂಗ್ರೆಸ್ಸು ಪಕ್ಷ ಹಾಗೂ ವರ್ಕಿಂಗು ಕಮಿಟಿಯವರು ಇದರ ಬಗ್ಗೆ ಒಮ್ಮತದ ತೀರ್ಮಾನ ಮಾಡಬೇಕಾಗಿತ್ತು. ಅದನ್ನು ಏಕೆ ಮಾಡಲಿಲ್ಲ ಎನ್ನುವ ಹಿಂದಿನ ಚರಿತ್ರೆಗೆ ನಾನು ಈಗ ಹೋಗುವುದಿಲ್ಲ. ನಮ್ಮ ಮೈಸೂರು ರಾಜ್ಯಕ್ಕೆ ಮಹಾಜನ್ ಕಮಿಷನ್ನಿನಿಂದ ಅನ್ಯಾಯವಾಗಿದ್ದರೂ ಕೂಡ ಅದನ್ನು ಗಮನಿಸದೇ ಹೇಗಾದರೂ ಆ ಕಮಿಷನ್ನಿನ ವರದಿಯನ್ನು ಕಾರ್ಯಗತ ಮಾಡಬೇಕು ಎಂದು ನಾವು ಒಪ್ಪಿದ್ದೆವು. ಆದರೆ ಇದರ ಬಗ್ಗೆ ಕೇಂದ್ರದವರು ನಿಧಾನದ ನೀತಿ ಅನುಸರಿಸಿ ಇಂದು ಇಂತಹ ಒಂದು ಪರಿಸ್ಥಿತಿ ನಮಗೆ ಒದಗಿಬಂದಿದೆ. ಇದೇ ಸಭೆಯಲ್ಲಿ 1967 ನೇ ಡಿಸೆಂಬರು ತಿಂಗಳಲ್ಲಿ ಆದ ಅಧಿವೇಶನದಲ್ಲಿ ಇಂತಹದೇ ಒಂದು ನಿರ್ಣಯವನ್ನು ತಂದು ಒಮ್ಮತದಿಂದ ಪಾಸು ಮಾಡಿ ಕಳುಹಿಸಲಾಗಿತ್ತು. ಅದರಲ್ಲಿ ಕೇಂದ್ರದವರು ಇದನ್ನು ಸಂಪೂರ್ಣವಾಗಿ ಒಪ್ಪಲೇಬೇಕೆಂದು ಮತ್ತು ಇದನ್ನು ಪುನರ್ವಿಮರ್ಶೆ ಮಾಡುವುದು ಅನಗತ್ಯ ಎಂದೂ ಸೂಚಿಸಲಾಗಿತ್ತು. ಆದರೆ ಮಹಾರಾಷ್ಟ್ರದವರು ಇಂದು ಈ ಮಹಾಜನ್ ಕಮಿಷನ್ ವರದಿಯನ್ನು ಒಪ್ಪದೆ ಇರುವುದರಿಂದ, ಅವರ ನಾಯಕರುಗಳ ಪ್ರಭಾವಕ್ಕೊಳಗಾಗಿ ಕೇಂದ್ರದವರು ಇದರ ಬಗ್ಗೆ ಪುನಃ ವಿಚಾರ ಮಾಡುತ್ತಿದ್ದಾರೆ ಎಂದು ತಿಳಿದು ಬಂದಿರುವುದರಿಂದ ನಮ್ಮ ಜನರು ಇದಕ್ಕಾಗಿ ಬಹಳ ಕೆರಳಿದ್ದಾರೆ. ಇದರ ಬಗ್ಗೆ ಶ್ರೀಮಾನ್ ಸಿದ್ಧವೀರಪ್ಪನವರು ಎಸ್. ಆರ್ ಸಿ ಕಮಿಟಿ ರಿಪೋರ್ಟಿನಲ್ಲಿರತಕ್ಕ ಕೆಲವು ವಾಕ್ಯಗಳನ್ನೂ ಇಲ್ಲಿ ಓದಿ ಹೇಳಿದರು. ಇದನ್ನು ನಾವು ಅನುಸರಿಸಬೇಕು ಎಂದು ಹೇಳಿದಾಗ ಕೇಂದ್ರದವರು ಆಗುವುದಿಲ್ಲ ಎಂದು ಹೇಳಿದ್ದರಿಂದ, ಈ ಮಹಾಜನ್ ಕಮಿಷನ್ ಏರ್ಪಾಡಾ

(ಶ್ರೀ ಎಸ್. ಶಿವಪ್ಪ)

ಯಿತು. ಆಗ ಕಮಿಷನ್ ಮುಂದೆ ಈ ಸರಕಾರ ಏನು ಹೇಳಿದೆ ಮತ್ತು ಕೇಂದ್ರ ಸರಕಾರದವರು ಏನು ಹೇಳಿದರು ಅವೆಲ್ಲಾ ಬೇರೆ ವಿಚಾರಗಳಾದವು. ಏತಕ್ಕೋಸ್ಕರ ಇದುವರೆಗೂ ಕೇಂದ್ರ ಸರ್ಕಾರದವರು ಇದನ್ನು ವಿಚಾರ ಮಾಡದೇ ಇದ್ದರು ಎನ್ನುವುದನ್ನು ಈ ಸಭೆಯಲ್ಲಿ ನಾವೆಲ್ಲರೂ ಈಗ ಯೋಚನೆ ಮಾಡಬೇಕು. 1957 ರಲ್ಲೂ ಕಾಂಗ್ರೆಸ್ಸು ಸರಕಾರ ಇತ್ತು ಮತ್ತು ಕೇಂದ್ರದಲ್ಲೂ ಅವರದೇ ಸರಕಾರ ಇತ್ತು. ಇತ್ತೀಚಿನವರೆಗೆ ಅನ್‌ಡಿವೈಡೆಡ್ ಕಾಂಗ್ರೆಸ್ಸು ಆಡಳಿತವೇ ಆಗಿನಿಂದಲೂ ಇತ್ತು, ಮತ್ತ ಮಾನ್ಯ ನಿಜಲಿಂಗಪ್ಪನವರು ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿಯೂ ಇದ್ದರು. ಇವರು ಸುಮಾರು ಎರಡು ಮೂರು ವರ್ಷಗಳಿಂದಲೂ ಮಹಾಜನ್ ಕಮಿಷನ್ ವರದಿಯನ್ನು ಕೇಂದ್ರದವರು ಒಪ್ಪುವಂತೆ ಮಾಡಲು ಏಕೆ ಪ್ರಯತ್ನ ಮಾಡಲಿಲ್ಲ? ಇಲ್ಲಿಯವರೆಗೆ ತಡಮಾಡಿದುದರಿಂದ ಇಂದು ಇಂತಹ ಒಂದು ಬಿಕ್ಕಟ್ಟಿನ ಪರಿಸ್ಥಿತಿ ಉಂಟಾಗಿದೆ. ಕಾಂಗ್ರೆಸ್ ಪಕ್ಷದ ವರ್ಕಿಂಗು ಕಮಿಟಿಯಲ್ಲಿಯೂ ಮತ್ತು ಕೇಂದ್ರ ಸರ್ಕಾರದಲ್ಲಿಯೂ ಇವರ ಪ್ರಭಾವ ಇದ್ದರೂ ಇಂತಹ ಒಂದು ಮಹಾಜನ್ ವರದಿಯ ತೀರ್ಪನ್ನು ಮನ್ನಣೆ ಮಾಡಿ ತೀರ್ಪನ್ನು ಏಕೆ ಕೊಡಲಿಲ್ಲ ಎಂದು ನಾನು ಇಲ್ಲಿ ಕೇಳಬೇಕಾಗಿದೆ.

Sri B. P. KADAM.—I rise to a point of order. The hon. Member and Leader of the Opposition Sri Sivappa has been elected as the Leader of the Opposition by the S.V.D. on the basis of a common minimum programme. One of the clauses of the minimum programme is that S.V.D. should have a solution to solve the problem relating to linguistic States in this country. I want to know whether he abides by that minimum programme ?

Mr. SPEAKER.—There is no point of order. What the hon. Member Sri B. P. Kadam stated is only a matter for internal discipline of the party and it is left to the Leader of the Opposition Sri Sivappa to say whatever he wants to say on the issue before this House.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ. ಮಾನ್ಯ ಸದಸ್ಯರಾದ ಶ್ರೀ ಕದಂರವರು ಇಲ್ಲಿ ಎಸ್. ವಿ. ಡಿ, ಪಾರ್ಟಿಯಮೇಲೆ ಒಂದು ರೀತಿಯಾದ ಅವಿಶ್ವಾಸ ನಿರ್ಣಯ ತರುವಂತೆ ಕಾಣುತ್ತದೆ. ಇಲ್ಲಿ ಬೇರೆ ಪಾರ್ಟಿಗಳ ವಿಚಾರವನ್ನು ಮತ್ತು ಅವುಗಳ ಆಂತರಿಕ ವ್ಯವಹಾರಗಳನ್ನು ಇಲ್ಲಿ ಹೇಳಬಹುದೇ ?

Mr. SPEAKER.—There is no point of order.

ಶ್ರೀ ಎಸ್. ಶಿವಪ್ಪ.—ಭಾಷಾವಾರು ಪ್ರಾಂತವಾದಾಗ ಈ ರಾಷ್ಟ್ರದಲ್ಲಿ ಒಂದೇ ಪಕ್ಷದ ಆಡಳಿತ ಇತ್ತು ಅವರು ಒಂದೇ ರೀತಿಯಾದ ನೀತಿಯನ್ನು ಅನುಸರಿಸಬೇಕಾಗಿತ್ತು. ಅಂತಹ ನೀತಿ ಅನುಸರಿಸದೇ ಇದ್ದುದರಿಂದ ಇಂದು ಇಂತಹ ಪರಿಸ್ಥಿತಿಗೆ ನಾವು ಬರಬೇಕಾಯಿತು. ಮಾನ್ಯ ಸದಸ್ಯರಾದ ಶ್ರೀಮಾನ್ ಕದಂರವರೂ ಕೂಡ ಇದರ ಬಗ್ಗೆ ಸರಿಯಾಗಿ ವಿಚಾರ ಮಾಡಿ ಹೇಳಬಹುದಾಗಿತ್ತು. ಮೈಸೂರು ರಾಜ್ಯದಲ್ಲಿ ಆಗ ಮಾಡಿದ ನಿರ್ಣಯದಂತೆ ಕೇಂದ್ರ ಸರಕಾರ ಒಪ್ಪಿ ಇದನ್ನು ಕಾರ್ಯಗತ ಮಾಡಬಹುದಾಗಿತ್ತು. ಆದರೆ ಯಾವುದೋ ಒತ್ತಡಕ್ಕೆ ಬಲಿಯಾಗಿ ನೀತಿಗಳನ್ನೆಲ್ಲಾ ಗಾಳಿಗೆ ತೂರಿ ಇಂದು ಕೇಂದ್ರದವರು ಆಡಳಿತ ನಡೆಸುತ್ತಿದ್ದಾರೆ. ಇವರಿಗೆ ಯಾವ ನೀತಿಯೂ ಇಲ್ಲ ಎನ್ನುವುದನ್ನು ನಾವೆಲ್ಲಾ ಇಂದು ಮನಗಾಣಬೇಕಾಗಿದೆ. ಮೊದಲಿಂದ ತಾವು ಇದರ ಬಗ್ಗೆ ನೋಡಬಹುದು. ಫಜಲಾಲಿ ಕಮಿಷನ್ ಎಂದು ಮಾಡಿದರು ಅವರು ಒಂದು ರಿಪೋರ್ಟ್ ಕೊಟ್ಟರು. ಇದರ ಬಗ್ಗೆ ಸರ್ಕಾರದವರು ಸರಿಯಾದ ತೀರ್ಮಾನ ತೆಗೆದುಕೊಳ್ಳಲಿಲ್ಲ. ಅನಂತರ ಮೈಸೂರಿನವರು ಬೇರೆ ಯಾವ ಕಮಿಷನ್ ಕೊಡ ಬೇಡ ಎಂದು ಹೇಳುತ್ತಿದ್ದರೂ ಮಹಾರಾಷ್ಟ್ರದವರೇ ಒತ್ತಾಯ ತಂದು ಮಹಾಜನ್ ಕಮಿಷನ್ ಮಾಡಲೇಬೇಕು ಎಂದು ಕೇಂದ್ರದವರಿಂದ ಮಾಡಿಸಿದರು.

5-00 P.M.

[MR. DEPUTY SPEAKER in the Chair]

ಆವರೆ ಈ ಒಂದು ಕಮಿಷನ್ನನ್ನು ರಚನೆ ಮಾಡಿದಾಗ್ಗೆ ಅವರು ಇದು ಕೇವಲ ಮೈಸೂರು, ಮಹಾರಾಷ್ಟ್ರ ಹಾಗೂ ಮೈಸೂರು ಕೇರಳ ಈ ಗಡಿಗಳಿಗೆ ಸಂಬಂಧಪಟ್ಟುದು. ಅದಕ್ಕೋಸ್ಕರ ಈ ಕಮಿಷನ್ ಆಗಿದೆಯೆಂದರು. ಅಂದವೇಲೆ ಮಹಾಜನ್ ಅವರ ಶಿಶು, ಚವಾಣ್ ಅವರ ಶಿಶು, ಕೇಂದ್ರ ಸರ್ಕಾರದ ಶಿಶುವಾಗಿ ಈ ವರದಿ ಇರುವಾಗ, ಆ ಶಿಶುವನ್ನು ಬಾವಿಗೆ ಬಿಸಾಕಿ ಎಂದು ಹೇಳುತ್ತಿದ್ದಾರೆ. ಇವತ್ತು ನಾನು ಮಾನ್ಯ ಶ್ರೀ ಕದಂ ಅವರಿಗೆ ಹೇಳುತ್ತಿದ್ದೇನೆ. ಇದರಲ್ಲಿ ಏನೊಂದು ತತ್ವ ಇದೆಯೆನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ರಾಜ್ಯ ಪುನರ್ವಿಂಗಡನೆ ಆದಾಗ ಇದನ್ನು ಮಾಡಿದ್ದರೆ ನಾವು ಆಗ ಒಪ್ಪುತ್ತಿದ್ದವು. ಆವತ್ತು ಅಂಥಾದ್ದನ್ನು ಮಾಡದೆ, ಯಾರದೋ ಒತ್ತಡಕ್ಕೋಸ್ಕರವಾಗಿ ಮಹಾಜನ್ ಕಮಿಷನ್ ಏರ್ಪಾಡುಮಾಡಿ ಆ ಕಮಿಷನ್ ಮಾಡಿದಂಥ ವರದಿಯನ್ನು ಈಗ ಕೇಂದ್ರ ಸರ್ಕಾರದವರೇ ಒಪ್ಪದೇ ಹೋದರೆ, ಅದು ಎಂತಹ ಸರ್ಕಾರ? ಇವತ್ತು ನಾನು ಅವರಿಗೆ ಹೇಳುತ್ತೇನೆ. ಮಾನ್ಯ ಶ್ರೀ ಕದಂ ಅವರೂ ಕೂಡ ಮಹಾಜನ್ ಕಮಿಷನ್ ಮಾಡಿದ್ದ ಕೇಂದ್ರ ಸರ್ಕಾರದವರು ಎಂದು ಹೇಳಿದ್ದಾರೆ. ಬೆಳಗಾಂ, ಕಾರವಾರ ನಮಗೇ ಬರಬೇಕು ಎನ್ನುವ ಮಾತು ಅಲ್ಲ. ಕರವಾರ ಮತ್ತು ಬೆಳಗಾಂ ಎಲ್ಲಿದ್ದರೂ ಪರವಾಇಲ್ಲ. ಆ ರೀತಿ ಬೇಧಭಾವ ನಮಗೆ ಇರಬಾರದು. ನೂರಕ್ಕೆ ನೂರರಷ್ಟು ಒಂದೇ ಭಾಷೆಯಾಡುವ ಜನರನ್ನು ಒಂದುಕಡೆ ಸೇರಿಸಬೇಕು ಎಂದು ರಾಜ್ಯ ಪುನರ್ವಿಂಗಡಣೆ ಈಗಾಗಲೇ ಆಗಿದೆ. ಎಷ್ಟೇ ಕರಾರುವಾಕ್ಕಾಗಿ ಮಾಡಿದರೂ ಕೂಡ ಬೇರೆ ಭಾಷೆಯಾಡುವ ಜನರು ಇದ್ದೇ ಇರುತ್ತಾರೆ. ಏಕೆಂದರೆ ಬೊಂಬಾಯಿನಲ್ಲಿ ಕನ್ನಡ ಮಾತನಾಡುವವರು ಇದ್ದಾರೆ. ಬೆಂಗಳೂರಿನಲ್ಲಿ ಮರಾಠಿ, ತೆಲುಗು ಭಾಷೆಗಳನ್ನು ಮಾತನಾಡುವವರೂ ಇದ್ದಾರೆ. ಆದ್ದರಿಂದ ನಾನು ಭಾಷಾ ದ್ವೇಷಿಯಲ್ಲ. ನಾನು ಎಲ್ಲಾ ಭಾಷೆಗಳಲ್ಲಿಯೂ ಪ್ರೀತಿಯಿಟ್ಟಿರುವವನು. ಆದರೆ ಅದಕ್ಕೆ ಒಂದು ಆಧಾರ ಬೇಕು. ಜಿಯಾಗ್ರಫಿ, ಅಡ್ಮಿನಿಸ್ಟ್ರೇಟಿವ್ ಕಾಂಟಿಗ್ಯುಯಟಿ—ಎಲ್ಲಾ ಸೇರಿ ಒಂದು ಆಧಾರದ ಮೇಲೆ ರಾಜ್ಯ ಪುನರ್ವಿಂಗಡಣೆಯಾಗಿದೆ. ಅದ ಮೇಲೆ ಈಗ ನಾವು ಆ ತತ್ವಗಳ ವಿಮರ್ಶೆಗೆ ಹೋಗುವುದಕ್ಕೆ ಬದಲಾಗಿ 1967ನೇ ಇಸವಿಯಲ್ಲಿ ಮಹಾಜನ್ ಕಮಿಷನ್ನಿನವರು ಕೊಟ್ಟಂಥ ತೀರ್ಪನ್ನು ಅವಾರ್ಡ್ ಎಂಬುದಾಗಿ ಟ್ರೀಟ್ ಮಾಡಿ ಅದನ್ನು ಕಟ್ಟುನಿಟ್ಟಾಗಿ ಆಚರಣೆಗೆ ತರಬೇಕೆಂದು ಈ ಶಾಸನಸಭೆ ನಿರ್ಣಯ ಮಾಡಿದೆ. ಆ ನಿರ್ಣಯಕ್ಕೆ ಎಂ. ಇ. ಎಸ್. ಅವರು ಒಪ್ಪಿದರೋ ಇಲ್ಲವೋ ಗೊತ್ತಿಲ್ಲ.

Sri B. P. KADAM.—How can we admit it?

ಶ್ರೀ ಎಸ್. ಶಿವಪ್ಪ.—ಹಿಂದೆ ಯಾವ ನಿರ್ಣಯವನ್ನು ಈ ಸಭೆ ಮಾಡಿತ್ತೋ ಆ ನಿರ್ಣಯದ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಇದು ಎಸ್.ವಿ.ಡಿ., ಕಾಂಗ್ರೆಸ್ (ಆರ್), ಸಿಂಡಿಕೇಟ್ ಮತ್ತು ಇಂಡಿಕೇಟ್ ಪ್ರಶ್ನೆಯಲ್ಲ. ಯಾವುದೇ ಒಂದು ಪಕ್ಷದ ಪ್ರಶ್ನೆ ಅಥವಾ ಸಮಸ್ಯೆಯಲ್ಲ. ಇದು ಎರಡೂವರೆ ಕೋಟಿ ಜನಸಂಖ್ಯೆಯ ಪ್ರಶ್ನೆ. ಇದೇನೂ ಮಾನ್ಯ ಶ್ರೀ ನಿಜಲಿಂಗಪ್ಪನವರ ಅಥವಾ ಶ್ರೀ ವೀರೇಂದ್ರಪಾಟೀಲ್‌ರವರ ಆಸ್ತಿಯಲ್ಲ. ಎರಡೂವರೆ ಕೋಟಿ ಜನತೆಯ ಆಸ್ತಿಯಾಗಿದೆ. ಇದರ ಪವಿತ್ರವಾದ ಜವಾಬ್ದಾರಿ ಕೇವಲ ಮಾನ್ಯ ಶ್ರೀ ವೀರೇಂದ್ರ ಪಾಟೀಲ್ ಅವರೊಬ್ಬರದಲ್ಲ, ಮಾನ್ಯ ಶ್ರೀ ಸಿದ್ದವೀರಪ್ಪನವರದೇ ಅಲ್ಲ, ಶ್ರೀ ಶಿವಪ್ಪನವರದೇ ಅಲ್ಲ. ಹುಬ್ಬಳ್ಳಿಯಲ್ಲಿ ಇದರ ಬಗ್ಗೆ ಈಗಾಗಲೇ ಯುವಜನರ ಆಕ್ರೋಶ ಎಷ್ಟರಮಟ್ಟಿಗೆ ಇದೆಯೆಂಬುದನ್ನು ಹೊರಹೊಮ್ಮಿದ್ದಾರೆ. ಅನೇಕ ಕಡೆಗಳಲ್ಲಿ ರಕ್ತ ಕೊಡುವುದಕ್ಕೆ ಸಿದ್ಧವಾಗಿದ್ದಾರೆ ಮಹಾರಾಷ್ಟ್ರದವರ ಬಗ್ಗೆ ನಾವು ಆರೋಪ ಮಾಡಿದರೆ ಅವರಿಗೆ ಎಷ್ಟು ಕೋಪವಾಗುತ್ತದೋ ಅಷ್ಟೇ ಕೋಪ ನಮ್ಮ ಮೇಲೆ ಅವರು ಆರೋಪ ಮಾಡಿದರೆ ನಮಗೂ ಆಗುತ್ತದೆಂಬುದನ್ನು ಅವರು ಅರಿಯಬೇಕು. ಆದ್ದರಿಂದ ಕೇಂದ್ರ ಸರ್ಕಾರದವರು ಈ ವಿಚಾರದಲ್ಲಿ 13 ವರ್ಷಗಳಿಂದ ಸುಮ್ಮನಿದ್ದು ಮಹಾಜನ್ ಕಮಿಷನ್ ವರದಿ ಬಂದು ಮೂರು ವರ್ಷಗಳಾದರೂ ಅದನ್ನು ಹಾಗೆಯೇ ಇಟ್ಟುಕೊಂಡು ಈ ದಿವಸ ಏಕಾಏಕಿ ಇಂತಹ ಒಂದು ಸಮಸ್ಯೆಯನ್ನು ಎತ್ತಿ ಇಡೀ ದೇಶದಲ್ಲಿ ಶಾಂತಿಯನ್ನು ಕಲಕುವಂತೆ ಮಾಡಿದ್ದಾರೆ. ಇದಕ್ಕೆ ಯಾರು ಜವಾಬ್ದಾರರು ಅಂದರೆ ಕೇಂದ್ರ ಸರ್ಕಾರದವರೇ. ಅವರನ್ನು ನಾವು ಈಗ ಆಕ್ಷೇಪಣೆ ಮಾಡಬೇಕಾಗಿದೆ. ನಮ್ಮ ಮುಖ್ಯಮಂತ್ರಿಗಳೂ ಸಹ ಇದಕ್ಕೆ ಜವಾಬ್ದಾರಿಯಾದರೆ, ಅದನ್ನು ಅವರೇ ಈಗ ವಿಚಾರ ಮಾಡಬೇಕಾಗಿದೆ. ಈಗ ಇದನ್ನು ನಾವು ಪರೀಕ್ಷೆ ಮಾಡಿ ನೋಡೋಣ. ಇವತ್ತು ಮೈಸೂರು ಮತ್ತು ಮಹಾರಾಷ್ಟ್ರದ ಗಡಿಯ ವಿಚಾರವಾಗಿ ಕೇಂದ್ರ ಸರ್ಕಾರದವರು ಒಂದು ತೀರ್ಪನ್ನು ಆತುರಾತುರವಾಗಿ ಕೊಡುವ ಸನ್ನಿವೇಶ ಬಂದಿದೆ. ಇದರ

(ಶ್ರೀ ಎಸ್. ಶಿವಪ್ಪ)

ಬಗ್ಗೆ ಒಂದು ಸಮ್ಮತವಾದ ನಿರ್ಣಯವಾಗಿ ಈ ಸಮಸ್ಯೆ ಬಗೆಹರಿದರೆ ನನಗೆ ಬಹಳ ಸಂತೋಷ. ಇವತ್ತು ಒಂದು ರಾಜ್ಯದ ಜನರ ಮನಸ್ಸನ್ನು ಕೆರಳಿಸುವ ವಿಷಯಕ್ಕೆ ಕೇಂದ್ರ ಸರ್ಕಾರ ಕೈಹಾಕುವುದು ಸರಿಯೇ ? ಈಗ ನಾನು ಎಂ. ಇ. ಎಸ್. ಅವರ ನಿಲುವು ಇದರ ಬಗ್ಗೆ ಏನಿದೆಯೆಂದು ಪ್ರಶ್ನೆ ಮಾಡುವುದಕ್ಕೆ ಹೋಗಿಲ್ಲ. ಕನ್ನಡ ರಾಜ್ಯದವರ ಗಡಿ ಸಮಸ್ಯೆಯನ್ನು ಬಗೆಹರಿಸಲು ಕೇಂದ್ರ ಸರ್ಕಾರದಿಂದ ಬಂದಿರತಕ್ಕ ವರದಿ ಈಗ ಏನಿದೆಯೋ ಅದು ನಿಜವಾಗಿದ್ದರೆ, ಆಗ ನಮ್ಮ ಕನ್ನಡ ರಾಜ್ಯಕ್ಕೆ ಅನ್ಯಾಯವಾದ ಕಾರ್ಯವನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಹವಣಿಸುತ್ತಿದ್ದಾರೆಂದು ನಾನು ಖಡಾಖಂಡಿತವಾಗಿ ಹೇಳುತ್ತೇನೆ. ಇವತ್ತು ಈ ವಿಚಾರ ಬಹಳ ದೊಡ್ಡದಾಗಿ ಬೆಳೆಯುತ್ತಿರುವುದಾಗಿದೆ. ಈ ದೇಶದಲ್ಲಿ 22 ವರ್ಷಗಳಿಂದ ರಾಜ್ಯಭಾರ ಮಾಡಿದ ಕಾಂಗ್ರೆಸ್ ಈಗ ಎರಡು ಭಾಗವಾಗಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಲ್ಲಿ ಕಾಂಗ್ರೆಸ್ಸು ಇಭ್ಭಾಗವಾಗಿ, ಇಂಡಿಕೇಟ್ ಮತ್ತು ಸಿಂಡಿಕೇಟ್ ಎಂಬುದಾಗಿ ಬೇರೆಬೇರೆಯಾಗಿರುವುದರಿಂದ, ಈ ವಿಚಾರ ಇಷ್ಟರಮಟ್ಟಿಗೆ ಉಲ್ಬಣವಾಗಿದೆ. ಮೈಸೂರು-ಮಹಾರಾಷ್ಟ್ರ, ಮೈಸೂರು-ಕೇರಳ-ಈ ಎರಡು ಗಡಿಗಳ ವಿಚಾರವಾಗಿ ಮಹಾಜನ್ ಕಮಿಷನ್ ಅವರು ಒಂದು ವರದಿಯನ್ನು ಕೊಟ್ಟು ಕೇರಳದಿಂದ ಕಾಸರಗೋಡು ನಮಗೆ ಬರಬೇಕು, ಮೈಸೂರಿಗೆ ಮಹಾರಾಷ್ಟ್ರದಿಂದ ಭಾಗಗಳು ಹೋಗಬೇಕೆಂದು ಹೇಳಿದರೂ ಕೂಡ ಕೇಂದ್ರ ಸರ್ಕಾರದವರು ಈಗ ಕೇರಳ ಸಮಸ್ಯೆಯನ್ನು ಬಿಟ್ಟು ಕೇವಲ ಮೈಸೂರು-ಮಹಾರಾಷ್ಟ್ರಕ್ಕೆ ಮಾತ್ರ ಸಂಬಂಧಪಟ್ಟ ಪ್ರಶ್ನೆಯನ್ನು ಇತ್ಯರ್ಥ ಮಾಡುತ್ತೇವೆಂದು ಹೊರಟಿರುವುದು ನೋಡಿದರೆ ಇದರ ಹಿನ್ನೆಲೆ ಏನೆಂಬುದನ್ನು ಇವತ್ತು ನಾವು ಪ್ರಶ್ನೆ ಮಾಡಬೇಕಾಗಿದೆ. ಇವತ್ತಿನ ದಿವಸದವರೆಗೂ ಈ ಒಂದು ಪ್ರಶ್ನೆ ಇತ್ಯರ್ಥವಾಗದೇ ಕೇವಲ ಮೂರು ದಿವಸಗಳಿಂದ ಕೇಂದ್ರ ಸರ್ಕಾರದವರು ಕಾರ್ಯೋನ್ಮುಖರಾಗಿರುವುದಕ್ಕೆ ಕಾರಣವೇನು ? ಹಿಂದೆ ಮುಖ್ಯ ಮಂತ್ರಿಗಳಾಗಿದ್ದಂಥ ಮಾನ್ಯ ಶ್ರೀ ನಿಜಲಿಂಗಪ್ಪನವರ ಹೊಣೆಗಾರಿಕೆಯೂ ಇದರಮೇಲೆ ಇದೆ. ಇದರಲ್ಲಿ ಅವರ ಜವಾಬ್ದಾರಿಯೂ ಇದೆ. ಏಕೆಂದರೆ ಈ ದೇಶದ ಸಮಸ್ಯೆಗಳನ್ನು ಅವರು ಬಹಳ ಚೆನ್ನಾಗಿ ತಿಳಿದಿದ್ದಾರೆ. ಮಹಾಜನ್ ಕಮಿಷನ್ ಏರ್ಪಾಡು ಆದಾಗ್ಗೆ ಅವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾಗಿದ್ದರು. ಅವರ ವರದಿಯನ್ನು ಕೂಡಲೇ ಕಾರ್ಯರೂಪಕ್ಕೆ ತರಬೇಕೆಂದು ಹೇಳಿದ್ದ ಮಾನ್ಯ ಶ್ರೀ ನಿಜಲಿಂಗಪ್ಪನವರು ಆಗ ಆ ವರ್ಕಿಂಗ್ ಕಮಿಟಿಯಲ್ಲಿ ಸುಮಾರು 2 ವರ್ಷಗಳ ಕಾಲವಿದ್ದು ಅಲ್ಲಿ ಇವರ ಬಗ್ಗೆ ಆಗಿದ್ದ ತೀರ್ಮಾನದ ಪ್ರಕಾರ ಈ ಗಡಿ ಪ್ರಶ್ನೆಯನ್ನು ಕೂಡಲೇ ಜಾರಿಗೆ ತರಬೇಕೆಂದು ಮೊದಲೇ ಪ್ರಯತ್ನ ಮಾಡಬಹುದಾಗಿತ್ತು. ಆದರೆ ಆ ಒಂದು ಕಾರ್ಯದಲ್ಲಿ ಅವರು ವಿಫಲರಾಗಿದ್ದಾರೆಂಬ ಮಾತನ್ನು ನಾನು ಒತ್ತಿ ಹೇಳುತ್ತಿದ್ದೇನೆ. ಆದ್ದರಿಂದ ಇವತ್ತು ಈ ವಿಚಾರದಲ್ಲಿ ಮಾನ್ಯ ಶ್ರೀ ನಿಜಲಿಂಗಪ್ಪನವರಿಂದ ತಪ್ಪು ಆಗಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅವರಿಗೆ ಕೇಂದ್ರ ಸರ್ಕಾರವನ್ನು ಈ ಪ್ರಶ್ನೆಯ ಬಗ್ಗೆ ಒಪ್ಪಿಸುವಂಥ ಸಾಮರ್ಥ್ಯ ಇಲ್ಲದೇ ಇರಬಹುದು. ಆದ್ದರಿಂದ ಅವರ ಪ್ರಯತ್ನ ಫಲಿಸಲಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಮೊಟ್ಟ ಮೊದಲನೆಯದಾಗಿ ಮಾನ್ಯ ಶ್ರೀ ನಿಜಲಿಂಗಪ್ಪನವರು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದಾಗ್ಗೆ ಒಂದು ಸಣ್ಣ ಮಾತಿಗಾಗಿ ಶ್ರೀಮತಿ ಇಂದಿರಾಗಾಂಧಿಯವರನ್ನು ಕಾಂಗ್ರೆಸ್ಸಿನಿಂದ ತೆಗೆದಿದ್ದೇವೆಂದು ಹೇಳುವ ಶಕ್ತಿ ಇದೆ ; ಪ್ರಧಾನ ಮಂತ್ರಿಗಳಮೇಲೆ ಶಿಸ್ತು ಕ್ರಮವನ್ನು ತೆಗೆದುಕೊಳ್ಳುವ ಧೈರ್ಯ ಇದೆ. ಆದರೆ, ಈ ಮಹಾಜನ ವರದಿಯನ್ನು ಕಾರ್ಯಗತ ಮಾಡುವ ವಿಷಯದಲ್ಲಿ ಅವರಿಗೆ ಧೈರ್ಯ ಮತ್ತು ಶಕ್ತಿ ಇರಲಿಲ್ಲವೇ ? ಇದರ ಬಗ್ಗೆ ಮಾನ್ಯ ಶ್ರೀ ವೀರೇಂದ್ರ ಪಾಟೀಲರು ಒಂದು ವೀರವಾಣಿಯಂತೆ, ಹೇಳಿಕೆ ಕೊಟ್ಟಿದ್ದು ಒಂದು ಪ್ರಚೋದನೆಯಾಗಲಿಲ್ಲವೇ ?

ಶ್ರೀ ಎಸ್. ಶಿವಪ್ಪ.—ಮಾನ್ಯ ಶ್ರೀ ನಿಜಲಿಂಗಪ್ಪನವರು ಶ್ರೀಮತಿ ಇಂದಿರಾಗಾಂಧಿಯವರನ್ನು ಕಾಂಗ್ರೆಸ್ಸಿನಿಂದ ತೆಗೆಯುವುದಕ್ಕೆ ಅವರಿಗೇ ಧೈರ್ಯ ಬಂತೋ ಅಥವಾ ಬೇರೆಯವರು ಆ ಒಂದು ಧೈರ್ಯ ಕೊಟ್ಟರೋ, ಏನೂ ಗೊತ್ತಾಗಲಿಲ್ಲ. ಆದರೆ ಮಹಾಜನ್ ಕಮಿಷನ್ ವರದಿ ಬಗ್ಗೆ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಹೇಳುವಂಥ ಧೈರ್ಯ ಅವರಿಗೆ ಇರಲಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಈವೊತ್ತು ನಿಜಲಿಂಗಪ್ಪನವರು ಮಾಡಿದಂಥ ತಪ್ಪಿನಿಂದಾಗಲಿ, ವೀರೇಂದ್ರಪಾಟೀಲರು ಬೆಳಗಾಂಗೆ ಹೋದಾಗ ನಮ್ಮ ರಾಜ್ಯದ ಕನ್ನಡ ಭಾಗದ ವಿಚಾರವಾಗಿ ದೊಡ್ಡ ಭಾಷಣ ಮಾಡಿದ್ದರಿಂದಾಗಲೀ ಕೇಂದ್ರ ಸರಕಾರದವರು ಕೆರಳಿ ಈ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ಎಂದು ಹೇಳತಕ್ಕ ವಾದವನ್ನು ನಾನು ಒಪ್ಪುವುದಿಲ್ಲ. ಇಂದಿರಾಗಾಂಧಿಯವರು ಅಷ್ಟು ಕೆಳಮಟ್ಟಕ್ಕೆ

ಇಳಿಯುವುದಕ್ಕೆ ತಯಾರು ಇಲ್ಲ ಎಂದು ತಿಳಿದುಕೊಂಡಿದ್ದೇನೆ. ಭಾಷಣ ಮಾಡಿದ ಮಾತ್ರಕ್ಕೆ ರಾಷ್ಟ್ರದ ಪ್ರಧಾನಿ ಆಗಿರತಕ್ಕವರು ಇಂತಹ ವಿಚಾರ ಮಾಡಿದ್ದಾರೆ ಎಂದು ಹೇಳುವುದಾದರೆ ಅವರ ಸ್ಥಾನಕ್ಕೆ ಮರ್ಯಾದೆ ಬರುವುದಿಲ್ಲ. ಕನ್ನಡ ರಾಜ್ಯ ವೀರೇಂದ್ರ ಪಾಟೀಲರ ಆಸ್ತಿ ಅಲ್ಲ. ಅದು ಎರಡೂವರೆ ಕೋಟಿ ಕನ್ನಡ ದೇಶದ ಜನರ ಆಸ್ತಿ. ಆದರೆ ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು ಎನ್ನುವಹಾಗೆ ಎರಡು ಕಾಂಗ್ರೆಸ್‌ನ ಜಗಳದಿಂದ ಮೈಸೂರಿನ ಸಮಸ್ಯೆ ಹದ ಗೆಟ್ಟಿದೆ ಎಂದು ಒಪ್ಪಿಕೊಳ್ಳಬೇಕಾಗಿದೆ. ಇಂಡಿಕೇಟು ಮತ್ತು ಸಿಂಡಿಕೇಟು ಎಂದು ನಮ್ಮ ರಾಜ್ಯಕ್ಕೆ ತೊಂದರೆ ಆದರೆ ಅದಕ್ಕೆ ಎರಡು ಕಾಂಗ್ರೆಸ್ಸಿನವರು ಈ ದೇಶದ ಜನಗಳ ಶಾಪಕ್ಕೆ ಗುರಿ ಯಾಗುತ್ತಾರೆಂದು ಹೇಳುತ್ತೇನೆ. ಇವೊತ್ತು ಚಂಡೀಗಡವನ್ನು ತೆಗೆದುಕೊಳ್ಳಿ, ಫತೇ ಸಿಂಗರು ಉಪವಾಸಮಾಡಿದುದರಿಂದ ಅದಕ್ಕೆ ಕೇಂದ್ರ ಸರಕಾರದವರು ಮಣಿದು ಚಂಡೀಗಡವನ್ನು ಪಂಜಾಬಿಗೆ ಕೊಟ್ಟರು. ಆ ರೀತಿಯ ವ್ಯಕ್ತಿಗಳನ್ನು ಪಂಜಾಬು ಹೊಂದಿದೆ ಮದರಾಸಿನಲ್ಲಿ ಅಣ್ಣಾದೊರೆ ಹುಟ್ಟಿ ಡಿ. ಎಂ. ಕೆ. ಸರಕಾರ ಬಂದು ಕೇಂದ್ರ ಸರಕಾರವನ್ನು ನಡುಗಿಸಿದರು. ಅದೇ ರೀತಿ ಮೈಸೂರಿನಲ್ಲಿ ಯಾರು ಇದ್ದಾರೆ? ಅಂತಹ ವ್ಯಕ್ತಿ ಬೇಕಾಗಿದೆ. ಈವೊತ್ತಿನ ದಿವಸ ಚಂಡೀಗಡ ವಿಚಾರದಲ್ಲಿ ಯಾವುದೋ ಒಂದು ಒತ್ತಾಯಕ್ಕೆ ಒಳಗಾಗಿ ಕೇಂದ್ರ ಸರಕಾರದವರು ತೀರ್ಮಾನ ತೆಗೆದುಕೊಂಡಿದ್ದಾರೆ. ಆ ರೀತಿ ಒತ್ತಾಯ ಮಾಡಿ, ಅಂತಹ ತೀರ್ಮಾನವನ್ನು ತೆಗೆದುಕೊಳ್ಳು ವಂತೆ ಮಾಡುವ ಶಕ್ತಿ ಕನ್ನಡ ರಾಜ್ಯದಲ್ಲಿ ಹುಟ್ಟಬೇಕು. ಕನ್ನಡ ರಾಜ್ಯದ ಮಕ್ಕಳು ಅಂತಹ ಕೆಲಸವನ್ನು ಮಾಡುವುದಕ್ಕೆ ತಯಾರು ಆಗಿದ್ದಾರೆ. ಶಾಸನ ಸಭಾಸದಸ್ಯರು ಮಾಡದೆ ಹೋದರೆ ಕನ್ನಡದ ಜನ ತಾವೇ ನಿಂತು ಈ ಕೆಲಸ ಮಾಡುತ್ತಾರೆ ಎಂದು ನಾನಾದರೂ ಕೂಡ ಹೇಳುತ್ತೇನೆ. ಅದರಲ್ಲಿ ರಾಜಕೀಯ ಪ್ರಶ್ನೆ ಇಲ್ಲ. ನಾನು ಮೊದಲು ಹೇಳಿದಹಾಗೆ ಇದು ಎರಡೂವರೆ ಕೋಟಿ ಜನತೆಯ ಪ್ರಶ್ನೆ ಆಗಿದೆ. ಈ ವಿಚಾರದಲ್ಲಿ ಕನ್ನಡ ಜನತೆ ಒಗ್ಗಟ್ಟಾಗಿದ್ದಾರೆ ಎನ್ನುವುದನ್ನು ತೋರಿಸತಕ್ಕದ್ದು ಎರಡೂವರೆ ಕೋಟಿ ಜನಗಳ ಪ್ರತಿನಿಧಿಗಳಾದ ನಮ್ಮ ಕರ್ತವ್ಯ ಎಂದು ನಾನು ಹೇಳುತ್ತೇನೆ. ಈ ಎರಡು ಕಾಂಗ್ರೆಸ್ಸಿನವರು ನಮ್ಮ ರಾಜ್ಯಕ್ಕೆ ಇವೊತ್ತಿನ ದಿವಸ ಬಹಳ ಅಪಾಯ ಮಾಡತಕ್ಕ ರೀತಿಯಲ್ಲಿ ವರ್ತನೆ ಮಾಡುತ್ತಿದ್ದಾರೆ ಎಂದು ಹೇಳುತ್ತೇನೆ. ಆ ತಪ್ಪನ್ನು ಸರಿ ಮಾಡ ಬೇಕಾದರೆ ಈ ಶಾಸನಸಭೆಯು ಧೀರೋದಾತ್ತವಾದ ನಿಲುವನ್ನು ತೆಗೆದುಕೊಂಡು ಕೇಂದ್ರ ಸರಕಾರದವರಿಗೆ ಹೇಳಬೇಕಾಗಿದೆ. "ನೀವು ಆತುರಾತುರವಾಗಿ ಈ ವಿಷಯದಲ್ಲಿ ಇತ್ಯರ್ಥ ಮಾಡತಕ್ಕಂಥ ಕಾರ್ಯಕ್ಕೆ ಕೈಹಾಕಿದರೆ ಕರ್ಣಾಟಕಕ್ಕೆ ಅನ್ಯಾಯ ಮಾಡಿದಹಾಗಾಗುತ್ತದೆ, ಕನ್ನಡ ತಾಯಿಗೆ ಅನ್ಯಾಯಮಾಡಿದ ಹಾಗಾಗುತ್ತದೆ" ಎಂದು. ನಮ್ಮ ಕನ್ನಡ ರಾಜ್ಯದ ಶಕ್ತಿಯನ್ನು ಕೇಂದ್ರಸರಕಾರಕ್ಕೆ ತೋರಿಸಬೇಕಾಗಿದೆ. ಈ ಶಾಸನಸಭೆಯವರು ತೀವ್ರವಾಗಿ ನಿರ್ಣಯಮಾಡಿ ನಮ್ಮಲ್ಲಿ ಏನು ಆಕ್ರೋಶ ಇದೆ ಅದನ್ನು ತೋರಿಸಬೇಕಾದುದ್ದು ಈ ಶಾಸನ ಸಭೆಯ ಪವಿತ್ರ ಜವಾಬ್ದಾರಿ. ಈಗ ಇದಕ್ಕೆ ಸಂಬಂಧಪಟ್ಟಂತೆ ನಾಲ್ಕೈದು ನಿರ್ಣಯಗಳು ಇವೆ. ಮಾನ್ಯ ಮಿತ್ರರಾದ ಸಿದ್ಧವೀರಪ್ಪನವರು ಕೂಡ ಕನ್ನಡ ರಾಜ್ಯದ ಹಿತವನ್ನು ರಕ್ಷಣೆ ಮಾಡುವ ವಿಚಾರದಲ್ಲಿ ಹಿಂದು ಮುಂದು ನೋಡುವುದಿಲ್ಲ ಸಹಕಾರ ಕೊಡುತ್ತೇವೆ ಎಂದು ಹೇಳಿದ್ದಾರೆ. ಇವೊತ್ತು ಅವರ ಮನಸ್ಸಿನೊಳಗೆ ಏನು ಇದೆ ಅದು ಆಗಬೇಕಾಗಿದ್ದರೆ ಈ ನಿರ್ಣಯಕ್ಕೆ ಬೆಂಬಲ ಕೊಡಬೇಕು. ಕನ್ನಡ ಜನತೆಯ ಪರವಾಗಿ ನಾವು ವಾದ ಮಾಡಬೇಕಾಗಿದೆ. ನಾವು ಚರ್ಚೆ ಏನು ಮಾಡುತ್ತಾ ಇದ್ದೇವೆ ಅದರ ಪರಿಣಾಮ ಮತ್ತು ಪ್ರಭಾವ ಜನತೆಯಮೇಲೆ ಬೀಳುತ್ತದೆ ಎಂದು ಯೋಚನೆ ಮಾಡ ಬೇಕಾಗಿದೆ. ಈ ಶಾಸನ ಸಭೆಯಲ್ಲಿ ನಾವು ಏನು ಚರ್ಚೆ ಮಾಡುತ್ತೇವೆ ಎನ್ನುವುದನ್ನು ನಮ್ಮ ಜನತೆ ನೋಡುತ್ತಿದೆ. ನಮ್ಮ ರಾಜ್ಯದ ಒಂದು ಭಾಗವನ್ನು ಕೇಂದ್ರಸರಕಾರದವರು ಬೇರೆ ರಾಜ್ಯಕ್ಕೆ ಕೊಡುತ್ತಿರುವ ಕಾಲದಲ್ಲಿ ಈ ಶಾಸನ ಸಭೆ ಏನು ಮಾಡುತ್ತಿದೆ, ನಮ್ಮ ಪ್ರತಿನಿಧಿಗಳು ಏನು ಮಾಡುತ್ತಿದ್ದಾರೆ, ಎಂದು ನಮ್ಮ ಜನ ನೋಡುತ್ತಾ ಇದ್ದಾರೆ. ನಾವು ಮಾಡುವ ಕಾರ್ಯ ವನ್ನು ಅವರು ತೂಕ ಮಾಡುತ್ತಿದ್ದಾರೆ. ನಾವು ಎಲ್ಲರೂ ಕೂಡ ಒಗ್ಗಟ್ಟಾಗಿ ಇದ್ದೇವೆ ಎಂದು ತೋರಿಸಬೇಕಾದದ್ದು ಶಾಸನ ಸಭೆಯ ಪ್ರತಿನಿಧಿಗಳ ಎಲ್ಲರ ಕರ್ತವ್ಯ. 1967 ನೇ ಇಸವಿಯಲ್ಲಿ ಈ ಶಾಸನ ಸಭೆ ಈ ವಿಷಯದಲ್ಲಿ ಒಂದು ನಿರ್ಣಯ ಮಾಡಿ ಮಹಾಜನ ಸಮಿತಿ ರಿಪೋರ್ಟನ್ನು ಕಡ್ಡಾಯವಾಗಿ ಆಚರಣೆಗೆ ತರಬೇಕು ಎಂದು ಕೇಂದ್ರ ಸರಕಾರಕ್ಕೆ ಕಳುಹಿಸಿಕೊಟ್ಟಿದೆ. ನಾವೆ ಲ್ಲರೂ ಕೂಡ ಆ ನಿರ್ಣಯಕ್ಕೆ ಭಾಗಿಗಳಾಗಿದ್ದೇವೆ. ಆ ಒಂದು ಜವಾಬ್ದಾರಿಯಿಂದ ನಾವು ತಪ್ಪಿಸಿ ಕೊಳ್ಳುವುದಕ್ಕೆ ಆಗುವುದಿಲ್ಲ. ಆ ಒಂದು ದೃಷ್ಟಿಯಿಂದ ಹಿಂದೆ ಮಾಡಿದಂಥ ನಿರ್ಣಯವನ್ನು ಕೇಂದ್ರ ಸರಕಾರವೇ ಆಗಲಿ, ಯಾರೇ ಆಗಲಿ, ಬದಲಾಯಿಸುವುದಕ್ಕೆ ಪ್ರಯತ್ನ ಮಾಡಿದರೆ ಕೇಂದ್ರಸರಕಾರಕ್ಕೆ ಆ ಪ್ರಯತ್ನ ಮಾಡಬೇಡಿ ಎಂದು ಹೇಳುವುದು ಈ ಶಾಸನ ಸಭೆಯ ಕರ್ತವ್ಯ. ಅವರಿಗೆ ನಮ್ಮ ನಿಲುವು ಏನು ಎನ್ನುವ ಬಗ್ಗೆ ನಿರ್ಣಯ ಮಾಡಿ ಕಳುಹಿಸುವುದರಿಂದ ಮಹತ್ತರ ಉಪಕಾರ ವಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಎಲ್ಲರೂ ತಂದಿರತಕ್ಕ ನಿರ್ಣಯಗಳು ಸಹಾ ಮೈಸೂರಿನ ಬೌಂಡರಿ ಬಗ್ಗೆ ರಕ್ಷಣೆ ಮಾಡಬೇಕೆಂದಿದೆ. ಈ ನಿರ್ಣಯವನ್ನು ಪಾಸುಮಾಡಿ ವೀರೇಂದ್ರಪಾಟೀಲರ ಕೈಯಲ್ಲಿ ಕೊಟ್ಟರೆ, ನಮ್ಮ ಠರಾವನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಅವರು ಅಸಮರ್ಥರು ಆಗಿರುವುದರಿಂದ ಅನಿವಾರ್ಯವಾಗಿ ಅದನ್ನು ಪುನರುಚ್ಚಾರ ಮಾಡಿದರೆ ಅದರಿಂದ ದೇಶಕ್ಕೆ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಎಸ್. ಆರ್. ಸಿ. ಅಕ್ಟನ್ನು ಬಲಪಡಿಸುವಂಥ ನಿರ್ಣಯ ಮಾಡುವುದು ಒಳ್ಳೆಯದು.

ಶ್ರೀ ಬಿ. ಭಾಸ್ಕರಶೆಟ್ಟಿ.—ಎಸ್. ಆರ್. ಸಿ. ರಿಪೋರ್ಟ್ ಪ್ರಕಾರ ಕಾಸರಗೋಡಿಗೆ ಅನ್ಯಾಯವಾಗುತ್ತದೆ.

ಶ್ರೀ ಎಸ್. ಶಿವಪ್ಪ.– ಈಗ ನಮ್ಮ ಮುಂದಿರುವುದು ವೀರೇಂದ್ರಪಾಟೀಲರ ಪ್ರಶ್ನೆ ಅಲ್ಲ. ಈ ರಾಜ್ಯದ ಪ್ರಶ್ನೆ: ವೀರೇಂದ್ರಪಾಟೀಲರು ಸಮರ್ಥರೋ, ಅಸಮರ್ಥರೋ ಎನ್ನುವ ವಿಚಾರ ಕುರಿತು ನಾವು ಈಗ ಮಾತನಾಡಬಾರದು. ಈವೊತ್ತಿನ ದಿವಸ ವೀರೇಂದ್ರಪಾಟೀಲರು ಈ ಶಾಸನ ಸಭೆಯ ಮತ್ತು ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಅಸಮರ್ಥರಾದರೆ ಅವರನ್ನು ಅಧಿಕಾರದಿಂದ ಕಿತ್ತುಹಾಕೋಣ. ವೀರೇಂದ್ರಪಾಟೀಲರು ನಿಜಲಿಂಗಪ್ಪನವರು ಏನು ಮಾಡಿದ್ದಾರೆ ಎನ್ನುವುದು ಮುಖ್ಯವಲ್ಲ. ಇವೊತ್ತು ನಾವು ದೇಶದ ಪ್ರತಿನಿಧಿಗಳು ಏನು ಮಾಡಬೇಕು ಎನ್ನುವುದು ಮುಖ್ಯ ವಿಚಾರ. ಈ ದೇಶಕ್ಕೆ ಒದಗಿರತಕ್ಕ ಗಂಡಾಂತರದಿಂದ ಕನ್ನಡ ಜನ ಒಗ್ಗಟ್ಟಾಗಿದ್ದಾರೆ ಎನ್ನುವುದನ್ನು ಈ ಶಾಸನ ಸಭೆ ನಿರ್ಣಯ ಮಾಡುವ ಮುಖಾಂತರ ಕೇಂದ್ರ ಸರಕಾರಕ್ಕೆ ನಾವು ತೋರಿಸಬೇಕು. ನಾನು ಈ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಶಾಸನ ಸಭೆ ಅದಕ್ಕೆ ಒಪ್ಪಿಗೆ ಕೊಟ್ಟು ನಮ್ಮ ಮೈಸೂರು ದೇಶದ ಜನ ಕನ್ನಡ ರಾಜ್ಯದ ಹಿತ ರಕ್ಷಣೆ ಮಾಡುವುದರಲ್ಲಿ ಎಲ್ಲರೂ ಒಗ್ಗಟ್ಟಾಗಿದ್ದಾರೆ ಎನ್ನುವ ನಿಲುವನ್ನು ತೋರಿಸುವುದಕ್ಕೆ ಈ ನಿರ್ಣಯಕ್ಕೆ ಒಪ್ಪಿಗೆ ಕೊಡುವುದು ಒಂದೇ ದಾರಿ. ಈ ನಿರ್ಣಯವನ್ನು ಎಲ್ಲರೂ ಕೂಡ ಒಪ್ಪಿದರೆ ದೇಶಕ್ಕೆ ಒಂದು ಉಪಕಾರ ಮಾಡಿದಂತಾಗುತ್ತದೆ. ಕನ್ನಡ ಜನರಿಗೆ ಕನ್ನಡ ಮಾತೆಗೆ ಸೇವೆ ಸಲ್ಲಿಸಿದಂತಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಆರ್. ಬೊಮ್ಮಾಯಿ (ಕುಂದಗೋಳ್).—ಮಾನ್ಯ ಅಧ್ಯಕ್ಷರೇ, ಈಗಾಗಲೇ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಮತ್ತು ಶ್ರೀಮಾನ್ ಗೋಪಾಲ ಗೌಡರು ಪಟ್ಟ ಅಭಿಪ್ರಾಯಕ್ಕೆ ಬೆಂಬಲ ಕೊಟ್ಟು ಕೆಲವು ಮಾತುಗಳನ್ನು ಹೇಳುತ್ತೇನೆ. ನಾನು ಮಾತನಾಡುವ ಮೊದಲು ನಮ್ಮ ನೆಚ್ಚಿನ ಪ್ರಧಾನಮಂತ್ರಿಯಾಗಿದ್ದ ದಿವಂಗತ ಜವಾಹರಲಾಲ್ ನೆಹರೂರವರು ಪಾರ್ಲಿಮೆಂಟಿನಲ್ಲಿ ಆಡಿದ ಒಂದು ನುಡಿಯನ್ನು ಇಲ್ಲಿ ಹೇಳಬಯಸುತ್ತೇನೆ.

> "If the frontiers of nations become relatively less important than they were, and if in the course of a few years, they may also be ignored, how much less important are these problems of State Boundaries which we are considering.........I do not suppose that the most ideal solutions, whatever they might have been, could possibly have been pleasing to everybody. ....But I wish this House to realise this, and first of all to look at this picture in proper perspective lest we forget that perspective and get lost in the passions of the moment. Secondly to realise that howsoever important these questions of borders might be, they are, after all administrative divisions inside the country."

ಈ ನುಡಿಯನ್ನು ಕೇಳಿಕೊಂಡು ನಾವು ಈ ವಿಷಯವನ್ನು ಚರ್ಚೆ ಮಾಡಬೇಕಾಗಿದೆ. ಭಾರತ ದೇಶವು ಸ್ವತಂತ್ರವಾದಮೇಲೆ ಭಾಷಾವಾರು ರಾಜ್ಯಗಳ ಬೇಡಿಕೆ ಬಂದಾಗ ಈ ದೇಶದ ಅನೇಕ ನಾಯಕರು ಈ ದೇಶವನ್ನು ಭಾಷೆಯ ಆಧಾರದಮೇಲೆ ವಿಂಗಡಣೆ ಮಾಡುತ್ತೀರಾ, ಆ ರೀತಿ ವಿಂಗಡಣೆ ಮಾಡುವುದರಿಂದ ದೇಶದ ಒಕ್ಕೂಟಕ್ಕೆ ಅಘಾತವುಂಟಾಗಬಹುದು ; ಅಥವಾ ಆ ರೀತಿ ವಿಭಾಗ ಮಾಡುವುದರಿಂದ ಜನರ ಕಲ್ಯಾಣವಾಗಬಹುದೇ ಎಂಬ ಸಂಶಯವನ್ನು ಅನೇಕರು ವ್ಯಕ್ತಪಡಿಸಿದ್ದಾರೆ. ಆದರೂ ದೇಶದ ಜನಾಂಗದ ಏಳಿಗೆಗಾಗಿ ಸರ್ಕಾರದ ಕಲಾಪಗಳು ಆಯಾ ಭಾಷೆಯಲ್ಲಿ ನಡೆಯಬೇಕೆನ್ನುವ ದೃಷ್ಟಿಯಿಂದ ಕೇಂದ್ರಸರ್ಕಾರದವರು ಇದಕ್ಕೆ ಸಂಬಂಧಪಟ್ಟ ಒಂದು

ನಿರ್ಣಯವನ್ನು ಪಾರ್ಲಿಮೆಂಟಿನಲ್ಲಿ 1956ನೇ ಇಸವಿಯಲ್ಲಿ ಮಾಡಿದ್ದಾರೆ. ಅದರಿಂದ ಅನೇಕ ಕಡೆಗಳಲ್ಲಿ ಅನೇಕ ರೀತಿಯ ಗೊಂದಲಗಳು ಉಂಟಾದರೂ, ಸಾಮಾನ್ಯ ಜನರ ಹಿತದೃಷ್ಟಿಯಿಂದ ಎಲ್ಲರೂ ಎಸ್.ಆರ್.ಸಿ. ವರದಿಯ ಪ್ರಕಾರ ನಡೆಕೊಳ್ಳುವ ನಿರ್ಣಯವನ್ನು ಒಪ್ಪಿಕೊಂಡರು. ಮಹಾರಾಷ್ಟ್ರ ಮತ್ತು ಮೈಸೂರು ಗಡಿಯ ವಾದವನ್ನು ಹೇಳುವುದಾದರೆ, ಮೊಟ್ಟಮೊದಲನೆಯದಾಗಿ, ಪಾರ್ಲಿಮೆಂಟಿನಲ್ಲಿ ಬಂದಾಗ ಅನೇಕ ತಿದ್ದುಪಡಿಗಳನ್ನು ಮಹಾರಾಷ್ಟ್ರದ ಸದಸ್ಯರು ಮುಂದೆ ಮಾಡಿದರು ಮತ್ತು ಈಗ ಮಾಡತಕ್ಕ ವಾದವನ್ನು ಪಾರ್ಲಿಮೆಂಟಿನಲ್ಲಿ ಆಗ ಕೂಡ ಹೇಳಿದ್ದರು. ಆದರೂ ಪಾರ್ಲಿಮೆಂಟ್‌ನಲ್ಲಿ ಸದಸ್ಯರು ತಮ್ಮ ವಿವೇಕ ಬುದ್ಧಿಯನ್ನು ಉಪಯೋಗಿಸಿಕೊಂಡು ಎಸ್.ಆರ್.ಸಿ. ವರದಿಯನ್ನು ಒಪ್ಪಿಕೊಂಡಿದ್ದಾರೆ; ಮಹಾರಾಷ್ಟ್ರದ ವಾದವನ್ನು ತಿರಸ್ಕರಿಸಿದ್ದಾರೆ. ಈ ರೀತಿ ಕಾಯಿದೆ ಬಂದಮೇಲೆ ಮಹಾರಾಷ್ಟ್ರದಲ್ಲೂ ಚಳವಳಿ ನಡೆಯಿತು. ಆ ಕಾಲಕ್ಕೆ ಮಹಾರಾಷ್ಟ್ರದವರು ಕೇಂದ್ರ ಸರ್ಕಾರಕ್ಕೆ ಒಂದು ಮನವಿಯನ್ನು ಅರ್ಪಿಸಿದರು. ಮುಂದೆ ಮಹಾರಾಷ್ಟ್ರದ ಮುಖ್ಯಮಂತ್ರಿಯವರು ಮತ್ತು ಮೈಸೂರು ರಾಜ್ಯದ ಮುಖ್ಯಮಂತ್ರಿಯವರು ಅನೇಕ ಸಲ ಸೇರಿ ಚರ್ಚೆ ಮಾಡಿದರೂ ಈ ಪ್ರಶ್ನೆ ಬಗೆಹರಿಯಲಿಲ್ಲ. ಅವರು ಆ ಕಾಲಕ್ಕೆ ನಾಲ್ಕು ಜನರ ಒಂದು ಕಮಿಶನ್ ನೇಮಕ ಮಾಡುವುದಕ್ಕೆ ಒಪ್ಪಿಕೊಂಡರು. ನಮ್ಮ ರಾಜ್ಯದ ಹಿರಿಯ ಸದಸ್ಯರಾದ ಚನ್ನಯ್ಯನವರು, ಮಳಿಮಠ್‌ರವರು ಮತ್ತು ಬೊಂಬಾಯಿಯ ಪಾಠಸ್ಕರ್ ಮತ್ತು ಎಂ.ಡಿ. ಭಟ್ ಇವರನ್ನು ಒಳಗೊಂಡ ಒಂದು ಸಮಿತಿಯನ್ನು ಮಾಡಿದರು ಆ ಸಮಿತಿಯ ಒಂದು ಸಾಮಾನ್ಯ ನಿರ್ಣಯಕ್ಕೆ ಬರಲು ಪ್ರಯತ್ನ ಮಾಡಿದರೂ ಆಗದೆ ಹೋಯಿತು. ನಂತರ ಮುಖ್ಯಮಂತ್ರಿಗಳಿಗೂ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಆಗಲಿಲ್ಲ. ಮತ್ತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಮಹಾರಾಷ್ಟ್ರದವರ ಒತ್ತಾಯಕ್ಕೆ ಮಣಿದು ಒಂದು ನಿರ್ಣಯವನ್ನು ತಂದು, ಅದರ ಪ್ರಕಾರ ಈ ಮಹಾಜನ್ ಕಮಿಶನ್ ನೇಮಕವಾಯಿತು. ಇದರ ಬಗ್ಗೆಯೂ ಕೇಂದ್ರದವರು ಈ ಧೋರಣೆ ತಾಳಿದುದಕ್ಕೆ ಕನ್ನಡ ನಾಡಿನ ಜನರು ಚಳವಳಿ ಮಾಡಿದ್ದರು. ಆದರೂ ಏನೋ ನಮ್ಮ ನಮ್ಮ ನಡುವೆ ಇರುವ ಸಣ್ಣ ಸಮಸ್ಯೆಯನ್ನು ರಾಷ್ಟ್ರದ ಹಿತದೃಷ್ಟಿಯಿಂದ ಬಗೆಹರಿಸುವುದಕ್ಕೋಸ್ಕರ ಈ ಏಕ ಸದಸ್ಯ ಆಯೋಗವನ್ನು ಒಪ್ಪಿಕೊಂಡೆವು. ಮುಂದೆ ತಮ್ಮ ತಮ್ಮ ಸಾಕ್ಷಿಗಳನ್ನು ಪುರಾವೆಗಳನ್ನು ಎರಡೂ ಪಕ್ಷದವರೂ ಮಂಡಿಸಿದರು. ಮಹಾಜನ್‌ರವರು ಎಲ್ಲಾ ಸಮಸ್ಯೆಗಳನ್ನೂ ಪರಾಮರ್ಶಿಸಿ ಒಂದು ನಿರ್ಣಯವನ್ನು ಕೊಟ್ಟರು. ಗೋಪಾಲಗೌಡರು ಹೇಳಿದಂತೆ ಮಹಾಜನ ಕಮಿಶನ್ ವರದಿಯ ಪ್ರಕಾರ ನಿಪ್ಪಾಣಿ ಮುಂತಾದ ಪ್ರದೇಶ ಮಹಾರಾಷ್ಟ್ರಕ್ಕೆ ಹೋಗುತ್ತದೆ. ಅಂಥ ಅನ್ಯಾಯವಾಗಿದ್ದರೂ ಈ ಗಡಿಯ ಸಮಸ್ಯೆ ಕೊನೆಗೊಳ್ಳಲಿ ಎಂದು ಒಪ್ಪಿಕೊಂಡಿದ್ದೇವೆ. ಈ ಬಗ್ಗೆ ಕೆಲವು ವಿಷಯಗಳನ್ನು ಹೇಳುತ್ತೇನೆ. ಮಹಾಜನ್ ಕಮಿಶನ್ ರಿಪೋರ್ಟ್ ಹೊರ ಬೀಳುವುದಕ್ಕೆ ಮೊದಲು ಮಹಾರಾಷ್ಟ್ರದ ಮುಖ್ಯಮಂತ್ರಿಯವರು ಹೇಳಿದ ಹೇಳಿಕೆ ಹೇಳುತ್ತೇನೆ. ಅದು ಹೀಗೆ ಇದೆ.

> "Shri Nijalingappa's statement that he shall accept Mahajan Commission's recommendations is not new. When the question came up before the Congress working Committee, the two Chief Ministers had agreed between themselves to accept the recommendations rather than keep the whole issue pending from generation to generation. This point was not Officially made public at the time of the appointment of the Commission for the simple reason that constitutionally it is Parliament which takes final de ission on such issues. Copies of the Mahajan Report have not reached us so far. However, whatever the recommendations might be, they are binding on us."

ಈ ರೀತಿ ವಿ. ಪಿ. ನಾಯ್ಕರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಇದಲ್ಲದೆ ಮಹಾರಾಷ್ಟ್ರದ ಮುಖಂಡರು ಮಹಾಜನ್ ಕಮಿಶನ್ ನೇಮಿಸಿದ್ದಕ್ಕೆ ಆನಂದವನ್ನು ವ್ಯಕ್ತಪಡಿಸಿದ್ದಾರೆ, ಸ್ವಾಗತ ಮಾಡಿದ್ದಾರೆ, ಯಾವ ನಿರ್ಣಯ ಬಂದರೂ ಒಪ್ಪಿಕೊಳ್ಳುತ್ತೇವೆಂದು ಹೇಳಿದ್ದಾರೆ. ಮಾನ್ಯ ಗೃಹ ಮಂತ್ರಿಯವರಾದ ಚವಾಣರು ಸಹ ಅನೇಕ ಕಡೆ ಕಮಿಶನ್ ನೇಮಕ ಮಾಡಿದ್ದು ಒಳ್ಳೆಯದು ಎಂದು ಹೇಳಿದ್ದಾರೆ. ಈ ರೀತಿ ನಿರ್ಣಯ ಬರುವುದಕ್ಕೆ ಮೊದಲು ಮಹಾರಾಷ್ಟ್ರ ಮುಖಂಡರು

(ಶ್ರೀ ಎಸ್. ಶಿವಪ್ಪ)

ಸಹ ಒಪ್ಪಿದ್ದಾರೆ. ಇದಲ್ಲದೆ ಮಹಾಜನ್ ಕಮಿಷನ್ ಬಗ್ಗೆ ಪತ್ರಿಕೆಗಳಲ್ಲೂ ಬಂದ ಕೆಲವು ಅಭಿಪ್ರಾಯಗಳನ್ನು ಈ ಸಮಯದಲ್ಲಿ ಹೇಳುವುದು ಸರಿಯೆಂದು ಕಾಣುತ್ತದೆ.

"They must accept the recommendations as putting the final seal on a controversy........."
(Indian Express)

"Those who seek to wreck the Majajan award by inflaming parochial feelings through fasts unto death or other agitations will be clearly doing a national disservice."
(Hindu)

"All this imparts to the Commission's recommendations the character of an arbitrator's award."
(Hindustan Times)

"All concerned must be warned that no attempt, through Kerala's stand, to vitiate the verdict on Maharashtra's dispute with Mysore will be tolerated."
(Deccan Herald)

ಈ ರೀತಿ ಅನೇಕ ಪತ್ರಿಕೆಗಳು, ಮಹಾಜನರ ಸಿಫಾರಸುಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಇಂಥ ಯೋಗ್ಯವಾದ ಮಹಾಜನ್ ನಿರ್ಣಯ ಬಂದಮೇಲೆ, ಅದನ್ನು ಸಂಪೂರ್ಣವಾಗಿ ಐತೀರ್ಪೆಂದು ಒಪ್ಪಬೇಕೆಂದು ಈ ಸಭೆಯಲ್ಲೂ ಮಾಡಿದ್ದಾರೆ. ಆ ನಿರ್ಣಯವಾಗಿ ಸುಮಾರು ಎರಡು ವರ್ಷವಾದರೂ ಕೇಂದ್ರ ಸರ್ಕಾರದವರು ಸುಮ್ಮನೆ ಇದ್ದು, ಈಗ ಒಮ್ಮಿಂದೊಮ್ಮೆಗೆ ಏಕೆ ಎದ್ದರು ಎಂಬುದನ್ನು ಹಲವು ಸದಸ್ಯರು ಈಗಾಗಲೇ ಹೇಳಿದ್ದಾರೆ. ಅದರಲ್ಲಿ ಅರ್ಥ ಇದೆ. ಮಾನ್ಯ ಮಿತ್ರರಾದ ಕೆ. ಎಚ್. ಪಾಟೀಲರು ಹೇಳಿದರು—ವೀರೇಂದ್ರ ಪಾಟೀಲರು ಬೆಳಗಾಂನಲ್ಲಿ ಮಾಡಿದ ಭಾಷಣದ ಪರಿಣಾಮವಾಗಿ ಈ ರೀತಿಯ ಅವಸರದ ಕ್ರಮವನ್ನು ಕೇಂದ್ರ ಸರ್ಕಾರದಲ್ಲಿ ಪ್ರಧಾನಮಂತ್ರಿಯವರು ತೆಗೆದುಕೊಂಡಿದ್ದಾರೆ, ಎಂದು. ನಾನೂ ಆ ಸಭೆಯಲ್ಲಿ ಭಾಗವಹಿಸಿದ್ದು, ಸಂಪೂರ್ಣವಾಗಿ ಮುಖ್ಯಮಂತ್ರಿಯವರ ಭಾಷಣವನ್ನು ಕೇಳಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—On a point of clarification. ಇವರು ಸಬ್‌ಸ್ಟಿಟ್ಯೂಟ್ ಮೋಶನ್‌ನಲ್ಲಿ ಈ ರೀತಿ ಹೇಳಿದ್ದಾರೆ.

"That the latest moves made by the Government of India to resolve the boundary disputes........."

ನನಗೆ ತಿಳಿದಮಟ್ಟಿಗೆ ಪತ್ರಿಕೆಗಳಲ್ಲಿ ಏನೊಂದು ಊಹಾಪೋಹ ಬಂದಿದೆ, ಅದರ ಪ್ರಕಾರ ನಾವು ಹೇಳುತ್ತಿದ್ದೇವೆ. ಸರಿಯಾದ ವರದಿ ನಮ್ಮ ಮುಂದಿಲ್ಲ. ನಿನ್ನೆ ಮುಖ್ಯಮಂತ್ರಿಯವರು ಹೇಳಿದ್ದಾರೆ, ಕೇಂದ್ರದವರು ಕರಾರುವಾಕ್ಕಾಗಿ ಅಭಿಪ್ರಾಯವನ್ನು ಬರವಣಿಗೆಯ ಮೂಲಕ ತಿಳಿಸದ ಹೊರತು ಅದರ ಬಗ್ಗೆ ಏನೂ ಹೇಳುವುದಕ್ಕಾಗುವುದಿಲ್ಲ ಮತ್ತು ಅಲ್ಲಿಯವರೆಗೆ ಡೆಲ್ಲಿಗೆ ಹೋಗಿ ಮಾತನಾಡುವುದಿಲ್ಲವೆಂದು ಹೇಳಿದ್ದು ನಿನ್ನೆ ಪತ್ರಿಕೆಯಲ್ಲೂ ಬಂದಿದೆ.

ಹೀಗಿರುವಾಗ ಮಾನ್ಯ ಸದಸ್ಯರು ಒಂದು ನಿರ್ಣಯದಲ್ಲಿ ಈ ರೀತಿ ಹೇಳಿದ್ದಾರೆಂಬ ಅಭಿಪ್ರಾಯವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಇದರಿಂದ ಏನಾಗುತ್ತದೆ ಎಂದರೆ ನಮಗೆ ಸರಿಯಾದ ಸಮಾಚಾರ ಏನು ಎಂಬುದು ತಿಳಿಯುತ್ತಿಲ್ಲ. ಇವತ್ತಿನ ದಿವಸದ ಪತ್ರಿಕೆಯಲ್ಲಿ ವರದಿಯಾಗಿದೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪಕ್ಷದ ಸದಸ್ಯರಿಗೆ ಈ ವಿಚಾರದಲ್ಲಿ ಸಂಪೂರ್ಣವಾದಂಥ ವಿಷಯವನ್ನು ಹೇಳಿದ್ದಾರೆ ಎಂಬುದಾಗಿ. ಶುಕ್ರವಾರ ಇದೇ ವಿಷಯವನ್ನು ಚರ್ಚೆಮಾಡಲು ಮಂತ್ರಿಮಂಡಲದವರು ಕ್ಯಾಬಿನೆಟ್ ಮೀಟಿಂಗ್ ಸಹ ಇಟ್ಟುಕೊಂಡಿದ್ದರು. ನಂತರ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕೌಜಲಗಿ ಮತ್ತು ರಾಚಯ್ಯನವರನ್ನು ದೆಹಲಿಗೆ ಕಳಿಸಿದ್ದು, ಅಲ್ಲಿಂದ ಶ್ರೀಮಾನ್ ಕೌಜಲಗಿ ಅವರು ವಾಪಸ್ ಬಂದಿದ್ದು ಮತ್ತು ರಾಚಯ್ಯನವರು ಇನ್ನೂ ಬಾರದೆ

ಇರುವುದು ಇವೆಲ್ಲಾ ಪತ್ರಿಕೆಗಳಲ್ಲಿ ಬರುತ್ತಿವೆ. ನಮಗೆ ಪತ್ರಿಕೆಗಳಲ್ಲಿ ಬರುತ್ತಿರುವ ವಿಷಯಗಳು ತಿಳಿದಿವೆಯೇ ಹೊರತು ಖಚಿತವಾದ ವಿಷಯ ತಿಳಿದಿಲ್ಲ. ಆದ್ದರಿಂದ ತಮ್ಮ ಮೂಲಕ ಮಾನ್ಯ ಸದಸ್ಯರನ್ನು ನಾನು ಕೇಳುವುದು ಇಷ್ಟೆ, ಮಾನ್ಯ ಮುಖ್ಯಮಂತ್ರಿಗಳು ಕೇಂದ್ರಸರ್ಕಾರದ ಅಭಿಪ್ರಾಯವನ್ನು ಖಚಿತವಾಗಿ ತಮ್ಮ ಪಕ್ಷದ ಸದಸ್ಯರಿಗೆ ತಿಳಿಸಿದ್ದರೆ, ಅದರ ಒಂದು ಆಧಾರದಮೇಲೆ ಶ್ರೀಮಾನ್ ಬೊಮ್ಮಾಯಿ ಅವರು ನಿರ್ಣಯ ಮಂಡಿಸಿದ್ದಾರೆಯೇ ಎಂಬದನ್ನು ಅವರು ಹೇಳಬೇಕು. ಆ ರೀತಿ ಖಚಿತವಾಗಿ ವಿಷಯ ತಿಳಿದುಕೊಂಡು ನಿರ್ಣಯ ಮಂಡಿಸಿದ್ದರೆ ನಾವು ಸಹ ನಮ್ಮ ಅಭಿಪ್ರಾಯವನ್ನು ತಿಳಿಸುವುದಕ್ಕೆ ಅವಕಾಶವಾಗುತ್ತದೆ. ಇಲ್ಲದಿದ್ದರೆ ಗಾಳೀ ಸಮಾಚಾರದಮೇಲೆ ನಾವೆಲ್ಲಾ ಇಲ್ಲಿ ಮಾತನಾಡಿದರೆ ಅದು ಬಾಪ್ಪಾ ಪಾರ್ಕಿನಲ್ಲಿ ಭಾಷಣ ಮಾಡಿದಂತಾಗುತ್ತದೆ. ಆದ್ದರಿಂದ ಮತ್ತೊಮ್ಮೆ ತಮ್ಮ ಮೂಲಕ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತಿದ್ದೇನೆ, ಅವರಿಗೆ ವಿಷಯ ಏನು ಎಂಬುದು ಕೂಲಂಕುಷವಾಗಿ ಗೊತ್ತಿದ್ದರೆ, ಅದನ್ನು ಇಲ್ಲಿ ಹೇಳಿದರೆ ಆ ಬಗ್ಗೆ ಶಕ್ತಿಯುತವಾದಂಥ ನಿಲುವನ್ನು ಎಲ್ಲ ಪಕ್ಷಗಳವರೂ ತಳೆಯುವುದಕ್ಕೆ ಮತ್ತು ತಕ್ಕ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಅವಕಾಶವಾಗುತ್ತದೆ.

5-30 P. M.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ಶ್ರೀಮಾನ್ ರಂಗನಾಥ್ ಅವರು ಕೇಳಿದ ಪ್ರಶ್ನೆಗೆ ಉತ್ತರ ಕೊಡುವುದಾದರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪಕ್ಷದ ಸಭೆಯಲ್ಲಿ ಯಾವುದೇ ಗುಟ್ಟಿನ ವಿಷಯವನ್ನೂ ಸಹ ಹೇಳಲಿಲ್ಲ. ಕೇಂದ್ರ ಸರ್ಕಾರದಿಂದ ಇಂತಹ ಪ್ರಪೋಸಲ್ಸ್ ಬಂದಿದೆ ಎಂಬುದನ್ನು ಸಹ ಹೇಳಲಿಲ್ಲ. ನಾನೂ ಸಹ ಪತ್ರಿಕೆಗಳಲ್ಲಿ ಬರುತ್ತಿರುವ ವಿಷಯಗಳನ್ನು ಓದುತ್ತಿದ್ದೇನೆ. ಈ ವಿಷಯವಾಗಿ ಹಿಂದೂಸ್ಥಾನದ ಎಲ್ಲಾ ಪತ್ರಿಕೆಗಳಲ್ಲಿಯೂ ವರದಿ ಬರುತ್ತಿದೆ. ಮಹತ್ವವಾದ ವಿಷಯಗಳು ಏನು, ಕೇಂದ್ರ ಸರ್ಕಾರದವರು ಮಹರಾಷ್ಟ್ರದವರಿಗೆ ತಿಳಿಸಿದ್ದು ಏನು, ಮೈಸೂರು ಸರ್ಕಾರಕ್ಕೆ ತಿಳಿಸಿದ್ದು ಏನು ಎಂಬುದು ಕೆಲವು ದಿನಗಳಿಂದ ಪತ್ರಿಕೆಗಳಲ್ಲಿ ಬರುತ್ತಿದೆ. ಅದೇ ಆಧಾರದಮೇಲೆ ಶ್ರೀ ವಿ. ಎನ್. ಪಾಟೀಲರು ಒಂದು ಠರಾವನ್ನು ತಂದಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಇವತ್ತಿನ ಪತ್ರಿಕೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪಕ್ಷದ ಸದಸ್ಯರಿಗೆ ಕೇಂದ್ರ ಸರ್ಕಾರದ ಅಭಿಪ್ರಾಯವನ್ನು ತಿಳಿಸಿದ್ದಾರೆಂದು ವರದಿ ಬಂದಿದೆ. ಆ ರೀತಿ ಏನಾದರೂ ತಿಳಿಸಿದ್ದರೆ, ಅದನ್ನು ಇಲ್ಲಿ ಹೇಳಿದರೆ ನಮಗೂ ಅನುಕೂಲವಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈಗ ಪತ್ರಿಕೆಗಳಲ್ಲಿ ಬಂದಿರುವ ಅಭಿಪ್ರಾಯದ ಪ್ರಕಾರ ಮಾತನಾಡುತ್ತಿದ್ದೇನೆ. ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನನ್ನೂ ಸಹ ನಮಗೆ ತಿಳಿಸಿಲ್ಲ. ಕೆಲವು ದಿನಗಳ ಹಿಂದೆ ಬೆಳಗಾಂನಲ್ಲಿ ನಡೆದ ಭಾಷಣದ ಪರಿಣಾಮವಾಗಿ ಈ ಒಂದು ಪರಿಸ್ಥಿತಿ ಒಮ್ಮಿಂದೊಮ್ಮೆಗೆ ಪ್ರಾರಂಭವಾಯಿತು ಎನ್ನತಕ್ಕಂಥ ಮಾತನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಬೆಳಗಾಂನಲ್ಲಿ ನಮ್ಮ ಮುಖ್ಯಮಂತ್ರಿಗಳು ಮಾಡಿದ ಭಾಷಣವನ್ನು ನಾನು ಕೇಳಿದ್ದೇನೆ. ಅವರ ಭಾಷಣದಲ್ಲಿ ಪ್ರಧಾನಮಂತ್ರಿಗಳನ್ನು ಅವಹೇಳನ ಮಾಡುವಂತಹ ವಿಷಯವಾಗಲೀ ಅಥವಾ ಅವರ ಸ್ಥಾನಕ್ಕೆ ಅವಹೇಳನ ಮಾಡುವಂತಹ ವಿಷಯವಾಗಲೀ ಇರಲಿಲ್ಲ. ಗಡಿ ಭಾಗದಲ್ಲಿರುವ ಕನ್ನಡ ನಾಡಿನ ಜನತೆಯನ್ನು ರಕ್ಷಣೆ ಮಾಡುವುದಾಗಿ ಭರವಸೆ ಕೊಟ್ಟರು. ಆ ರೀತಿ ಭರವಸೆ ಕೊಡುವುದು ಮುಖ್ಯಮಂತ್ರಿಗಳ ಕರ್ತವ್ಯ. ಹಿಂದೆ ಇದೇ ಸಭೆಯಲ್ಲಿ ಮಹಾಜನ್ ವರದಿಯನ್ನು ಒಪ್ಪಿಕೊಳ್ಳಬೇಕೆಂದು ಠರಾವ್ ಮಾಡಿ ಕಳಿಸಿದಮೇಲೆ ಆ ಬಗ್ಗೆ ಕೇಂದ್ರದವರು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಹಿಂದೆ ಅನೇಕ ಸಲ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಗಡಿ ಬಗ್ಗೆ ಕೇಂದ್ರ ಸರ್ಕಾರದ ಮುಂದೆ ಪ್ರಸ್ತಾಪ ಮಾಡಿದಾಗಲೂ ಕೂಡ ಅದನ್ನು ತೀರ್ಮಾನ ಮಾಡಲಿಲ್ಲ. ಈಗ ಒಮ್ಮಿಂದೊಮ್ಮೆಗೆ ಈ ಪ್ರಶ್ನೆಯನ್ನು ಎತ್ತಿಕೊಂಡಿರುವುದಕ್ಕೆ ಕಾರಣವಾದರೂ ಕೂಡ ಏನು ? ಪಾರ್ಲಿಮೆಂಟ್ ಪ್ರಾರಂಭವಾಗುವ ಮುನ್ನಾದಿವಸ ಇಬ್ಬರು ಅಧಿಕಾರಿಗಳನ್ನು ಪ್ರಧಾನಮಂತ್ರಿಗಳು ನಮ್ಮ ರಾಜ್ಯಕ್ಕೆ ಕಳಿಸುವ ಉದ್ದೇಶವಾದರೂ ಕೂಡ ಏನಿತ್ತು ? ಇಂತಹ ಪ್ರಶ್ನೆಗಳು ಬಂದಾಗ ಯಾವಾಗಲೂ ಕೇಂದ್ರದ ಮಂತ್ರಿಗಳು ರಾಜ್ಯದ ಮಂತ್ರಿಗಳೊಡನೆ ಸಮಾಲೋಚನೆ ಮಾಡುವುದು ಒಂದು ಸಂಪ್ರದಾಯ. ಆದರೂ ಕೂಡ ಇಷ್ಟೊಂದು ಅವಸರದಿಂದ ಅಧಿಕಾರಿಗಳನ್ನು ಇಲ್ಲಿಗೆ ಕಳಿಸಬೇಕಾದ ಕಾರಣವಾದರೂ ಕೂಡ ಏನಿತ್ತು. ಇದರಲ್ಲಿ ಏನೋ ರಾಜಕೀಯ ಇದೆ ಎಂದು ಹೇಳುತ್ತೇನೆ. ಮೈಸೂರು ಸರ್ಕಾರ ಸಿಂಡಿಕೇಟ್ ಸರ್ಕಾರವಾಗಿದ್ದು, ಕೇಂದ್ರಸರ್ಕಾರಕ್ಕೆ ಅಂದರೆ ಇಂಡಿಕೇಟ್ ಸರ್ಕಾರಕ್ಕೆ ಬೆಂಬಲ ಕೊಡಲಿಲ್ಲ ಎಂಬ ಕಾರಣದಿಂದ ಈ ಸಿಂಡಿಕೇಟ್ ಸರ್ಕಾರ

(ಶ್ರೀ ಎಸ್. ಆರ್. ಬೊಮ್ಮಾಯಿ)

ವನ ಉರುಳಿಸುವುದಕ್ಕೆ ಕೇಂದ್ರವೊಂದು ಒತ್ತಡಗಳ ಮೂಲಕ ಸಂಚು ನಡೆಸುತ್ತಿದ್ದಾರೆಂದು ಹೇಳುತ್ತೇನೆ. ಶ್ರೀಮತಿ ಇಂದಿರಾಗಾಂಧಿಯವರು ಬಿಹಾರ್ ರಾಜ್ಯದಲ್ಲಿ ಏನು ಮಾಡಿದ್ದಾರೆ, ಉತ್ತರ ಪ್ರದೇಶದಲ್ಲಿ ಏನು ಮಾಡಿದ್ದಾರೆ ಎಂಬುದನ್ನು ನೋಡುತ್ತಿದ್ದೇವೆ. ಅದೇ ರೀತಿ ಮೈಸೂರಿನಲ್ಲಿಯೂ ಕೂಡ ಮಾಡುವುದಕ್ಕೆ ಹೊರಟ್ಟಿದ್ದಾರೆ. ಒಂದು ಜನಾಂಗದ ಭವಿಷ್ಯವನ್ನು ನಿರ್ಧಾರ ಮಾಡುವಾಗ ರಾಜಕೀಯವನ್ನು ಉಪಯೋಗಿಸುವುದು ಸರಿಯಲ್ಲ. ರಾಜಕೀಯ ಮುಖಂಡರು ಯಾರೇ ಇರಲಿ, ಅವರಿಗೆ ಅಧಿಕಾರ ಎಂಬುದು ನಿರಂತರವಾಗಿ ಇರುವುದಿಲ್ಲ. ಅಧಿಕಾರಿಯಲ್ಲಿರುವಾಗ ಪ್ರಜಾಪ್ರಭುತ್ವವನ್ನು ಉಳಿಸಬೇಕಾದರೆ ಜನಾಭಿಪ್ರಾಯವನ್ನು ತಿಳಿದುಕೊಂಡು ಅದರಂತೆ ನಡೆಯುವುದು ಅವರ ಕರ್ತವ್ಯ. ಪ್ರಜಾಪ್ರಭುತ್ವದಲ್ಲಿ ಜನರಿಗೆ ವಿರುದ್ಧವಾಗಿ ಯಾವುದೇ ನಿರ್ಣಯವನ್ನು ಜನತೆಯ ಮೇಲೆ ಹೇರುವುದಕ್ಕೆ ಹೋಗುವುದು ಸರಿಯಲ್ಲ. ಅದನ್ನು ಕನ್ನಡದ ಜನತೆ ಸಹಿಸುವುದಿಲ್ಲ. ಆ ರೀತಿ ಏನಾದರು ಮಾಡಿದರೆ ಅದಕ್ಕೆ ಸರಿಯಾದ ಉತ್ತರ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳಾದ ವೀರೇಂದ್ರಪಾಟೀಲರು ಇಂತಹ ಸಮಯದಲ್ಲಿ ಕನ್ನಡದ ಜನತೆಗೆ ಸರಿಯಾದ ಮಾರ್ಗದರ್ಶನ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಅವರು ಕನ್ನಡದ ಹಿತರಕ್ಷಣೆ ಮಾಡಬೇಕು ಮತ್ತು ಕೇಂದ್ರ ಸರ್ಕಾರಕ್ಕೆ ಸರಿಯಾದ ಉತ್ತರ ಕೊಡುವುದಕ್ಕೆ ತಯಾರಾಗಬೇಕು. ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಶಿವಪ್ಪನವರು ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಉತ್ತಮವಾಗಿ ಹೇಳಿದ್ದಾರೆ. ಮತ್ತು ಶ್ರೀಮಾನ್ ಗೋಪಾಲಗೌಡರು ತಮ್ಮ ಸಹ ಒಂದು ನಿರ್ಣಯದ ಮೂಲಕ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ರಾಜ್ಯದ ಹಿತದೃಷ್ಟಿಯಿಂದ, ಕನ್ನಡಿಗರ ಹಿತದೃಷ್ಟಿಯಿಂದ ಈ ಸಭೆ ಒಂದು ಏಕ ಮತದಿಂದ ನಿರ್ಧಾರಕ್ಕೆ ಬರಲು ಅನುವುಮಾಡಿಕೊಡಬೇಕೆಂದು ಇಂಡಿಕೇಟ್‌ನ ನಾಯಕರಾದ ಶ್ರೀಮಾನ್ ಸಿದ್ಧವೀರಪ್ಪನವರನ್ನು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಆರ್. ದಯಾನಂದಸಾಗರ್.—ಹಾಗಾದರೆ ನಮ್ಮ ನಾಯಕರ ಠರಾವನ್ನೇ ತಾವು ಏತಕ್ಕೆ ಅನುಮೋದಿಸಬಾರದು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಶ್ರೀಮಾನ್ ಗೋಪಾಲಗೌಡರ ಠರಾವಿಗೆ ಬೆಂಬಲ ಕೊಟ್ಟರೆ ನಾನು ನನ್ನ ಠರಾವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ನಾನು ತಯಾರು ಇದ್ದೇನೆ. ಶ್ರೀಮಾನ್ ಸಿದ್ಧವೀರಪ್ಪನವರ ಠರಾವಿಗೆ ಏತಕೆ ಸಪೋರ್ಟ್ ಮಾಡಬಾರದು ಎನ್ನುವುದಕ್ಕೆ ಕಾರಣ ಇಷ್ಟೆ. ಈಗಾಗಲೇ ಈ ಮನೆಯವರು ಒಂದು ನಿರ್ಣಯಕ್ಕೆ ಬಂದಿದ್ದೇವೆ. 1967ನೇ ಇಸವಿಯಲ್ಲಿ ಮಹಾಜನ್ ಕಮಿಷನ್ನಿನ ಅವಾರ್ಡ್‌ನ್ನು ಐತೀರ್ಪೆಂದು ಪರಿಗಣಿಸಿ ಅದನ್ನು ಒಪ್ಪಿಕೊಳ್ಳಬೇಕೆಂದು ಈ ಮನೆಯವರು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದಾರೆ. ಈಗ ನಾವು ಅದನ್ನು ಬದಲಾಯಿಸಿದರೆ ಅದು ವಿರೋಧವಾಗುತ್ತದೆ. ಈ ದೃಷ್ಟಿಯಿಂದ ನಾನು ಶ್ರೀಮಾನ್ ಸಿದ್ಧವೀರಪ್ಪನವರ ಠರಾವಿಗೆ ವಿರೋಧವನ್ನು ವ್ಯಕ್ತ ಮಾಡುತ್ತೇನೆ. ಈ ವಿಷಯದಲ್ಲಿ ನಾವು ಒಮ್ಮೆ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಮತ್ತೆ ನಾವು ಹಿಂದಕ್ಕೆ ಬಂದರೆ ಅದು ಸರಿ ಕಾಣುವುದಿಲ್ಲ. ಕನ್ನಡ ನಾಡಿನ ಹಿತದೃಷ್ಟಿಯಿಂದ ಶ್ರೀಮಾನ್ ಗೋಪಾಲಗೌಡರು ತಂದಿರತಕ್ಕ ಠರಾವಿಗೆ ಎಲ್ಲರೂ ಬೆಂಬಲ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಶ್ರೀಮಾನ್ ಸಿದ್ಧವೀರಪ್ಪನವರ ನಿರ್ಣಯವನ್ನು ಒಪ್ಪಿಕೊಳ್ಳುವುದಾದರೆ ನಿಪ್ಪಾಣಿ ಹಾಗೂ ಇನ್ನೂ ಕೆಲವು ಹಳ್ಳಿಗಳು ನಮಗೇ ಉಳಿದುಕೊಳ್ಳುತ್ತವೆ. ಆದ್ದರಿಂದ ಶ್ರೀಮಾನ್ ಸಿದ್ಧವೀರಪ್ಪನವರು ತಂದಿರತಕ್ಕ ನಿರ್ಣಯ ಪ್ರಗತಿದಾಯಕವಾಗಿದೆಯೋ ಅಥವಾ ಶ್ರೀಮಾನ್ ಗೋಪಾಲಗೌಡರು ತಂದಿರತಕ್ಕ ನಿರ್ಣಯ ಪ್ರಗತಿದಾಯಕವೋ ಎಂಬುದನ್ನು ಮಾನ್ಯ ಸದಸ್ಯರು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಒಪ್ಪತಕ್ಕ ಮಾತು ಅಲ್ಲ. ಮಹಾಜನ್ ಕಮಿಷನ್ ಅನ್ನು ನೇಮಕ ಮಾಡಿ ಅವರು ಈಗಾಗಲೇ ವರದಿ ಮಾಡಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಹೇಳತಕ್ಕಂಥ ಮಾತು ಈಗಾಗಲೇ ಹಳೆಯ ಮಾತಾಗಿದೆ. ಕೇಂದ್ರ ಸರ್ಕಾರದವರು ಶ್ರೀಮಾನ್ ಸಿದ್ಧವೀರಪ್ಪನವರು ತಂದಿರತಕ್ಕ ನಿರ್ಣಯವನ್ನು ಮೀರಿ ಬೇರೆ ನಿರ್ಣಯವನ್ನು ತೆಗೆದುಕೊಳ್ಳುವುದಿಲ್ಲ ಎನ್ನುವ ಮಾತನ್ನು ಹೇಳಿದ್ದರೆ ನಾವು ಅವರ ನಿರ್ಣಯವನ್ನು ಒಪ್ಪಿಕೊಳ್ಳಬಹುದಾಗಿತ್ತು. ಶ್ರೀಮಾನ್ ಸಿದ್ಧವೀರಪ್ಪನವರು ಅವರ ನಿರ್ಣಯದ ಪ್ರಕಾರ ಮಹಾರಾಷ್ಟ್ರದವರನ್ನೂ ಮತ್ತು ಪ್ರಧಾನಿಯವರನ್ನೂ ಒಪ್ಪಿಸುತ್ತೇನೆ ಎನ್ನುವ ಭರವಸೆಯನ್ನು ಕೊಟ್ಟರೆ ನಾನು ಅವರ ನಿರ್ಣಯವನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಮಹಾಜನ್ ಕಮಿಷನ್ ರಿಪೋರ್ಟನ್ನು ಮಹಾರಾಷ್ಟ್ರದವರು ಒಪ್ಪಿದರೆ ಈ ನಿರ್ಣಯಕ್ಕೆ ನಾನು ನನ್ನ ಬೆಂಬಲವನ್ನು ಕೊಡುತ್ತೇನೆ. ನಾನು ನನ್ನ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ನಮ್ಮ ಮುಂದಿರತಕ್ಕ ಪ್ರಶ್ನೆಯನ್ನು ಯಾವುದೇ ರಾಜಕೀಯ ಮತ್ತು ಪಕ್ಷದ ದೃಷ್ಟಿಯಿಂದ ನೋಡದೆ, ಯಾವುದೇ ರಾಜಕೀಯ ಲಾಭದ ದೃಷ್ಟಿಯಿಂದ ನೋಡದೆ, ಸಮಗ್ರ ಕನ್ನಡಿಗರ ಹಿತದೃಷ್ಟಿಯಿಂದ ಶ್ರೀಮಾನ್ ಗೋಪಾಲಗೌಡರು ತಂದಿರತಕ್ಕ ನಿರ್ಣಯಕ್ಕೆ ನಾವು ಬೆಂಬಲಕೊಡೋಣ. ನಾವೆಲ್ಲರೂ ಪಕ್ಷದ ಮುಖಾಂತರ ದೆಹಲಿಗೆ ಹೋಗಿ ಪ್ರಧಾನ ಮಂತ್ರಿಗಳಿಗೆ, ಕೇಂದ್ರಸರ್ಕಾರದ ಮಂತ್ರಿಗಳಿಗೆ, ಪಾರ್ಲಿಮೆಂಟ್ ಸದಸ್ಯರಿಗೆ ನಮ್ಮ ಹಕ್ಕುಬಾಧ್ಯತೆಗಳು ಯಾವರೀತಿ ನ್ಯಾಯಬದ್ಧವಾಗಿವೆ ಎಂಬುದನ್ನು ತಿಳಿಸಿ ನನಗೆ ಅನ್ಯಾಯ ಮಾಡತಕ್ಕದ್ದು ಸರಿಯಲ್ಲ ಎಂದು ಅವರಿಗೆ ಮನವರಿಕೆ ಮಾಡಿಕೊಡಬೇಕು ಮತ್ತು ನಮ್ಮ ಮೈಸೂರಿನ ಕೇಸು ಏನಿದೆ ಇದರ ಬಗ್ಗೆ ಸರಿಯಾದ ಅಂಕಿ ಅಂಶಗಳು ಮತ್ತು ಕಾಗದ ಪತ್ರಗಳನ್ನು ತೆಗೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳಿಗೆ ಕೇಂದ್ರಸರ್ಕಾರದ ಮಂತ್ರಿಗಳಿಗೆ ಮತ್ತು ಪಾರ್ಲಿಮೆಂಟ್ ಸದಸ್ಯರಿಗೆ ಮನವರಿಕೆ ಮಾಡಿಕೊಡಬೇಕು. ಈ ದೃಷ್ಟಿಯಿಂದ ಎಲ್ಲರೂ ಒಗ್ಗಟ್ಟಾಗಿ ಒಂದು ನಿರ್ಣಯವನ್ನು ಪಾಸು ಮಾಡೋಣ. ದೆಹಲಿಗೆ ಹೋಗೋಣ. ಕಾರ್ಯವನ್ನು ಸಾಧನೆ ಮಾಡೋಣ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri H. SIDDAVEERAPPA.—I want to know whether my resolution in any way impairs or is lesser in being beneficial to this State when compared with Mahajan Commission's report ?

ಉಪಾಧ್ಯಕ್ಷರು.—ಇವೊತ್ತು ಯಾರು ಮೋಷನ್ ಮೂವ್ ಮಾಡಿದ್ದಾರೆ ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ಅಧ್ಯಕ್ಷರು ಹೇಳಿದ್ದಾರೆ.

Sri H. N. NANJEGOWDA.—I want to know why I have not been given a chance. Is it because I moved a no confidence motion that I should be curbed ? I moved a motion yesterday. Sri Bommai moved the motion to-day. He is given a chance.

Sri H. SIDDAVEERAPPA.—Normally Sri Nanje Gowda should have been the first to speak to-day because his motion was moved yesterday.

Mr. DEPUTY SPEAKER.—He may get a chance tomorrow.

Sri H. N. NANJE GOWDA.—I want to know whether I am disqualified to participate in the debate. Mr. Speaker has got something against me.

ಶ್ರೀ ಎಚ್. ಎಂ. ಚನ್ನಬಸಪ್ಪ.—ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಯಾರಿಂದ ಮೋಷನ್ ಬಂದಿದೆ ಅವರಿಗೆ ಮೊದಲು ಮಾತನಾಡುವುದಕ್ಕೆ ಅವಕಾಶವನ್ನು ಕೊಡತಕ್ಕದ್ದು ಧರ್ಮ ಮತ್ತು ಉಚಿತ. ಪ್ರಯಾರಿಟಿ ಪ್ರಕಾರ 1, 2, 3, 4, ಹೀಗೆ ಅವಕಾಶವನ್ನು ಕೊಡದೆ ಮೊದಲು ಕೊಟ್ಟಿದ್ದವರನ್ನು ತಳ್ಳಿ ಹಾಕುವುದು ವಿಧಿನಿಯಮಪದ್ಧತಿಗೆ ಸರಿಯಲ್ಲ.

Sri H. N. NANJE GOWDA.—I cannot tolerate this insinuation.

Mr. DEPUTY SPEAKER.—It is not an insinuation.

Sri H. N. NANJE GOWDA.—What else then ?

Mr DEPUTY SPEAKER.—The Speaker specifically stated that all the movers of the substitute motions should speak first. After Sri Srikantiah, the Hon. Member Sri H. N. Nanje Gowda may speak.

Sri H. N. NANJE GOWDA.—I want to know the purpose behind it. Though I was the first mover of the motion, I have not been given an opportunity. ನಾನು ಈ ಬಗ್ಗೆ ಚೀಟಿಯನ್ನು ಕೂಡ ಬರೆದು ಅಧ್ಯಕ್ಷರಿಗೆ ಕಳುಹಿಸಿಕೊಟ್ಟಿದ್ದೇನೆ. How am I inferior to others? Why my name was not called? What are my disqualification.

ಉಪಾಧ್ಯಕ್ಷರು.—ಎಲ್ಲರಿಗೂ ಅವಕಾಶ ಕೊಡುತ್ತೇನೆ, ಸಭೆಯು ಕಾಲವನ್ನು ದಯವಿಟ್ಟು ತೆಗೆದುಕೊಳ್ಳಬೇಡಿ.

ಶ್ರೀ ಎಚ್. ಎನ್. ನಂಜೇಗೌಡ.—ನಾನು ಒಂದು ವಿಷಯವನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕಾಗಿದೆ. As a loyal member of the party I am keeping quiet with three of my colleagues. There must be some reason for not calling my name. I think the Speaker wants to take a revenge because I moved a 'no confidence motion against the Speaker. That feeling has crept in me on account of the conduct of the Speaker.

Mr. DEPUTY SPEAKER.—Hon'ble Member is entitled to have his own feeling.

Sri H. N. NANJE GOWDA.—I am always right. I kept quiet because the leaders were obliged to have first opportunity.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ಅಧ್ಯಕ್ಷರೇ, ಈ ದಿವಸ ಈ ವಿಷಯದಲ್ಲಿ ಮಾತನಾಡುವಾಗ ನಾವು ತುಂಬಾ ಭಾರವಾದ ಹೃದಯದಿಂದ ಮಾತನಾಡಬೇಕಾಗಿದೆ. ಇದು ಎಷ್ಟು ಗಹನವಾಗಿದೆಯೋ ಅಷ್ಟೇ ಪ್ರಮಾಣದಲ್ಲಿ ನಮ್ಮ ರಾಜ್ಯ ಅಂತಹ ಒಂದು ಚಿಂತಾಜನಕ ಪರಿಸ್ಥಿತಿಯಲ್ಲಿ ಇದೆ. 'ಕೆಡಕು' ಎಂಬ ಶಬ್ದವನ್ನು ಉಪಯೋಗ ಮಾಡಿದರೆ ಉತ್ಪ್ರೇಕ್ಷೆಯಾಗುವುದಿಲ್ಲ.

Sri H. SIDDAVEERAPPA.—Sir, I learnt that my friend Sri Srikantaiah gave his motion just a few minutes before the Assembly commenced. According to rules, it should have been given two hours before. I want to know whether any rule has been suspended. The grievance of Sri Nanje Gowda is justifiable because he moved his motion yesterday.

[MR. SPEAKER in the Chair]

Sri H. M. CHANNABASAPPA.—Sir, I rise to a Point of Order. You were pleased to order that the motions will be moved by the respective movers in the order of priority and it was no doubt reasonable, and the House also agreed. My friend Sri Nanje Gowda's motion was the first and it was moved yesterday, and he has indicated his mind in writing to the Hon. Speaker that he is ready to speak, not only yesterday, but also by letters to the Speaker twice today. His contention is that he has been specifically ignored although he has been waiting for the calling from the Speaker. I learn from my esteemed friend Sri Siddaveerappa now that the motion of my friend Sri L. Srikantaiah has been tabled only today and if that motion had to be admitted, because it was out of time, the relevant rule had to be suspended by the Speaker and then it should have been admitted. So far as I know, nothing of that kind has been done. So the admission of the motion today is not in order and the calling of other members other than Sri Nanje Gowda is also not in order. In the fitness of things, the Speaker should stick to the procedure prescribed by the

Speaker himself, and it would not be in order if things go the other way.

Mr. SPEAKER.—I understand the problem. In all fairness, I think Sri Nanje Gowda should have been permitted to speak to day. Since Sri Srikantaiah has already commenced, let him finish.

Sri H. SIDDAVEERAPPA.—The very motion by Sri L. Srikantaiah is not legally moved. I want to know whether the rule had been suspended.

Mr. SPEAKER.—I will explain the position. These substitute motions are governed by Rule 279—the motions moved today by the Hon. Member Sriyuths H. Siddaveerappa, S. Gopal Gowda and other members. Most of these motions were brought to me just this morning. Rule 279 says :—

> " A motion that the policy or situation or statement or any other matter be taken into consideration shall not be put to the vote of the Assembly, but the Assembly shall proceed to discuss such matter immediately after the mover has concluded his speech and no further question shall be put at the conclusion of the debate at the appointed hour unless a member moves a substantive motion in appropriate terms to be approved by the Speaker and the vote of the Assembly shall be taken on such motion."

These substitute motions were moved when the debate on the original motion was under consideration.

Sri H. SIDDAVEERAPPA.—If that is the view that you are holding, then the substitute motions that have been moved by myself, Sri Gopala Gowda, Sri S. R. Bommai and Sri L. Srikantaiah shall not be put to the vote of the House under rule 279 in which case, the only motion that could be put to vote would be the motion moved by Sri V. N. Patil, and Sri M. Nagappa. We have given our motions two hours prior to the commencement of the session and if you say that it is a substitute motion and if they were to come under rule 279 they cannot be subject to the vote of the House.

6-00 P.M.

Sri M. NAGAPPA.—Sir, I differ from the hon. Member Sri Siddaveerappa. The latter portion of the rule 279 says that if a substantive motion is moved then the vote of the House is to be taken, not otherwise.

Mr. SPEAKER.—I quite agree with the hon. Member Sri Nagappa. Rule 279 provides that when there is a motion it has only to be taken into consideration and discussed upon immediately after the mover has concluded his speech. If the said motion is to be put to vote a substantive or substitute motion has to be moved to the main motion. All these substitute motions have properly been admitted and there is nothing

(MR. SPEAKER)

wrong in it. I am sorry, I should have permitted hon. Member Sri Nanje Gowda to speak in the beginning itself, but now since the hon. Member Sri Srikantaiah is here I will allow him to speak and thereafter hon. Member Sri Nanje Gowda may speak.

Sri H. N. NANJE GOWDA.—Sir, I want to know about my half-an-hour discussion. It is already six of the clock. It has to be taken up at 6 P.M.

Mr. SPEAKER.—I have discussed the matter with the Whips. If the House agrees we could sit for an hour more to-day. The half-an-hour discussion could be taken up thereafter.

Sri H. SIDDAVEERAPPA.—No, Sir. If the Chair does not want us we will not sit here. Myself and my party is not agreeable to extension of time. I want to make one point clear. This very vital issue of border dispute could have waited until something in writing had been received by the Leader of the House. Tomorrow also we could continue discussion on this vital issue and let all the members who want to participate in the discussion be permited to speak.

Mr. SPEAKER.—Allright, I will put the motion to the vote of the House. The question is :

"Is it the pleasure of the House to devote tomorrow also for discussion on the motion *re* : border dispute."

HON. MEMBERS.—Yes.

Mr. SPEAKER.—I request the Hon. Members to see that atleast by tomorrow the debate on this motion is completed. Now, next item is half-an-hour discussion. I call upon hon. Member Sri Nanje Gowda.

Half-an-Hour discussion arising out of Replies to Starred Question No. 80 *re:* Kambadakada Reservoir Project

†ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಅಧ್ಯಕ್ಷರೇ, ಪ್ರಶ್ನೆ 80 ಕ್ಕೆ ಉತ್ತರ ಕೊಡುವಾಗ ಕಂಬದಕಡದ ಪ್ರಾಜೆಕ್ಟಿನ ಬಗ್ಗೆ ಕೆಲವು ಅಂಶಗಳನ್ನು ತಿಳಿಸಿದ್ದಾರೆ. ಕೆಲವು ಸಂಶಯಗಳಿವೆ. ಅವನ್ನು ನಿವಾರಣೆ ಮಾಡಿಕೊಳ್ಳಲು ನಾನು ಅರ್ಧ ಗಂಟೆಯ ಚರ್ಚೆಗೆ ಅವಕಾಶ ಕೇಳಿದ್ದೆ. ಮಾನ್ಯ ಸರಕಾರದವರು ಕಂಬದಕಡ ಯೋಜನೆಯನ್ನು ಕೈಕೊಂಡು ಕಾರ್ಯಗತ ಮಾಡುವರೇ ಅಥವ ಇಲ್ಲವೇ ಎಂದು ಸಂಬಂಧಪಟ್ಟ ಜನರ ಪರವಾಗಿ ತಿಳಿಯಲು ನಾನು ಈ ಚರ್ಚೆಯನ್ನು ಪ್ರಾರಂಭಿಸುತ್ತಿದ್ದೇನೆ. ಇದಕ್ಕೆ ತಾಂತ್ರಿಕ ಸಮಿತಿಯವರು ಒಪ್ಪಿದ್ದಾರೆಂಬುದು ಪತ್ರಿಕೆಯಲ್ಲಿ ಪ್ರಕಟವಾಗಿತ್ತು ಈ ವಿಷಯ ಈ ಸಭೆಯಲ್ಲಿ ಚರ್ಚೆಯಾಗಿದೆ. ಮಾನ್ಯ ಶಿವಪ್ಪನವರು ಸೂಚನೆಯ ಪ್ರಕಾರ ಮುಖ್ಯ ಮಂತ್ರಿಗಳು ಎರಡು ಸಮಿತಿಗಳನ್ನು ಮಾಡಿದರು, ಒಂದು ಸಮಿತಿಯವರು ಪೂರ್ಣ ವರದಿಯನ್ನು ಕೊಟ್ಟಿದೆ, ಹಣಕಾಸಿನ ಸಮಿತಿ ಮಧ್ಯಕಾಲೀನ ವರದಿಯನ್ನು ಸಲ್ಲಿಸಿದೆ ಎಂದು ನಮಗೆ ತಿಳಿದು ಬಂದಿದೆ.